ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



'ದುಡಿಯುವ ಜನರ ಹೀರೋ'
ಆಗಿದ್ದ
ಜಾರ್ಜ್ ಫೆರ್ನಾಂಡೀಸ್

ಸಂಪುಟ 13 | ಸಂಚಿಕೆ 6 | ಫೆಬ್ರವರಿ 4–10, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಅಂಗನವಾಡಿ ಅವ್ವಂದಿರ ರಣಕಹಳೆ







ಬಂಗಾಲ ಬರ 1943



ಚುನಾವಣಾ ಜುಮ್ಲಾ ಬಜೆಟ್

ಬಡ್ತಿ ಮೀಸಲಾತಿ ಜಾರಿ ನಿರ್ಣಯ ಸ್ವಾಗತಾರ್ಹ





ಹುಷಾರ್! ವೆನುಜುವೇಲಾ ಮುಟ್ಟಬೇಡಿ!!

ಕೇಂದ್ರ ಬಜೆಟ್ 2019–20: ಒಂದು ಚುನಾವಣಾ ಜುಮ್ಲಾ – ಸಿಪಿಐ(ಎಂ)ಪೊಲಿಟ್‌ಬ್ಯುರೊ

ಮೋದಿ ಸರಕಾರದ ದಿವಾಳಿಕೋರತನದ ಮತ್ತೊಂದು ಪ್ರತಿಬಿಂಬ

ಮೋದಿ ಸರಕಾರ ಈಗ ಮಾಹಿತಿಗಳನ್ನು ಅಡಗಿಸುವಲ್ಲಿ ಮತ್ತು ತಿರುಚುವಲ್ಲಿ ಜನಗಳಿಗೆ ಜುಮ್ಲಾಗಳನ್ನು ಉಣಬಡಿಸುವಲ್ಲಿ ಹೆಸರುವಾಸಿಯಾಗಿ ಬಿಟ್ಟಿದೆ. 2019–20ರ ಮಧ್ಯಂತರ ಬಜೆಟ್ ಇದೇ ದಾಟಿಯಲ್ಲಿರುವ ಇನ್ನೊಂದು ಕಸರತ್ತು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಮೋದಿ ಸರಕಾರ ಇಂದು ಮಂಡಿಸಿದ ಬಜೆಟನ್ನು ವರ್ಣಿಸಿದೆ.

ಈ ಬಜೆಟಿನಲ್ಲಿರುವ ಹೊಸ ಬೊಗಳೆಗಳ ಬಗ್ಗೆ ವಿಮರ್ಶಿಸುತ್ತ ಕೇಂದ್ರ ಬಜೆಟ್ 2019–20 ಮೋದಿ ಸರಕಾರದ ದಿವಾಳಿಕೋರತನದ ಮತ್ತೊಂದು ಪ್ರತಿಬಿಂಬವಾಗಿದೆ. ಎಷ್ಟೇ ಕತೆ ಹೊಸೆದರೂ ರೈತರ ಸಂಕಟ ಅಥವ ಜನಗಳು ವಾಸ್ತವವಾಗಿ ಅನುಭವಿಸುತ್ತಿರುವ ಬಡತನ ಮತ್ತು ಉದ್ಯೋಗಹೀನತೆಯನ್ನು ಅದು ನಿವಾರಿಸಲಾರದು. ಈ ಕರಾಳ ವಾಸ್ತವತೆ 2019ರ ಚುನಾವಣಾ ತೀರ್ಪಿನಲ್ಲಿ ಎದ್ದು ಕಾಣಲಿದೆ ಎಂದು ಸಿಪಿಐಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.



ಸಿಪಿಐ(ಎಂ) ಪೊಲಿಟ್‌ಬ್ಯುರೊ ಇಂದು (ಫೆಬ್ರುವರಿ 1ರಂದು) ನೀಡಿರುವ ಹೇಳಿಕೆಯ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಮೋದಿ ಸರಕಾರ ಈಗ ಮಾಹಿತಿಗಳನ್ನು ಅಡಗಿಸುವಲ್ಲಿ ಮತ್ತು ತಿರುಚುವಲ್ಲಿ ಜನಗಳಿಗೆ ಜುಮ್ಲಾಗಳನ್ನು ಉಣಬಡಿಸುವಲ್ಲಿ ಹೆಸರುವಾಸಿಯಾಗಿ ಬಿಟ್ಟಿದೆ. 2019–20ರ ಮಧ್ಯಂತರ ಬಜೆಟ್ ಇದೇ ದಾಟಿಯಲ್ಲಿರುವ ಇನ್ನೊಂದು ಕಸರತ್ತು. ಹಂಗಾಮಿ ಹಣಕಾಸು ಮಂತ್ರಿಗಳು ತಮ್ಮ ಭಾಷಣದಲ್ಲಿ ತನ್ನ ಭಾಷಣದಲ್ಲಿ ಮೋದಿ ಸರಕಾರದ ದಾಖಲೆಗಳ ಬಗ್ಗೆ ಮತ್ತು ಎಲ್ಲ ಭಾರತೀಯರಿಗೆ ಒಂದು ಸುಂದರ ಭವಿಷ್ಯದ ಆಶ್ವಾಸನೆಗಳ ಬಗ್ಗೆ ದೊಡ್ಡ–ದೊಡ್ಡ ಮಾತುಗಳನ್ನಾಡಿದರು. ಇದು ನರಳುತ್ತಿರುವ ದೇಶದ ಜನತೆಯ ಒಂದು ಕ್ರೂರ ಅಪಹಾಸ್ಯ

ಸಂಸತ್ತಿನಲ್ಲಿ ಇಂದು ಮಂಡಿಸಿದ ಬಜೆಟ್ ಈ ವರ್ಷದ ಅಂತಿಮ ಬಜೆಟ್ ಆಗಿರಲು ಸಾಧ್ಯವಿಲ್ಲ. ಏಕೆಂದರೆ ಅದನ್ನು ಮಂಡಿಸಿರುವ ಸರಕಾರ ಮತ್ತು ಪರಿಶೀಲಿಸುವ ಲೋಕಸಭೆ ಈ ಬಜೆಟ್‌ಗೆ ಸಂಬಂಧಪಟ್ಟ ಹಣಕಾಸು ವರ್ಷದಲ್ಲಿ ಎರಡು ತಿಂಗಳೊಳಗೇ ಅಸ್ತಿತ್ವದಲ್ಲಿ ಇರುವುದಿಲ್ಲ. 2019–20ರ ಹಣಕಾಸು ವರ್ಷದ ಆದಾಯ ಸಂಗ್ರಹದ ಮತ್ತು ಮಾಡುವ ಖರ್ಚಿನ ಬಾಬ್ತುಗಳಿಗಾಗಿ ವಹಿಸುವ ಕ್ರಮಗಳ ಅಂತಿಮ ಚಿತ್ರ 17ನೇ ಲೋಕಸಭೆಗೆ ಚುನಾವಣೆಗಳ ಮೂಲಕ ಈ ದೇಶದ ಜನತೆ ತಮ್ಮ ಮನದ ಮಾತನ್ನು ಆಡಿದ ಮೇಲೆಯೇ ರೂಪುಗೊಳ್ಳುತ್ತದೆ ಎಂದು ಸಿಪಿಐ(ಎಂ) ಹೇಳಬಯಸುತ್ತದೆ. **ಒಂದು ಮಧ್ಯಂತರ ಬಜೆಟನ್ನು ಬಿಜೆಪಿ ತಾನು ನೀಡುವಂತಿರದ ಆಶ್ವಾಸನೆಗಳನ್ನು ನೀಡಲಿಕ್ಕಾಗಿ ಬಳಸುತ್ತಿರುವುದು ಜನಗಳ ತೀರ್ಪು ಏನಿರಬಹುದು ಎಂಬ ಬಗ್ಗೆ ಅದರ ಭೀತಿ ಮತ್ತು ಹತಾಶೆಗೆ ಸಾಕ್ಷಿ.**

ಎಪ್ರಿಲ್–ನವಂಬರ್‌ನ ಲಭ್ಯ ಅಂಕಿ–ಅಂಶಗಳ ಪ್ರಕಾರ 2018–19ರಲ್ಲಿ ಕೇಂದ್ರೀಯ ತೆರಿಗೆಗಳಿಂದ ಒಟ್ಟು ಆದಾಯಗಳು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಕೇವಲ 7.1% ದಷ್ಟು ಹೆಚ್ಚಿವೆ. ಆದರೆ 2018–19ರ ಪರಿಷ್ಕೃತ ಅಂದಾಜು 2017–18ರ ನಿಜವಾದ ಅಂಕಿ–ಅಂಶಗಳಿಗೆ ಹೋಲಿಸಿದರೆ 17% ದಷ್ಟು ಬೆಳವಣಿಗೆಯನ್ನು ತೋರಿಸುತ್ತದೆ. ಇದರ ನಂತರವೂ ರೆವಿನ್ಯೂ ಆದಾಯಗಳು ಕಳೆದ ವರ್ಷದ ಬಜೆಟ್ ಅಂದಾಜುಗಳಿಗಿಂತ ರೂ. 23,067 ಕೋಟಿಗಳಷ್ಟು ಕಡಿಮೆಯಿರುತ್ತದೆ ಎನ್ನಲಾಗಿದೆ. ಕಳೆದ ವರ್ಷ ತಾನು ಮಾಡಿದ್ದನ್ನು ಪುನರಾವರ್ತಿಸುತ್ತ ಈ ಸರಕಾರ ಈ ವರ್ಷವೂ ಆದಾಯ ತೆರಿಗೆಗಳ ಬಾಬ್ತಿನಲ್ಲಿ ಮತ್ತು ಜಿಎಸ್‌ಟಿ ಆದಾಯ ಬಾಬ್ತಿನಲ್ಲಿ ಆದಾಯಗಳನ್ನು ಉತ್ಪ್ರೇಕ್ಷಿಸಿ ನಮೂದಿಸಿದೆ. ಅದಾಯ ತೆರಿಗೆಗಳಿಂದ ರೆವಿನ್ಯೂ ಸಂಗ್ರಹ ಪರಿಷ್ಕೃತ ಅಂದಾಜಿಗಿಂತ ಕನಿಷ್ಟ 50,000 ಕೋಟಿ ರೂ.ಗಳಷ್ಟು ಕಡಿಮೆಯೇ ಇರುತ್ತದೆ ಎಂಬುದು ಖಂಡಿತ. ಕೇಂದ್ರೀಯ ಜಿಎಸ್‌ಟಿ ರೆವಿನ್ಯೂ ಈಗಾಗಲೇ ಬಜೆಟ್ ಅಂದಾಜಿಗಿಂತ 1ಲಕ್ಷ ಕೋಟಿ ರೂ.ಗಳಷ್ಟು ಕಡಿಮೆ ಇದೆ. ಜನವರಿ 2019 ರ ವರೆಗಿನ ಜಿಎಸ್‌ಟಿ ಸಂಗ್ರಹದ ಅಂಕಿ–ಅಂಶಗಳು ಇದು ಕೂಡ ಅವಾಸ್ತವ ಅಂಕಿ–ಅಂಶ ಎಂದು ಸೂಚಿಸುತ್ತವೆ. **ಸರಕಾರ ನೋಟುರದ್ಧತಿ ಮತ್ತು ತನ್ನ ತೆರಿಗೆ ಸುಧಾರಣೆ ಕ್ರಮಗಳ ಪರಿಣಾಮಗಳ ಬಗ್ಗೆ ತಾನು ಪಸರಿಸಿದ ಸುಳ್ಳುಗಳು ಹೊರ ಬರದಿರಲಿ ಎಂದು ಅಂಕಿ–ಅಂಶಗಳನ್ನು ತಿರುಚುತ್ತಿದೆ. ಎಂಬುದು ಸ್ಪಷ್ಟವಾಗಿದೆ.**

ಇಷ್ಟೊಂದು ರೆವಿನ್ಯೂ ಕೊರತೆ ಇದ್ದರೂ ಮೋದಿ ಸರಕಾರ 2016ರಲ್ಲಿ ಆರಂಭಿಸಿದ ಸಂಪತ್ತು ತೆರಿಗೆ ವಿನಾಯ್ತಿಯನ್ನು ಮುಂದುವರೆಸಿದೆ. ಶ್ರೀಮಂತ ಜನಗಳ ಒಡೆತನದ ಎರಡನೇ ಮನೆ ಕೂಡ ತೆರಿಗೆ ವಿನಾಯ್ತಿ ಪಡೆಯುತ್ತದೆ. ಮೋದಿ ಸರಕಾರ ಬಡವರನ್ನು ಹಿಂಡಿ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರಾಗಿಸುವ ತನ್ನ ತರ್ಕವನ್ನು ಕ್ರೂರವಾಗಿ ಅನುಸರಿಸುತ್ತಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ರಾಜ್ಯ ಸರಕಾರಗಳ ಮೇಲೆ ದಾಳಿ

ಇನ್ನೂ ಆಘಾತಕಾರಿ ಸಂಗತಿಯೆಂದರೆ, ಕಡಿಮೆ ತೆರಿಗೆ ಆದಾಯಗಳ ಹೊರೆಯನ್ನು ರಾಜ್ಯಗಳಿಗೆ ವರ್ಗಾಯಿಸಲಾಗುತ್ತಿದೆ. 2018–19ರ ನಿವ್ವಳ ಆದಾಯಗಳನ್ನು ಬಜೆಟ್ ಅಂದಾಜುಗಳಿಗಿಂತ ತುಸು ಹೆಚ್ಚಿನ ಮಟ್ಟದಲ್ಲಿ ಇಡಲಾಗಿದೆ. ಆದ್ದರಿಂದ ರೂ.26,639 ಕೋಟಿಗಳ ಕಡಿತವನ್ನು ಕೇಂದ್ರೀಯ ತೆರಿಗೆಗಳಲ್ಲಿ ರಾಜ್ಯಗಳ ಪಾಲಿಗೆ ಅನ್ವಯಿಸಲಾಗುತ್ತದೆ. ಅದೇ ರೀತಿಯಲ್ಲಿ ರಾಜ್ಯಗಳಿಗೆ ಜಿಎಸ್‌ಟಿ ಕೊರತೆಭರ್ತಿ ವರ್ಗಾವಣೆಯಲ್ಲೂ ಬಜೆಟ್ ಅಂದಾಜುಗಳಿಗೆ ಹೋಲಿಸಿದರೆ ರೂ.38,265 ಕೋಟಿ ಕಡಿತ ಮಾಡಲಾಗಿದೆ. ಇದಲ್ಲದೆ, ಕೇಂದ್ರದ ಬಜೆಟಿನಲ್ಲೂ ಕಾಣುವ ಜಿಎಸ್‌ಟಿ ರೆವಿನ್ಯೂ ಕೊರತೆ ಕೂಡ ರಾಜ್ಯ ಸರಕಾರಗಳ ಆದಾಯಗಳನ್ನು ತಟ್ಟುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಕೇಂದ್ರ ಸರಕಾರವು ರಾಜ್ಯ ಸರಕಾರಗಳ ಖರ್ಚಿನಲ್ಲಿ ತನ್ನ ಹಣಕಾಸು ಸ್ಥಿತಿಯನ್ನು ಉತ್ತಮವೆಂದು ತೋರಿಸಿಕೊಳ್ಳುವಂತೆ ಕಾಣುತ್ತದೆ. ಇದೀಗ ಈ ಸರಕಾರದ 'ಸಹಕಾರಿ ಒಕ್ಕೂಟ ತತ್ವ'ದ ನಿಜ ಹೂರಣ.

ಬೊಗಳೆಗಳು

ರೈತರು: ಡಿಸೆಂಬರ್ 1, 2018ರಿಂದ ಜಾರಿ ಮಾಡುವ ರೈತರ ಆದಾಯ ಬೆಂಬಲ ಸ್ಕೀಮಿಗೆ ಹೊಸದಾಗಿ 20,000 ಕೋಟಿ ರೂ.ಗಳನ್ನು ನೀಡಿರುವುದಾಗಿ ಹೇಳಿಕೊಂಡಿದ್ದರೂ, 2018–19ರ ಒಟ್ಟು ಖರ್ಚುಗಳ ಪರಿಷ್ಕೃತ ಅಂದಾಜುಗಳು ಬಜೆಟ್ ಅಂದಾಜುಗಳಿಗಿಂತ ಅಷ್ಟರ ಮಟ್ಟದ ಹೆಚ್ಚಳವನ್ನೂ ತೋರಿಸುತ್ತಿಲ್ಲ. ಆದ್ದರಿಂದ ಈ 20,000 ಕೋಟಿ ರೂ.ಗಳು ಬರುತ್ತಿರುವುದು ಇತರ ಬಾಬ್ತುಗಳಲ್ಲಿ ಖರ್ಚುಗಳನ್ನು ಕಡಿತ ಮಾಡುವ ಮೂಲಕ, ನಿರ್ದಿಷ್ಟವಾಗಿ, ಜಿಎಸ್‌ಟಿ ಕೊರತೆ ಭರ್ತಿ ನಿಧಿಗೆ ಮಾಡಬೇಕಾದ ವರ್ಗಾವಣೆಯಿಂದ.

ಈ ನೀಡಿಕೆ ಕೂಡ ಒಂದು ಮೋಸವೇ– ನಾಲ್ಕು ಜನಗಳಿರುವ ಒಂದು ರೈತ ಕುಟುಂಬಕ್ಕೆ ದಿನಕ್ಕೆ ತಲಾ 4ರೂ. 'ಬೆಂಬಲ'ದ ಆಶ್ವಾಸನೆ ನೀಡುವ ಒಂದು ಸ್ಕೀಮಿನ ಬಗ್ಗೆ ಬೇರೇನು ತಾನೇ ಹೇಳಲು ಸಾಧ್ಯ? ಕರ್ಷಕ ಸಂಕಟವನ್ನು ಉಲ್ಬಣಗೊಳಿಸಿ ರೈತರ ಆದಾಯಗಳನ್ನು ಅದಕ್ಕಿಂತ ಎಷ್ಟೋ ಹೆಚ್ಚಿನ ಪ್ರಮಾಣದಲ್ಲಿ ಧ್ವಂಸ ಮಾಡಿರುವುದಕ್ಕೆ ನೇರ ಹೊಣೆಗಾರನಾಗಿರುವ ಸರಕಾರ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆ ನೀಡುವ ಆಶ್ವಾಸನೆಯನ್ನು ಈಡೇರಿಸದೆ ಮಾಡಿರುವ ವಿಶ್ವಾಸಘಾತವನ್ನು ಮರೆಮಾಚಲು ಪ್ರಯತ್ನಿಸುತ್ತಿದೆ.

ಪೆನ್ಶನ್ ಸ್ಕೀಮ್: ಪ್ರಧಾನ ಮಂತ್ರಿ ಶ್ರಮ–ಯೋಗಿ ಮಂಡನ್– ಇಂತಹ ಇನ್ನೊಂದು ಬೊಗಳೆ. ಇದು ಒಬ್ಬ ವ್ಯಕ್ತಿ 32 ವರ್ಷಗಳ ಕಾಲ ತಿಂಗಳಿಗೆ 100ರೂ. ವಂತಿಗೆ ನೀಡಿದ ನಂತರ 3000ರೂ.ಗಳ ಒಂದು ಅಲ್ಪ ಪೆನ್ಶನ್‌ನ ಆಶ್ವಾಸನೆ ಕೊಡುತ್ತದೆ. **ಮೂರು ದಶಕಗಳಿಗೂ ಹೆಚ್ಚು ಕಾಲದ ನಂತರ ಇದರ ಫಲಾನುಭವಿಗಳ ಆರ್ಥಿಕ ಸ್ಥಾನಮಾನ ಏನಿರುತ್ತದೆ ಎಂಬ ಬಗ್ಗೆ ಮೋದಿ ಸರಕಾರದ ನಿರೀಕ್ಷೆಯಾದರೂ ಏನು? ಈ ಮಹಾನ್ 'ಆಶ್ವಾಸನೆ'ಗೆ ಸರಕಾರ ಇಂದು ಒದಗಿಸುವ ಮೊತ್ತವಾದರೂ ಏನು? '500 ಕೋಟಿ ರೂ."ಗಳ ಒಂದು 'ರಾಜ'ಧನ,** ಇದನ್ನೂ ಅ ಫಲಾನುಭವಿ ಇಂದು ಪಡೆಯುವುದಿಲ್ಲ, ಅದು ಯಾವುದೋ ವಿಮಾ ಕಂಪನಿಯ ಪೆನ್ಶನ್ ಫಂಡ್‌ಗೆ ಹೋಗುತ್ತದೆ!

ಉದ್ಯೋಗ: ಹಂಗಾಮಿ ಹಣಕಾಸು ಮಂತ್ರಿಗಳು ಆರ್ಥಿಕ ಸನ್ನಿವೇಶದ ಬಗ್ಗೆ ಮಾತಾಡುವಾಗ ಎನ್.ಎಸ್.ಎಸ್.ಒ. ಮಾಹಿತಿಯ ಪ್ರಸ್ತಾಪವನ್ನೂ ಮಾಡದೆ ತಪ್ಪಿಸಿಕೊಂಡರು. ಹಾಗೆ ಮಾಡಿದ್ದರೆ ಉದ್ಯೋಗಾಕಾಂಕ್ಷಿಗಳು ಉದ್ಯೋಗದಾತರಾಗಿ ಬಿಟ್ಟಿದ್ದಾರೆ, ಅದರಿಂದಾಗಿ ಉದ್ಯೋಗಾವಕಾಶಗಳಲ್ಲಿ ಗಮನಾರ್ಹ ಬೆಳವಣಿಗೆಯಾಗಿದೆ ಎಂಬ ಸರಕಾರದ ದಾವೆಯ ಬಗ್ಗೆ ಸಿಕ್ಕಿ ಬೀಳುತ್ತಿದ್ದರು. **ನಿಜ, ಉದ್ಯೋಗಾಕಾಂಕ್ಷಿಗಳು ಉದ್ಯೋಗದಾತರಾಗಿ ಬಿಟ್ಟಿದ್ದಾರೆ, ಆದರೆ ಸರಕಾರದ ಧೋರಣೆಗಳು ಅಂತಹ ಅನುಕೂಲ ಕಲ್ಪಿಸಿದ್ದರಿಂದಾಗಿ ಅಲ್ಲ, ಬದಲಾಗಿ, ಆ ಧೋರಣೆಗಳು ಉದ್ಯೋಗಗಳನ್ನು ತಿಂದು ಹಾಕಿ ಬದುಕುಳಿಯಲು ಏನಾದರೂ ದಾರಿ ಹುಡುಕಿಕೊಳ್ಳಲೇ ಬೇಕಾಗಿ ಬಂದುದರಿಂದ ಈ ಬಜೆಟ್ 'ಪಕೋಡಾ ' ತರ್ಕಕ್ಕೆ ಅಧಿಕೃತ ಮುದ್ರೆಯೊತ್ತಿದೆ.**

ಆದ್ದರಿಂದ ಕೇಂದ್ರ ಬಜೆಟ್ 2019–20 ಮೋದಿ ಸರಕಾರದ ದಿವಾಳಿಕೋರತನದ ಮತ್ತೊಂದು ಪ್ರತಿಬಿಂಬವಾಗಿದೆ. ಎಷ್ಟೇ ಕತೆ ಹೊಸೆದರೂ ರೈತರ ಸಂಕಟ ಅಥವ ಜನಗಳು ವಾಸ್ತವವಾಗಿ ಅನುಭವಿಸುತ್ತಿರುವ ಬಡತನ ಮತ್ತು ಉದ್ಯೋಗಹೀನತೆಯನ್ನು ಅದು ನಿವಾರಿಸಲಾರದು. ಈ ಕರಾಳ ವಾಸ್ತವತೆ 2019ರ ಚುನಾವಣಾ ತೀರ್ಪಿನಲ್ಲಿ ಎದ್ದು ಕಾಣಲಿದೆ.

ನಾಚಿಕೆಯಿಲ್ಲದ ವಿಶ್ವಾಸಘಾತ..ಕ್ರಿಮಿನಲ್ ನಿರ್ಲಕ್ಷ್ಯ–ಎಐಕೆಎಸ್
ಚುನಾವಣೆ ಮುಂಚಿನ ವಂಚನೆಯ ಕಸರತ್ತು–ಸಿಐಟಿಯು
ಬೊಗಳೆಗಳ ಕಾಲ ಇನ್ನೂ ಮುಗಿದಿಲ್ಲ – ಎಐಎಡಬ್ಲ್ಯುಯು
ಪುಟ 12 ನೋಡಿ

ನಿರುದ್ಯೋಗ ಮಾಹಿತಿ ಪ್ರಕಟವಾಗದಂತೆ ದಮನ ಮಾಡಿರುವ ಮೋದಿ ಸರಕಾರದ ಮೋಸ

ಮೋದಿ ಸರಕಾರ ತಡೆದಿಟ್ಟಿದ್ದ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಸಂಘಟನೆ(ಎನ್.ಎಸ್.ಎಸ್.ಒ.) ಇತ್ತೀಚಿನ ಮಾಹಿತಿಯು ನೋಟುರದ್ಧತಿಯ ನಂತರ ಭಾರತದ ನಿರುದ್ಯೋಗ ನಾಲ್ಕು ದಶಕಗಳಲ್ಲೇ ಅತಿ ಹೆಚ್ಚು ಎಂಬುದನ್ನು ತೋರಿಸಿದೆ. 15–29 ವರ್ಷ ವಯೋಗುಂಪಿನ ಗ್ರಾಮೀಣ ಪುರುಷರಲ್ಲಿ ಉದ್ಯೋಗಹೀನತೆಯ ಪ್ರಮಾಣ ಮೂರು ಪಟ್ಟಿಗಿಂತಲೂ ಹೆಚ್ಚಿನ ಜಿಗಿತ ಕಂಡಿದೆ. 2011–12ರಲ್ಲಿ 5% ಇದ್ದ ಅದು 2017–18ರಲ್ಲಿ 17.4%ಕ್ಕೆ ಏರಿದೆ. ಗ್ರಾಮೀಣ ಯುವತಿಯರ ನಡುವಿನ ನಿರುದ್ಯೋಗ ದರ ಇದೇ ಅವಧಿಯಲ್ಲಿ 4.8%ದಿಂದ 13.6%ಕ್ಕೆ ಬಂದಿದೆ. ವಿದ್ಯಾವಂತ ಯುವಜನರ ನಡುವಿನ ನಿರುದ್ಯೋಗವು ಗ್ರಾಮೀಣ ಪ್ರದೇಶಗಳಲ್ಲೂ, ನಗರಪ್ರದೇಶಗಳಲ್ಲೂ ಹೆಚ್ಚಿನ ಪ್ರಮಾಣವನ್ನು ದಾಖಲಿಸಿದೆ.

ಮೋದಿ ಸರಕಾರ ಈ ಮಾಹಿತಿ ಸಾರ್ವಜನಿಕಗೊಳ್ಳದಂತೆ ದಮನ ಮಾಡುತ್ತಿತ್ತು ಎಂಬುದು ಸ್ಪಷ್ಟವಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ. ಇದರ ಫಲಿತಾಂಶವಾಗಿ ಎನ್.ಎಸ್.ಎಸ್.ಒ. ವರದಿಗಳನ್ನು ಬಿಡುಗಡೆ ಮಾಡುವ ಶಾಸನಬದ್ಧ ಸಂಸ್ಥೆಯಾದ ರಾಷ್ಟ್ರೀಯ ಸಾಂಖ್ಯಿಕ ಆಯೋಗ(ಎನ್.ಎಸ್.ಸಿ.)ದ ಇಬ್ಬರು ಸದಸ್ಯರು ರಾಜೀನಾಮೆ ನೀಡುವಂತಾಗಿದೆ. ಇವರಲ್ಲಿ ಆಯೋಗದ ಹಂಗಾಮಿ ಅಧ್ಯಕ್ಷರೂ ಸೇರಿದ್ದಾರೆ. ಈಗ, ಏಳು ಸದಸ್ಯರನ್ನು ಹೊಂದಿರಬೇಕಾದ ಈ ಆಯೋಗದಲ್ಲಿ ಕೇವಲ ಇಬ್ಬರು ಉಳಿದಿದ್ದಾರೆ ಎಂದಿರುವ ಪೊಲಿಟ್‌ಬ್ಯುರೊ, ಈ ಹಿಂದೆ ಮೋದಿ ಸರಕಾರ ಲೇಬರ್ ಬ್ಯುರೋದ 2016–17ರ ವಾರ್ಷಿಕ ಸರ್ವೆಯನ್ನು ಬಿಡುಗಡೆ ಮಾಡಲು ಕೂಡ ನಿರಾಕರಿಸಿತ್ತು ಎಂಬ ಸಂಗತಿಯನ್ನು ನೆನಪಿಸಿದೆ.

ಮೋದಿ ಸರಕಾರ ಈ ಮಾಹಿತಿ ಪ್ರಕಟವಾಗದಂತೆ ದಮನ ಮಾಡಿಡುವ ಮೂಲಕ ತನ್ನ ಧೋರಣೆಗಳು ನಮ್ಮ ಜನತೆಗೆ ಹೆಚ್ಚಿನ ಸಂಕಟಗಳನ್ನು ತಂದೊಡ್ಡಿದೆ ಎಂಬುದನ್ನು ಒಪ್ಪಿಕೊಂಡಂತಾಗಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ. ನಮ್ಮ ಆಸ್ತಿಯಾದ ಭಾರತ ಯುವಜನರನ್ನು ಈಗ ವ್ಯರ್ಥಗೊಳಿಸಲಾಗುತ್ತಿದೆ. ಇದು ವರ್ಷಕ್ಕೆ 2 ಕೋಟಿ ಹೊಸ ಉದ್ಯೋಗಗಳನ್ನು, ಅಂದರೆ ಕಳೆದ ಐದು ವರ್ಷಗಳಲ್ಲಿ 10 ಕೋಟಿ ಹೊಸ ಉದ್ಯೋಗಗಳನ್ನು ಒದಗಿಸುವ ತನ್ನ ಭರವಸೆಯನ್ನು ಈಡೇರಿಸುವಲ್ಲಿ ಬಿಜೆಪಿ ನೇತೃತ್ವದ ಸರಕಾರದ ಸಂಪೂರ್ಣ ವಿಫಲತೆಯನ್ನೂ ಬಯಲಿಗೆ ತಂದಿಟ್ಟಿದೆ ಎಂದು ಅದು ಹೇಳಿದೆ.

ಎಲ್ಲ ಮಾಹಿತಿಗಳನ್ನು ತಕ್ಷಣವೇ ಬಿಡುಗಡೆ ಮಾಡಬೇಕು, ಇವನ್ನು ಸಂಸತ್ತಿನಲ್ಲಿ ಮಂಡಿಸಿ, ಅದರ ಮೇಲೆ ಚರ್ಚೆ ನಡೆಯಬೇಕು ಎಂದು ಆಗ್ರಹಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ದೇಶದ ಜನತೆಗೆ ತಮ್ಮ ಮುಂದಿರುವ ಗಂಭೀರ ವಾಸ್ತವತೆಗಳನ್ನು ತಿಳಿಯುವ ಹಕ್ಕು ಇದೆ ಎಂದಿದೆ.

ಅಯೋಧ್ಯೆಯಲ್ಲಿ ಯಥಾಸ್ಥಿತಿಯನ್ನು ಬದಲಿಸಬಾರದು–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಕೇಂದ್ರ ಸರಕಾರ ಅಯೋಧ್ಯೆಯಲ್ಲಿ ಸ್ವಾಧೀನ ಪಡಿಸಿಕೊಂಡ ಭೂಮಿಯಲ್ಲಿ ಯಥಾಸ್ಥಿತಿ ಇರಬೇಕು ಎಂಬ ನ್ಯಾಯಾಲಯದ ಆದೇಶವನ್ನು' "ವಿವಾದವಿಲ್ಲದ ಭೂಮಿಯ ಮೇಲಿಂದ ತೆಗೆಯಬೇಕು" ಎಂದು ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಸಲ್ಲಿಸಿರುವ ಬಗ್ಗೆ ತನಗೆ ಬಲವಾದ ಅಸಮ್ಮತಿ ಇದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. ಅದು ಈ ಭೂಮಿಯನ್ನು ರಾಮಮಂದಿರ ಕಟ್ಟಲಿಕ್ಕೆಂದು ವಿಹೆಚ್‌ಪಿ ರಚಿಸಿರುವ ರಾಮಜನ್ಮಭೂಮಿ ನ್ಯಾಸ್‌ಗೆ ವಹಿಸಿಕೊಡಬೇಕೆಂದಿದೆ.

ಕೇಂದ್ರ ಸರಕಾರ ಸ್ವಾಧೀನ ಪಡಿಸಿಕೊಂಡಿರುವ 67 ಎಕ್ರೆ ಭೂಮಿಯಲ್ಲಿ ಯಥಾಸ್ಥಿತಿ ಕಾಪಾಡಬೇಕು ಎಂದು 1993ರಲ್ಲಿ ಸುಪ್ರಿಂ ಕೋರ್ಟ್ ಆದೇಶ ನೀಡಿತ್ತು. ಇದರಲ್ಲಿ ಕೇವಲ 0.313 ಎಕ್ರೆ ಮಾತ್ರವೇ ವಿವಾದಾಸ್ಪದವಾಗಿರುವಂತದ್ದು ಎಂದು ಕೇಂದ್ರ ಸರಕಾರ ಈಗ ಹೇಳುತ್ತಿದೆ.

ಕೇಂದ್ರದ ಈ ನಡೆ ಸಂಘ ಪರಿವಾರವನ್ನು ಸಂತುಷ್ಟಗೊಳಿಸಲಿಕ್ಕಾಗಿಯೇ ಎಂದು ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ಏನೇ ಆಗಲಿ ತಕ್ಷಣವೇ ರಾಮಮಂದಿರವನ್ನು ಕಟ್ಟಬೇಕು ಎಂದು ಸಂಘ ಪರಿವಾರ ಈಗ ಆಗ್ರಹಿಸುತ್ತಿದೆ. ಇವೆಲ್ಲವನ್ನೂ ಮುಂಬರುವ ಲೋಕಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತಿದೆ ಎಂಬುದು ಸ್ವಯಂವೇದ್ಯ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸುಪ್ರಿಂ ಕೋರ್ಟ್ ತೀರ್ಪು ಬರುವ ಮೊದಲೇ ಅದನ್ನು ನಿರುಪಯುಕ್ತಗೊಳಿಸುವ ಅಡ್ಡಹಾದಿಯ ಪ್ರಯತ್ನ ಇದು ಎಂದು ಖಂಡಿಸಿದೆ.

ಸಂಪಾದಕೀಯ

ಬಡ್ತಿ ಮೀಸಲಾತಿ ಅನುಷ್ಟಾನ ನಿರ್ಣಯ ಸ್ವಾಗತಾರ್ಹ

ಹಿಂಬಡ್ತಿಗೆ ಗುರಿಯಾಗಿದ್ದ ಪರಿಶಿಷ್ಟ ಜಾತಿ ಮತ್ತು ಪಂಗಡದ ನೌಕರರಿಗೆ ಸಮಾನಾಂತರ ಹುದ್ದೆ ಕಲ್ಪಿಸಿ ನ್ಯಾಯ ಕೊಡಿಸಲು ಜಾರಿಗೆ ತಂದಿರುವ ಬಡ್ತಿ ಮೀಸಲಾತಿ ಕಾಯ್ದೆ ಅನುಷ್ಠಾನಗೊಳಿಸಲು ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ಕೊನೆಗೂ ನಿರ್ಧರಿಸಿದೆ. ರಾಜ್ಯ ಸರ್ಕಾರ 2002ರಲ್ಲಿ ಜಾರಿಗೆ ತಂದಿದ್ದ ಬಡ್ತಿ ಮೀಸಲಾತಿ ಕಾಯಿದೆಯನ್ನು ಸುಪ್ರೀಂಕೋರ್ಟ್ ಪೀಠ ರದ್ದುಪಡಿಸಿತ್ತು. ಸೇವಾ ಜ್ಯೇಷ್ಠತಾ ಪಟ್ಟಿ ಪರಿಷ್ಕರಿಸಿ, ಬಡ್ತಿಯಿಂದ ವಂಚಿತರಾಗಿದ್ದ ಪರಿಶಿಷ್ಟ ಜಾತಿಯೇತರ ಅಧಿಕಾರಿ, ಸಿಬ್ಬಂದಿಗೆ ಮುಂಬಡ್ತಿ ನೀಡಬೇಕು ಎಂದು ಆದೇಶದಲ್ಲಿ ಹೇಳಿತ್ತು.

ಸುಮಾರು 3,800 ರಷ್ಟು ಮುಂಬಡ್ತಿ ಪಡೆದ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ನೌಕರರು ಸುಪ್ರಿಂ ಕೋರ್ಟಿನ ಈ ದಲಿತ ನೌಕರ ವಿರೋಧಿ ತೀರ್ಪಿನಿಂದಾಗಿ, ಹಿಂಬಡ್ತಿ ಪಡೆಯುವ ತೀವ್ರ ಆತಂಕಕ್ಕೆ ಒಳಗಾಗಿದ್ದರು. ನೌಕರರು ಮತ್ತು ರಾಜ್ಯದ ಎಲ್ಲ ದಲಿತ ಚಳುವಳಿಗಳ ಒತ್ತಾಯದ ಮೇರೆಗೆ, ಚುನಾವಣೆಯ ಪೂರ್ವದ ವಿಧಾನಸಭಾ ಅಧಿವೇಶನದಲ್ಲಿ ಸಿದ್ಧರಾಮಯ್ಯನವರ ಸರಕಾರ ಕಾನೂನಿಗೆ ತಿದ್ದುಪಡಿ ಮಾಡಿ ರಾಷ್ಟ್ರಪತಿಗಳ ಅನುಮೋದನೆಗೆ ಕಳುಹಿಸಿತ್ತು. ಆದರೆ ರಾಷ್ಟ್ರಪತಿಗಳ ಅಂಗೀಕಾರ ಪೂರ್ವದಲ್ಲಿ, ಕೇಂದ್ರ ಸರಕಾರದ ಅಭಿಪ್ರಾಯಕ್ಕಾಗಿ ವಿವಿಧ ಇಲಾಖೆಗಳ ಪರಿಶೀಲನೆಗೊಳಪಡಿಸಲು ಅದನ್ನು ಕಳುಹಿಸಿದ್ದು, ಅವುಗಳ ಅಭಿಪ್ರಾಯ ಹೊರಬರಲು ವಿಳಂಬವಾಗಿತ್ತು. ಕೇಂದ್ರ ಸರಕಾರ ಬೇಗನೇ ತನ್ನ ಅಭಿಪ್ರಾಯವನ್ನು ನೀಡುವ ಬದಲು, ಅದನ್ನು ದುರುದ್ದೇಶ ಪೂರ್ವಕವಾಗಿ ವಿಳಂಬಿಸಿ, ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಅದರ ಲಾಭ ಪಡೆಯಲು ದಲಿತ ವಿರೊಧಿ ಕ್ರಮವಹಿಸಿತ್ತು.

ಹೀಗಾಗಿ ನೌಕರರು ಹಿಂಬಡ್ತಿ ಪಡೆಯುವಂತಾಯಿತು. ಇದರಿಂದ ದಲಿತ ನೌಕರೀರ್ವರು ಆತ್ಮಹತ್ಯೆ ಮಾಡಿಕೊಂಡ ದುರ್ಘಟನೆಗಳು ಸಂಭವಿಸಿದವು. ಇದೆಲ್ಲದರಿಂದ ದಲಿತ ನೌಕರರ ನಡುವೆ ವ್ಯಾಪಕವಾದ ಆತಂಕ ಮನೆ ಮಾಡಿತ್ತು. ರಾಜ್ಯ ಸರಕಾರ ರಾಷ್ಟ್ರಪತಿಗಳ ಅನುಮೋದನೆಯ ನಂತರ ಈ ಕಾಯಿದೆಯು ಗೆಜೆಟ್‌ನಲ್ಲಿ ಪ್ರಕಟಿಸಲ್ಪಟ್ಟಿದ್ದರೂ, ಅವರನ್ನು ಮೊದಲ ಸ್ಥಾನಗಳಿಗೆ ತೊಡಗಿಸಲು ಸರಕಾರ ವಿಳಂಬ ಮಾಡಿತ್ತು. ‘ಅಲ್ಪಸಂಖ್ಯಾತರು, ಹಿಂದುಳಿದ, ಸಾಮಾನ್ಯ ನೌಕರರ ವೇದಿಕೆ’ಯ (ಅಹಿಂಸಾ) ಚಳುವಳಿ ಮತ್ತು ಸಂಪುಟದ ಕೆಲವು ಸಚಿವರು ಸೇರಿದಂತೆ ಶಾಸಕರ ಒಂದು ವಿಭಾಗ ಒತ್ತಡಕ್ಕೆ ಸರಕಾರ ಮಣಿದಿದೆಯೆಂದು ಹೇಳಲಾಗಿತ್ತು. ಈ ನಡುವೆ ಈ ಕಾಯಿದೆಯ ವಿರುದ್ಧ ‘ಅಹಿಂಸಾ’ ಸುಪ್ರೀಂ ಕೋರ್ಟಿಗೆ ಹೋಗಿತ್ತು.

ಜನವರಿ 30ರಂದು ನಡೆದ ಸಂಪುಟ ಸಭೆಯಲ್ಲಿ ಬಡ್ತಿ ಮೀಸಲಾತಿ ಕಾಯ್ದೆಯನ್ನು ಜಾರಿಗೊಳಿಸಬೇಕು ಎಂದು ಪರಿಶಿಷ್ಟ ಜಾತಿ ನೌಕರರ ಸಂಘಟನೆ, ಮೈತ್ರಿ ಸರ್ಕಾರದ ಸಮನ್ವಯ ಸಮಿತಿ ಅಧ್ಯಕ್ಷ ಸಿದ್ದರಾಮಯ್ಯ ಕೂಡ ಸರ್ಕಾರದ ಮೇಲೆ ಒತ್ತಡ ಹೇರಿದ್ದರು. ಸಂಪುಟ ಸಭೆಯಲ್ಲಿ ಕಾಯಿದೆ ಜಾರಿಗೊಳಿಸಲೇಬೇಕು ಎಂದು ಉಪಮುಖ್ಯಮಂತ್ರಿ ಕೆಲವು ಸಚಿವರು ಪಟ್ಟು ಹಿಡಿದರು. ಒಂದೊಮ್ಮೆ ಜಾರಿ ಮಾಡದಿದ್ದರೆ ಲೋಕಸಭಾ ಚುನಾವಣೆಯಲ್ಲಿ ಹೊಡೆತ ಬೀಳಲಿದೆ ಎಂದೂ ಎಚ್ಚರಿಸಿದರು. ಸುಪ್ರೀಂ ಕೋರ್ಟ್ ಅಂತಿಮ ಆದೇಶ ನೀಡುವವರೆಗೆ ಕಾಯೋಣ ಎಂದು ಕೆಲವು ಸಚಿವರು ಸಲಹೆ ನೀಡಿದ್ದರು ಎನ್ನಲಾಗಿದೆ. ಕೊನೆಗೂ ಸಂಪುಟ ಕಾಯಿದೆ ಜಾರಿಗೆ ನಿರ್ಧರಿಸಿತು. ಸಂಪುಟದ ಈ ನಿರ್ಣಯ ವಿಳಂಬವಾಗಿದ್ದರೂ ಸ್ವಾಗತಾರ್ಹ. ‘ಈ ಕಾಯ್ದೆ ಅನುಷ್ಠಾನಗೊಳಿಸದಂತೆ ಸುಪ್ರೀಂ ಕೋರ್ಟ್ ಮೌಖಿಕ ಸೂಚನೆ ನೀಡಿತ್ತು. ಹಾಗಾಗಿ, ಅದನ್ನು ತಡೆಹಿಡಿಯಲಾಗಿತ್ತು. ಬಡ್ತಿ ಮೀಸಲಾತಿ ಕಾಯ್ದೆ ಜಾರಿಗೊಳಿಸಬಹುದು ಎಂದು ಹಿರಿಯ ವಕೀಲ ಮುಕುಲ್ ರೋಹಟಗಿ ಅವರು ವಾದ ಮಂಡಿಸಿದ್ದರು. ಈಗ ಅವರ ಸಲಹೆಯ ಮೇರೆಗೆ ಕಾಯಿದೆ ಜಾರಿಗೆ ನಿರ್ಧರಿಸಲಾಗಿದೆ ಎಂದು ಸರಕಾರದ ಪರವಾಗಿ ಹೇಳಲಾಗಿದೆ.

ಸಚಿವ ಸಂಪುಟದ ಈ ನಿರ್ಣಯದಿಂದ ಪರಿಶಿಷ್ಟ ಸಮುದಾಯದ 3,900ಕ್ಕೂ ಹೆಚ್ಚು ನೌಕರಿಗೆ ಸಮಾನಾಂತರ ಹುದ್ದೆ ಸಿಗಲಿದೆ. ಈ ಹುದ್ದೆ ಅವರು ನಿವೃತ್ತಿಯಾಗುವವರೆಗೆ ಮಾತ್ರ ಇರಲಿದೆ. ಹಿಂಬಡ್ತಿಗೆ ಒಳಗಾದ ನೌಕರರಿಗೆ ಈ ಹಿಂದಿನ ಹುದ್ದೆಯ ವೇತನ ಶ್ರೇಣಿಗೆ ಅನುಗುಣವಾಗಿ ಸಂಬಳ ಪಾವತಿ ಮಾಡಲಾಗಿದೆ. ಹೀಗಾಗಿ, ಕಾಯಿದೆ ಜಾರಿಯಿಂದ ಸರ್ಕಾರದ ಮೇಲೆ ಹೆಚ್ಚಿನ ಆರ್ಥಿಕ ಹೊರೆ ಬೀಳುವುದಿಲ್ಲ. ಹಿಂಬಡ್ತಿಗೆ ಒಳಗಾದ ನೌಕರರ ಪಿಂಚಣಿಯನ್ನು ತಡೆ ಹಿಡಿಯಲಾಗಿತ್ತು. ಈಗ ಅವರಿಗೆ ಪಿಂಚಣಿ ಹಾಗೂ ನಿವೃತ್ತಿ ಸೌಲಭ್ಯ ಸಿಗಲಿದೆ, ಎಂದು ಹೇಳಲಾಗಿದೆ.

ಈ ಕಾಯಿದೆ ಬಗ್ಗೆ ಸುಪ್ರೀಂ ಕೋರ್ಟು ವಿಚಾರಣೆ ನಡೆಸುತ್ತಿದ್ದು, ಅದರ ಅಂತಿಮ ನಿರ್ಣಯದ ತೂಗುಗತ್ತಿ ತೂಗುತ್ತಿದೆ. ಇದಲ್ಲದೆ ಅಹಿಂಸಾ ವೇದಿಕೆಯ ದಲಿತ–ವಿರೋಧಿ ಚಟುವಟಿಕೆ ಸಹ ಆತಂಕದ ವಿಚಾರ. ಒಂದು ಕಡೆ ಅದು ದಲಿತರಿಗೆ ಸಾಮಾಜಿಕ ನ್ಯಾಯದ ಬಗ್ಗೆ ಇರುವ ಸಾಮಾನ್ಯ ಸಹಮತವನ್ನು ಭಂಗಗೊಳಿಸುತ್ತಿದೆ. ಇನ್ನೊಂದು ಕಡೆ ದಲಿತೇತರ ನೌಕರರನ್ನು ದಲಿತ ನೌಕರರ ವಿರುದ್ಧ ಎತ್ತಿಕಟ್ಟುವ ಮೂಲಕ ನೌಕರರ ಐಕ್ಯತೆಯನ್ನು ಮುರಿಯುವ ಪ್ರಯತ್ನ ನಡೆಸಿದೆ. ಅಹಿಂಸಾ ವೇದಿಕೆಯ ಸವಾಲನ್ನು ಗಂಭೀರವಾಗಿ ಎದುರಿಸಿ, ದಲಿತ ಹಿಂದುಳಿದ ಜಾತಿಗಳಿಗೆ ಸಾಮಾಜಿಕ ನ್ಯಾಯದ ಬಗ್ಗೆ ಸಹಮತ ಮೂಡಿಸುವ ನೌಕರರ ಐಕ್ಯ ಚಳುವಳಿಯನ್ನು ಕಟ್ಟುವ ಸವಾಲು ಎಡ–ಪ್ರಜಾಸತ್ತಾತ್ಮಕ ಚಳುವಳಿಯ ಮುಂದಿದೆ.



ಶುಭ ವಿದಾಯ ಸಂಗಾತಿ ಜಾರ್ಜ್. ನೀವು "ಅವರು ಹೆಣೆದ ಬಲೆಗೆ ಬೀಳಬಾರದಿತ್ತು."

ಜಾರ್ಜ್ ಫೆರ್ನಾಂಡೀಸ್ ಅಂದರೆ ಆ ಕಾಲದ ಯುವಕರಿಗೆ, ನಮ್ಮಂತ ಬಾಲಕರಿಗೆ ರೋಮಾಂಚನ. ತುಳುನಾಡಿನ ಬಡವರ ಮನೆಯ ಹುಡುಗನೊಬ್ಬ ಮುಂಬೈ ಸೇರಿದ್ದು, ಅಲ್ಲಿ ನಿಗಿ ನಿಗಿ ಕೆಂಡದಂತ ಕಾರ್ಮಿಕ ನಾಯಕನಾಗಿ ಬೆಳೆದದ್ದು. ವಿದೇಶಿ ಕಂಪೆನಿಗಳ ವಿರುದ್ದ ನೇರಾ ನೇರಾ ಯುದ್ದಕ್ಕೇ ಇಳಿದದ್ದು, ಸಮಾಜವಾದಿ ರಾಜಕೀಯ ನೇತಾರನಾದದ್ದು, ತುರ್ತು ಪರಿಸ್ಥಿತಿಯ ವಿರುದ್ದ ಭೂಗತರಾಗಿ ಹೋರಾಟ ಕಟ್ಟಿದ್ದು, ಫ್ಯೂಡಲ್ ಭೂಮಾಲಕರ ಆಡಂಬೊಲ ದೂರದ ಬಿಹಾರದಲ್ಲಿ ಸ್ಪರ್ಧಿಸಿ ಲೋಕ ಸಭೆಗೆ ಆಯ್ಕೆ ಆದದ್ದು, ರಾಷ್ಟದ ಪ್ರಮುಖ ನೇತಾರರಾಗಿ ಮೂಡಿಬಂದದ್ದು. ಅದೂ ಅಲ್ಪಸಂಖ್ಯಾತ ಸಮುದಾಯದಲ್ಲಿ ಹುಟ್ಟಿದ "ಶಿಲುಬೆ" ಯನ್ನು ಹೊತ್ತುಕೊಂಡು... ನಿಜಕ್ಕೂ ಜಾರ್ಜ್ ಫೆರ್ನಾಂಡಿಸರ ಈ ಬದುಕು ಇಂಡಿಯಾದಂತಹ ಸಾಮಾಜಿಕ, ರಾಜಕೀಯ ಸ್ಥಿತಿಯ ದೇಶದಲ್ಲಿ ಒಂದು ಅಪರೂಪದ ಮಾದರಿ.

90 ರ ದಶಕದ ನಂತರದ ಜಾರ್ಜ್ ಮಾತ್ರ ದುರಂತ ನಾಯಕ ಅನ್ನುವುದಕ್ಕಿಂತಲೂ ಖಳನಾಯಕ. ತಾನು ಜೀವನದುದ್ದಕ್ಕೂ ಪ್ರಾಣವನ್ನೇ ಪಣಕ್ಕಿಟ್ಟು ಬಡಿದಾಡಿದ ಅದೇ ಸಾಮ್ರಾಜ್ಯಶಾಹಿ ಪ್ರಣೀತ ಬಂಡವಾಳದಾರರು, ಫ್ಯೂಡಲ್ ದೊರೆಗಳು ಸಾಲದೆಂಬಂತೆ ಕೋಮುವಾದಿ ಶಕ್ತಿಗಳೊಂದಿಗೆ ಅಧಿಕಾರದ ಖುರ್ಚಿಗೋಸ್ಕರ ರಾಜಿ ಮಾಡಿಕೊಂಡದ್ದು. ಫೆರ್ನಾಂಡಿಸರ ಈ ಅವಧಿಯ ರಾಜಕಾರಣವ ಇಂಡಿಯಾದ ಒಂದು ತಲೆಮಾರನ್ನೇ ರಾಜಕೀಯವಾಗಿ, ಸಾಮಾಜಿಕವಾಗಿ ಭ್ರಷ್ಟಗೊಳಿಸಲು ನೆರವು ನೀಡಿತು. ಇದು ಫೆರ್ನಾಂಡಿಸ್ ಒಬ್ಬರ ಕತೆಯಲ್ಲದಿದ್ದರೂ ಈ ಮಾದರಿಯ ಒಂದು ಅತ್ಯಂತ ಕೆಟ್ಟ ರಾಜಿಕೋರತನ ಇಂಡಿಯಾವನ್ನು ಕಾರ್ಪೊರೇಟ್, ಕೋಮುವಾದ, ಭೂಮಾಲಕರ ಸಖ್ಯದ ಸರ್ವಾಧಿಕಾರಕ್ಕೆ ಎಡೆ ಮಾಡಿಕೊಡುವಲ್ಲಿ ಪ್ರಧಾನ ಪಾತ್ರವನ್ನು ವಹಿಸಿತು. ದೇಶವನ್ನು ಇಂದಿನ ಅಸಹಾಯಕ ಪರಿಸ್ಥಿತಿಗೆ ತಲುಪಿಸಿತು.



ಕೋಮುವಾದಿ, ಬಂಡವಾಳ ಶಾಹಿ ಶಕ್ತಿಗಳು ತನ್ನ ವಿರುದ್ದ ಸಮರ ಸಾರಿದ ಅದರ್ಶವಾದಿ, ವ್ಯಕ್ತಿ ಕೇಂದ್ರಿತ ನಾಯಕರನ್ನು ಹೇಗೆ ಪಳಗಿಸಿ ತನ್ನ ಆಜ್ಞಾಪಾಲಕ ಕಾವಲುಗಾರರನ್ನಾಗಿಸುತ್ತದೆ ಎಂಬುದಕ್ಕೆ ಜಾರ್ಜ್ ಫೆರ್ನಾಂಡಿಸ್ ಒಂದು ಆಧ್ಯಯನ ಯೋಗ್ಯ ವ್ಯಕ್ತಿತ್ವ.

ಏನೇ ಇದ್ದರು ಮುಂಬೈ ಬೀದಿಗಳಲ್ಲಿ ಕಾರ್ಮಿಕರಿಗಾಗಿ ಬಡಿದಾಡಿದ, ಬಹುರಾಷ್ಟ್ರೀಯ ಕಂಪೆನಿಗಳ ವಿರುದ್ದದ ರಾಜಕಾರಣಕ್ಕೆ ಶಕ್ತಿ ತುಂಬಿದ, ಸಮಾಜವಾದಿ ಚಿಂತನೆಗಳತ್ತ ಯುವಜನರಲ್ಲಿ ಆಕರ್ಷಣೆ ಮೂಡಿಸಿದ ನಮ್ಮ ತುಳುನಾಡಿನ ಬಡವರ ಮನೆಯ ಆ 60, 70 ರ ದಶಕದ ಪೊರ್ಬು ಹುಡುಗ ಎಂದರೆ ನನಗೆ ಈಗಲೂ ಹೆಮ್ಮೆ.

ಶುಭ ವಿದಾಯ ಸಂಗಾತಿ ಜಾರ್ಜ್. ನೀವು "ಅವರು ಹಣೆದ ಬಲೆಗೆ ಬೀಳಬಾರದಿತ್ತು."

– ಮುನೀರ್ ಕಾಟಿಪಳ್ಳ

ಕೇಳಿಸಿದ್ದು

ಚಿಕಿತ್ಸೆಗಾಗಿ ಅಮೆರಿಕಕ್ಕೆ ತೆರಳಿರುವ ಖಾತೆರಹಿತ ಸಚಿವ ಅರುಣ್ ಜೇಟ್ಲಿ ಅವರು ಐಸಿಐಸಿಐ ಬ್ಯಾಂಕ್ನ ಮುಖ್ಯಸ್ಥೆಯಾಗಿದ್ದ ಚಂದಾ ಕೊಚ್ಚರ್ ಅವರ ಮೇಲಿನ ಆರೋಪಗಳ ಕುರಿತು ತನಿಖೆ ನಡೆಸುತ್ತಿರುವ ಸಿಬಿಐಯನ್ನು ಟೀಕಿಸಿ ಟ್ವೀಟ್ ಮಾಡಿದ್ದರು. ‘ಸಿಬಿಐ, ತನಿಖಾ ದುಸ್ಸಾಹಸಕ್ಕೆ ಇಳಿಯಕೂಡದು’ ಎಂಬುದು ಟ್ವೀಟ್ ನ ಸಾರ. ರಾಮಜನ್ಮಭೂಮಿ ವಿವಾದದ ವಿಚಾರಣೆಯ ದಿನಾಂಕಕ್ಕೆ ಸಂಬಂಧಿಸಿದ ಸುಪ್ರೀಂ ಕೋರ್ಟ್ನ ನಿಲುವನ್ನು ಟೀಕಿಸುವ ಉದ್ಧಟತನ ತೋರಿದ್ದು ಕಾನೂನು ಸಚಿವರಾಗಿರುವ ರವಿಶಂಕರ್ ಪ್ರಸಾದ್. ಈ ಇಬ್ಬರೂ ಎಳಸು ರಾಜಕಾರಣಿಗಳಲ್ಲ. ಹಾಗೆಯೇ ಶಾಸಕಾಂಗಕ್ಕೆ ಉಳಿದ ಅಂಗಗಳ ಜೊತೆ ಇರಬೇಕಾದ ಸಂಬಂಧದ ಬಗ್ಗೆ ತಿಳಿವಳಿಕೆ ಇಲದವರೂ ಅಲ್ಲ. ಸಂವಿಧಾನದ ಆಶಯಗಳನ್ನು ಅರಿಯದವರಂತೂ ಅಲ್ಲವೇ ಅಲ್ಲ. ಇಬ್ಬರಿಗೂ ಕಾನೂನಿನ ಜ್ಞಾನವೂ ಚೆನ್ನಾಗಿದೆ. ಆದರೂ ಇವರಿಬ್ಬರು ಎಲ್ಲಾ ಶಿಷ್ಟಾಚಾರಗಳನ್ನು ಗಾಳಿಗೆ ತೂರಿ ತನಿಖಾ ಸಂಸ್ಥೆ ಮತ್ತು ನ್ಯಾಯಾಂಗದ ಕಾರ್ಯ ನಿರ್ವಹಣೆಯನ್ನು ಪ್ರಭಾವಿಸುವಂಥ ಮಾತುಗಳನ್ನು ಬಹಿರಂಗವಾಗಿ ಆಡಿದರು. ಇದಕ್ಕೆ ಬಂದ ಟೀಕೆಗಳಿಗೆ ಪ್ರತಿಕ್ರಿಯಿಸುವ ಅಥವಾ ಸ್ಪಷ್ಟೀಕರಿಸುವ ಕೆಲಸವನ್ನೂ ಅವರು ಈ ತನಕ ಮಾಡಿಲ್ಲ. ಅಂದರೆ ಇದು ಪ್ರಜ್ಞಾಪೂರ್ವಕವಾದ ಕ್ರಿಯೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುತ್ತಿದೆ ಎಂಬ ಆರೋಪವನ್ನು ಸಮರ್ಥಿಸುವಂತೆ ಈ ಮಂತ್ರಿಗಳ ವರ್ತನೆ ಇದೆ. ಈ ಬಗೆಯ ಮಾತುಗಳ ಮೂಲಕ ಈಗಿನ ಆಡಳಿತಾರೂಢರ ಸ್ವಾರ್ಥ ಸಾಧನೆಯಾಗಬಹುದು. ಆದರೆ ಇದು ಪ್ರಜಾಪ್ರಭುತ್ವದ ಮಟ್ಟಿಗೆ ಮಾರಕವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ.

ಪ್ರಜಾವಾಣಿ ಸಂಪಾದಕೀಯ (ಫೆ.1)



ಮಂಡ್ಯದಲ್ಲಿ 'ಉದ್ಯೋಗ ಖಾತ್ರಿ' ದಶಮಾನೋತ್ಸವ

ಶಿಕ್ಷಣ, ಉದ್ಯೋಗ, ಆಹಾರ ಮೂಲಭೂತ ಹಕ್ಕಾಗಲಿ: ನ್ಯಾ. ದಾಸ್

'ಭಾರತೀಯ ಸಂವಿಧಾನದಲ್ಲಿ ಶಿಕ್ಷಣ, ಉದ್ಯೋಗ, ಆಹಾರ ಮೂಲಭೂತ ಹಕ್ಕುಗಳಾದರೆ ಗ್ರಾಮೀಣ ಪ್ರದೇಶದ ರೈತ ಸಮುದಾಯ ಅಭಿವೃದ್ಧಿ ಪಥದತ್ತ ಹೆಜ್ಜೆ ಇಡಲು ಸಾಧ್ಯವಾಗುತ್ತದೆ' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ವಿಶ್ವಾಸ ವ್ಯಕ್ತಪಡಿಸಿದರು. ಉದ್ಯೋಗ ಖಾತ್ರಿ ಯೋಜನೆಯ ದಶಮಾನೋತ್ಸವದ ಅಂಗವಾಗಿ ರಾಜ್ಯ ಪ್ರಾಂತ ಕೃಷಿ ಕೂಲಿಕಾರರ ಸಂಘದ ವತಿಯಿಂದ ಮಂಡ್ಯದ ಪಾಂಡುರಂಗ ಸಮುದಾಯ ಭವನದಲ್ಲಿ ಸೋಮವಾರ ನಡೆದ ವಿಚಾರ ಸಂಕಿರಣವನ್ನು ಜನವರಿ 28ರಂದು ಉದ್ಘಾಟಿಸಿ ಅವರು ಮಾತನಾಡಿದರು. 'ಉದ್ಯೋಗ ಖಾತ್ರಿ (ಮನರೇಗಾ) ಯೋಜನೆಯ ಅನುಷ್ಠಾನ, ಮುಂದಿನ ದಾರಿ ಹಾಗೂ ಕಾಯಕ ಬಂಧುಗಳ ಹಕ್ಕು, ಕರ್ತವ್ಯ ಜವಾಬ್ದಾರಿಗಳು' ಕುರಿತು ಜನವರಿ 28, 29ರಂದು ಸಂಘಟಿಸಿದ ರಾಜ್ಯ ಮಟ್ಟದ ಕಾರ್ಯಾಗಾರದ ಸಂದರ್ಭದಲ್ಲಿ ಈ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು.

'ದೇಶದ ಅತೀ ದೊಡ್ಡ ಸಂವಿಧಾನವನ್ನು ಒಪ್ಪಿ ನಾವೆಲ್ಲರೂ ಗಣರಾಜ್ಯ ವ್ಯವಸ್ಥೆಯಲ್ಲಿ ಇದ್ದೇವೆ. ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ ಮೂಲಭೂತ ಹಕ್ಕುಗಳಾಗಿವೆ. ಆದರೆ ಮೂಲ ಅವಶ್ಯಕತೆಗಳಾದ ಆಹಾರ, ಶಿಕ್ಷಣ, ಉದ್ಯೋಗ ಇಲ್ಲಿಯವರೆಗೂ ಮೂಲಭೂತ ಹಕ್ಕುಗಳಾಗಿಲ್ಲ. ಸಂವಿಧಾನ ಜಾರಿಯಾದಾಗ ದೇಶದಲ್ಲಿ ಬಡತನ ಇತ್ತು. ಆಹಾರ, ಉದ್ಯೋಗ, ಶಿಕ್ಷಣ ಹಕ್ಕುಗಳಾದರೆ ದೇಶದ ಮೇಲೆ ಆರ್ಥಿಕ ಹೊರೆ ಬೀಳುತ್ತದೆ ಎಂಬ ಕಾರಣಕ್ಕೆ ಹಕ್ಕುಗಳಾಗಿಲ್ಲ. ದೇಶದ ಮೇಲೆ ಹೊರೆಯಾಗದ ಅಂಶಗಳು ಮೂಲಭೂತ ಹಕ್ಕುಗಳಾಗಿ ಸ್ಥಾನ ಪಡೆದಿವೆ' ಎಂದು ಹೇಳಿದರು.

'ಗ್ರಾಮೀಣ ಭಾಗದ ಕೃಷಿ ಪದ್ಧತಿ ಅತ್ಯಂತ ಬಿಕ್ಕಟ್ಟಿನ ಪರಿಸ್ಥಿತಿ ಎದುರಿಸುತ್ತಿದೆ. ಸರ್ಕಾರಗಳು ಹೊಸ ಕೃಷಿ ನೀತಿಗಳನ್ನು ಜಾರಿಗೊಳಿಸಿದ್ದರ ಪರಿಣಾಮವಾಗಿ ರೈತರ ಸ್ಥಿತಿ ಇಕ್ಕಟ್ಟಿಗೆ ಸಿಲುಕಿತು. ಇದರಿಂದ ಕೃಷಿ ಪದ್ಧತಿ ಸಮಗ್ರವಾಗಿ ಬದಲಾಯಿತು. ಬಿಕ್ಕಟ್ಟಿನ ಪರಿಸ್ಥಿತಿಗೆ ರೈತರು ಸಿಲುಕಿದರು' ಎಂದರು.

'ಕಳೆದ 20 ವರ್ಷಗಳಿಂದ ದೇಶದಲ್ಲಿ 3.15 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರತಿನಿತ್ಯ ಒಂದಲ್ಲಾ ಒಂದು ಕಡೆ ರೈತರು ಆತ್ಮಹತ್ಯೆ ಮಾಡಿಕೊಂಡ ವರದಿಗಳು ಬರುತ್ತಲೇ ಇವೆ. ಭೀಕರ ಬಡತನ ಎದುರಾಗಿದ್ದು ಹಳ್ಳಿ ಜನರು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಅವರು ಅಲ್ಲೂ ನೆಮ್ಮದಿಯಿಂದ ಇಲ್ಲ. ನಗರಗಳ ಕೊಳಚೆ ಪ್ರದೇಶಗಳಲ್ಲಿ ಜೀವನ ಮಾಡುತ್ತಿದ್ದಾರೆ. ಉದ್ಯೋಗವಿಲ್ಲದೇ ಬಳಲುತ್ತಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ನೀರಿದೆ, ಉತ್ತಮವಾದ ಕಬ್ಬು, ಭತ್ತ ಬೆಳೆಯುತ್ತಾರೆ. ಆದರೂ ರೈತರ ಸ್ಥಿತಿ ಸುಧಾರಿಸಿಲ್ಲ' ಎಂದರು.

'ಶಿಕ್ಷಣ ಮೂಲಭೂತ ಹಕ್ಕಾಗಬೇಕು ಎಂದು ಹೋರಾಟ ನಡೆಸಿದ್ದರ ಫಲವಾಗಿ ಶಿಕ್ಷಣ ಕಾಯ್ದೆ ಜಾರಿಯಾಯಿತು. ಉದ್ಯೋಗ ಹಕ್ಕಾಗಬೇಕು ಎಂಬ ಹೋರಾಟದಿಂದ ಉದ್ಯೋಗ ಖಾತ್ರಿ ಜಾರಿಯಾಯಿತು. ಈ ಕಾಯ್ದೆ ಜಾರಿಯಾದಾಗ ಸಮರ್ಪಕ ರೀತಿಯಲ್ಲಿ ಜಾರಿ ಆಗಿರಲಿಲ್ಲ. ಆಗ ನಮ್ಮ ರಾಜ್ಯದಲ್ಲಿ ಕೇವಲ 3 ಸಾವಿರ ಕೋಟಿ ರೂ. ಹಣ ಮಾತ್ರ ಯೋಜನೆ ಅಡಿ ಬಳಕೆಯಾಗಿತ್ತು. ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಕಾರ್ಯಾಗಾರ ನಡೆಸಿದ್ದರ ಫಲವಾಗಿ ಸಮಗ್ರ ಅನುಷ್ಠಾನ ಮಾಡಲಾಯಿತು. ಈಗ ರಾಜ್ಯದಲ್ಲಿ ರೂ. 2.5 ಲಕ್ಷ ಕೋಟಿ ಬಳಕೆಯಾಗುತ್ತಿದೆ. ಇದನ್ನು ನೋಡಿದರೆ ಮುಂದೊಂದು ದಿನ ಉದ್ಯೋಗ ಮೂಲಭೂತ ಹಕ್ಕಾಗುತ್ತದೆ ಎಂಬ ವಿಶ್ವಾಸವಿದೆ' ಎಂದರು.

ರಾಜ್ಯ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷ ನಿತ್ಯಾನಂದಸ್ವಾಮಿ, ಜಿಲ್ಲಾ ಅಧ್ಯಕ್ಷ ಎಂ.ಪುಟ್ಟಮಾದು, ರಾಜ್ಯ ಉಪಾಧ್ಯಕ್ಷ ಜಿ.ಎನ್.ನಾಗರಾಜ್, ಜನವಾದಿ ಮಹಿಳಾ ಸಂಘಟನೆ ಜಿಲ್ಲಾ ಘಟಕದ ಅಧ್ಯಕ್ಷೆ ದೇವಿ, ಸಿಐಟಿಯು ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಸಿ.ಕುಮಾರಿ, ಹನುಮಂತು ಉಪಸ್ಥಿತರಿದ್ದರು.





ಹೊಸನಗರದಲ್ಲಿ ಆದಿವಾಸಿ ಪ್ರತಿಭಟನಾ ಪ್ರದರ್ಶನ

ಶಿವಮೊಗ್ಗ ಜಿಲ್ಲೆಯ ಹೊಸನಗರದ ತಾಲೂಕು ಕಛೇರಿ ಎದುರು 24 ಜನವರಿ 2019 ರಂದು ಆದಿವಾಸಿ –ಬುಡಕಟ್ಟು ಸಮುದಾಯಗಳ ಸಮುದಾಯದ ಹಕ್ಕುಗಳು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ ಪ್ರದರ್ಶನ ನಡೆಯಿತು. ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ. ಹೊಸನಗರ ತಾಲೂಕು ಹಾಗೂ ಜಿಲ್ಲಾ ಸಂಘಟನಾ ಸಮಿತಿಯ ನೇತೃತ್ವದಲ್ಲಿ ನಡೆದ ಈ ಪ್ರತಿಭಟನೆಯಲ್ಲಿ ಹೊಸನಗರ ಮಾತ್ರವಲ್ಲದೆ ವಿವಿಧ ತಾಲೂಕುಗಳ ಆದಿವಾಸಿಗಳು ಭಾಗಿಯಾದುದು ವಿಶೇಷವಾಗಿತ್ತು.

ಜಿಲ್ಲೆಯಲ್ಲಿ ಹಸಲರು, ಕುಣಬಿ, ಕೊರಗರು, ಸೋಲಿಗರು, ಅಧಿಕ ಸಂಖ್ಯೆಯಲ್ಲಿ ಇದ್ದಾರೆ. ಅರಣ್ಯ ಹಕ್ಕುಗಳ ಕಾಯ್ದೆಯಡಿ ಇವರುಗಳಿಗೆ 10 ಎಕರೆ ಜಮೀನು ಮಂಜೂರು ಮಾಡಲು ಅವಕಾಶ ಇದೆಯಾದರೂ 2, 3 ಗುಂಟೆ ಭೂಮಿ ನೀಡಿ ಸರ್ಕಾರ ಕೈ ತೊಳೆದುಕೊಂಡಿದೆ. ಹಾಗೆ ಕಿರು ಅರಣ್ಯ ಉತ್ಪನ್ನ ಸಂಗ್ರಹ, ಮಿನುಗಾರಿಕೆ, ದೈವಬನ, ಸ್ಮಶಾನ ಸೇರಿದಂತೆ ವಿವಿಧ ರೀತಿಯ ಪಾರಂಪರಿಕ ಪ್ರದೇಶಗಳಿಗೆ ಪ್ರವೇಶ ನೀಡುವ 2006 ರ ಅರಣ್ಯ ಹಕ್ಕು ಕಾಯ್ದೆಯಡಿ ಸಮುದಾಯದ ಹಕ್ಕುಗಳನ್ನು ನೀಡಲು ಆಡಳಿತ ವಿಫಲವಾಗಿದೆ. ಕೆಲವೇ ಕುಟುಂಬಗಳಿಗೆ ಹಕ್ಕು ಪತ್ರ ಸಿಕ್ಕರೂ ಅವರಿಗೆ ಸಹಾಯ ಧನ, ಸಾಲ, ಮನೆ, ನೀರಾವರಿ ಸೇರಿದಂತೆ ಸರ್ಕಾರದ ಸೌಲಭ್ಯಗಳನ್ನು ನಿರಾಕರಿಸಲಾಗಿದೆ. ಇವರಿಗೆ ಉಚಿತ ಪೌಷ್ಠಿಕ ಆಹಾರವನ್ನು ಪಡೆಯಲು ಕಾಡಿನ ನಡುವಿನಿಂದ ತಾಲೂಕು ಕೇಂದ್ರಗಳಿಗೆ ಬರಬೇಕು. ಅದು ಖರ್ಚಿನ ಬಾಬ್ತು! ಬೇರೆ ಜಿಲ್ಲೆಯಂತೆ ಅಂಗನವಾಡಿ ಅಥವಾ ಗ್ರಾಮ ಮಟ್ಟದಲ್ಲಿ ವಿತರಿಸಬೇಕು ಎಂಬ ಕೂಗು ಅಧಿಕಾರಿಗಳ ಕಿವಿಗೆ ಹೊದರೂ ಹೃದಯಕ್ಕೆ ತಟ್ಟುತ್ತಿಲ್ಲ. ಪಾರಂಪರಿಕ ನೀರಿನ ಹಕ್ಕು, ಇರುವ ಭೂಮಿ, ಬಲಾಢ್ಯರ ಕಬ್ಜದಲ್ಲಿವೆ. ಇವರ ಮನೆ ಹೊಕ್ಕು ಹೊಡೆದ 'ಅಯ್ಯನೋರ' ಮೇಲೆ ಕೇಸ್ ದಾಖಲಿಸಲು ಬೀದಿಯಲ್ಲಿ ಬಾಯಿ ಬಡಿದುಕೊಂಡು ರಂಪಾಟ ಮಾಡಬೇಕು! ಆದರೆ ಅವರಿಂದ ಒದೆ ತಿಂದವರ ಮೇಲೆ ಬಹಳ ಸುಲಭ ರೀತಿಯಲ್ಲಿ ಕೌಂಟರ್ ಕೇಸ್ ದಾಖಲಾಗುತ್ತದೆ! ಹೀಗೆ ದಮನದ ಯತ್ನಗಳ ಪಟ್ಟಿ ಬೆಳೆಯುತ್ತದೆ.

ಅರಣ್ಯ ಹಕ್ಕುಗಳ ಅರ್ಜಿ ಮರುಪರಿಶೀಲನೆ ಮಾಡಬೇಕು, ದೌರ್ಜನ್ಯ ಒಳಗಾದವರಿಗೆ ಹಾಗೂ ಭೂ ರಹಿತ ಆದಿವಾಸಿ ಕುಟುಂಬಗಳಿಗೆ ಭೂಮಿ ನೀಡಲು, ಅಲೆಮಾರಿ ಕೊಶದಿಂದ ಅರಣ್ಯವಾಸಿ ಆದಿವಾಸಿಗಳಿಗೆ ಮನೆ, ನೀರಾವರಿ ಸೌಲಭ್ಯ ಒದಗಿಸುವುದು, ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡುವ ಬದಲಿಗೆ ಅವರ ಮೇಲೆ ಕೇಸ್ ದಾಖಲಿಸಿದ್ದು ಅವರ ಮೇಲಿನ ಕೇಸ್ ರದ್ದು ಮಾಡಲು ಸೇರಿದಂತೆ ವಿವಿಧ ಬೇಡಿಕೆಗಳ ವಿವರವಾದ ಮನವಿಯನ್ನು ಜಿಲ್ಲಾ ಸಹ ಸಂಚಾಲಕ ಹಾಗೂ ರಾಜ್ಯ ಸಮಿತಿ ಸದಸ್ಯ ಶ್ರೀಧರ ನಾಡ ರವರು ಓದಿ ಸಲ್ಲಿಸಿದರು. ಮನವಿ ಸ್ವೀಕರಿಸಿದ ತಹಶಿಲ್ದಾರರು ಸೌಜನ್ಯ ದಿಂದ ಸ್ಪಂದಿಸಿ ಸಂಘದ ಪ್ರಮುಖರು ಹಾಗೂ ಎಲ್ಲಾ ಅಧಿಕಾರಿಗಳ ಸಭೆಯೊಂದನ್ನು ಶೀಘ್ರದಲ್ಲೇ ಕರೆಯುವುದಾಗಿ, ಕೆಲವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತರುವುದಾಗಿ ಭರವಸೆ ನೀಡಿದರು.

ಇದನ್ನು ಒಪ್ಪಿರುವ ಸಂಘವು ಚರ್ಚೆಯ ಕಾಲಮಿತಿಗಾಗಿ ಆಗ್ರಹಿಸಿದೆ. ಪ್ರತಿಭಟನೆ ಉದ್ದೇಶಿಸಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ರಾಜ್ಯ ಸಹ ಸಂಚಾಲಕರು ಎಸ್ ವೈ ಗುರುಶಾಂತ್, ಬರಹಗಾರರು ಸಮುದಾಯ ಸಾಂಸ್ಕೃತಿಕ ಸಂಘಟನೆಯ ಕೆ. ಪ್ರಭಾಕರನ್, ಜಿಲ್ಲಾ ಸಂಚಾಲಕ ಮಂಜುನಾಥ ಕಪದೂರು ಮಾತನಾಡಿದರು. ಈ ಪ್ರತಿಭಟನೆಯಿಂದ ಪ್ರಭಾವಿತರಾಗಿ ಕೆಲ ಆದಿವಾಸಿಗಳು ತಮ್ಮ ಕಾಲೋನಿಗೆ ಆಹ್ವಾನಿಸಿ ವಿವರವಾಗಿ ಚರ್ಚಿಸಿದು ವಿಶೇಷವಾಗಿತ್ತು.



ಜನವರಿ 25 ರಂದು ಶಿವಮೊಗ್ಗ ಜಿಲ್ಲಾಧಿಕಾರಿ ದಯಾನಂದ ರವರಿಗೆ ನಿಯೋಗವು ಮನವಿ ಸಲ್ಲಿಸಿ ಸಭೆಯೊಂದನ್ನು ಕರೆಯಲು ಒತ್ತಾಯಿಸಿತು. ಅಲ್ಲದೇ ಅಂದು ಮಾಧ್ಯಮ ಗೋಷ್ಠಿಯನ್ನು ಪತ್ರಕರ್ತರ ಭವನದಲ್ಲಿ ನಡೆಸಿ ಸಂಘವು ಮುಖ್ಯಮಂತ್ರಿಗಳೊಂದಿಗೆ ಇತ್ತೀಚೆಗೆ ನಡೆದ ಚರ್ಚೆ ಮತ್ತು ಸಮಸ್ಯೆಗಳನ್ನು ವಿವರಿಸಲಾಯಿತು.

– ಶ್ರೀಧರ ನಾಡ

ದಾಮೋದರ ಶೆಟ್ಟಿಗಾರ್



ದಾಮೋದರ ಶೆಟ್ಟಿಗಾರ್ ಅವರು ಉಡುಪಿ ಜೀವ ವಿಮಾ ನಿಗಮದಲ್ಲಿ ದುಡಿಯುತ್ತಿದ್ದು 31–12–2018ರಂದು ನಿವೃತ್ತರಾಗಿದ್ದಾರೆ. ಈ ಸಂದರ್ಭದಲ್ಲಿ ಅವರು ಯಾವಾಗಲೂ ಓದುವ ಜನಶಕ್ತಿ ವಾರ ಪತ್ರಿಕೆಗೆ 5000 ರೂಪಾಯಿ ಕೊಡುಗೆ ನೀಡಿರುತ್ತಾರೆ. ಅವರಿಗೆ ಜನಶಕ್ತಿ ಪತ್ರಿಕೆಯ ಧನ್ಯವಾದಗಳು.

ವಿಜಯ ಬ್ಯಾಂಕ್ ವಿಲೀನಿಕರಣ ಬೇಡ : ಸಿ.ಪಿ.ಐ.(ಎಂ)

ಅವಿಭಾಜಿತ ದ.ಕ. ಜಿಲ್ಲೆಯ ರೈತರು ತಮ್ಮ ಭವಿಷ್ಯಕ್ಕಾಗಿ ಸಣ್ಣ ಮಟ್ಟದಲ್ಲಿ ಆರಂಭಿಸಿದ ವಿಜಯಬ್ಯಾಂಕ್ ಇಂದು ಬ್ರಹದಾಕಾರವಾಗಿ ಬೆಳೆದಿದೆ ಎಂದು ಹೆಮ್ಮೆ ಪಡೆಯುತ್ತಿರುವಾಗಲೆ 'ಮರ್ಜರ್' (ವಿಲೀನಿಕರಣ) ಎಂಬ ಪೆಡಂಭೂತ ವಿಜಯಬ್ಯಾಂಕನ್ನೇ ನುಂಗಿ ಹಾಕಲು ಹೊರಟಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ ಮತ್ತು ಇತರ 6 ಸಹವರ್ತಿ ಬ್ಯಾಂಕುಗಳನ್ನು ವಿಲೀನಗೊಳಿಸಿ ಒಂದೇ ಬ್ಯಾಂಕನ್ನು ಸೃಷ್ಟಿಸಿ ಅದರಿಂದ ಸಾಮಾನ್ಯ ಜನತೆ ಸಂಕಷ್ಟಕ್ಕೆ ಒಳಗಾಗಿರುವಾಗಲೆ ಬ್ಯಾಂಕ್ ಆಫ್ ಬರೋಡ, ದೇನಾ ಬ್ಯಾಂಕ್ ಮತ್ತು ವಿಜಯ ಬ್ಯಾಂಕ್‌ಗಳನ್ನು ವಿಲೀನಗೊಳಿಸಿ ಕೇಂದ್ರ ಸರಕಾರ ಇನ್ನೊಂದು ಆಘಾತವನ್ನು ಸೃಷ್ಟಿಸಿದೆ.

ಈ ಹಿನ್ನಲೆಯಲ್ಲಿ ವಿಜಯಬ್ಯಾಂಕ್ ವಿಲೀನದ ವಿರುದ್ಧ





'ಗಾಂಧಿಯಿಂದ ಗೌರಿವರೆಗೆ..': ಅರ್ಥಪೂರ್ಣ ಸಾಂಸ್ಕೃತಿಕ ಸ್ಪಂದನ

ಲಿಂಗರಾಜು ಮಳವಳ್ಳಿ

1948 ಜನವರಿ 30 'ಹೇ ರಾಮ್' ಎನ್ನುತ್ತಲೇ ಪ್ರಾಣ ಬಿಟ್ಟಿದ್ದರು. ಬಿರ್ಲಾ ಮಂದಿರದಿಂದ ಪ್ರಾರ್ಥನೆ ಮುಗಿಸಿ ಬರುವಾಗ ನಮಸ್ಕರಿಸುವ ನೆಪದಲ್ಲಿ ಬಂದ ನಾಥೂರಾಂ ಗೋಡ್ಸೆ ಎಂಬ ಮತಾಂಧ ಬಾಪುವಿನ ಎದೆಗೆ ನೇರವಾಗಿ ಗುಂಡು ಹಾರಿಸಿದ್ದ.

ದೇಶಕ್ಕೆ ಸ್ವಾತಂತ್ರ್ಯದ ಸವಿಯ ಉಣ ಬಡಿಸಲು ಬಡಕಲು ದೇಹದ ಗಾಂಧಿ ಸೂರ್ಯ ಮುಳುಗದ ಸಾಮ್ರಾಜ್ಯಕ್ಕೆ ಸೂರ್ಯನ ಕಿರಣಗಳು ಕಾಣದಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು. ದೇಶದ ಎಲ್ಲ ಜನರನ್ನು ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕುವಂತೆ ಮಾಡುವ ಅಯಸ್ಕಾಂತೀಯ ಗುಣ ಗಾಂಧಿಗಿತ್ತು.

ದೇಶ ವಿಭಜನೆ ವಿರುದ್ಧ, ಅಸ್ಪೃಶ್ಯತೆ, ಕೋಮುವಾದದ ವಿರುದ್ಧವೂ ಗಾಂಧಿಯ ಹೋರಾಟ, ನಿಜ ದೇಶಭಕ್ತಿಯ ಪ್ರತೀಕವಾಗಿದ್ದವು.....

'ಪಾಪು ಗಾಂಧಿ' ಜಗತ್ತೇ ನಿಬ್ಬೆರಗಾಗುವಂತೆ 'ಬಾಪು ಗಾಂಧಿ'ಯಾದ ಬಗೆಯನ್ನು ಕೇವಲ ಒಂದೇ ತಾಸಿನಲ್ಲಿ ಹೇಳುವ ಸಾಹಸದಲ್ಲಿ ಗೆದ್ದಿತ್ತು ಎಂಬುದಕ್ಕೆ ಪ್ರೇಕ್ಷಕರ ಉದ್ಗಾರವೇ ಸಾಕ್ಷಿಯಾಗಿತ್ತು.

ಹೌದು, ಇಂಥದ್ದೊಂದು ಅಪರೂಪದ ಹಲವು ಪ್ರಸಂಗಗಳನ್ನು ತೆರೆದಿಟ್ಟದ್ದು ರಂಗ ಪ್ರಯೋಗದಲ್ಲಿ. ಇದು ಪ್ರದರ್ಶನಗೊಂಡದ್ದು 'ಸೌಹಾರ್ದ ಕರ್ನಾಟಕ' 2019 ಜನವರಿ 30 ರಂದು ಆಯೋಜಿಸಿದ್ದ 'ಗಾಂಧಿಯಿಂದ ಗೌರಿ ವರೆಗೆ' ಸಂವಾದ– ಸಾಂಸ್ಕೃತಿಕ ಸ್ಪಂದನ ಕಾರ್ಯಕ್ರಮ ದಲ್ಲಿ. ಇದರ ವ್ಯವಸ್ಥೆಗೆ ಮುಂದಾಗಿದ್ದು ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆ. ಇದರ ನಿರ್ದೇಶಕರಾಗಿದ್ದ ವಿಶುಕುಮಾರ್ ಅವರ ಕಲ್ಪನೆಯಲ್ಲಿ ಮೂಡಿದ್ದ ಈ ನಾಟಕ 'ಗಾಂಧಿ–150' ರಂಗಪಯಣ ಎನ್ನುವ ಕಾರ್ಯಕ್ರಮದಡಿಯಲ್ಲಿ, ರಾಜ್ಯಾದ್ಯಂತ 800 ಕ್ಕೂ ಹೆಚ್ಚು ಪ್ರದರ್ಶನ ನೀಡಿದ ಈ ತಂಡ ಬೆಂಗಳೂರಿನ ಸಂಸ ಬಯಲು ರಂಗ ಮಂದಿರದಲ್ಲಿ ನೀಡಿದ ಪ್ರದರ್ಶನ, ಜನರ ಮೆಚ್ಚುಗೆಗೆ ಪಾತ್ರವಾಯಿತು.

ಬೋಳುವಾರು ಮಹಮ್ಮದ್ ಕುಂಞ ವಿರಚಿತ ಈ ನಾಟಕವನ್ನು ನಿರ್ದೇಶನದ ಹೊಣೆಹೊತ್ತು ಕಾರ್ಯಕ್ರಮದ ಆಶಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದವರು ನಿರ್ದೇಶಕ ಡಾ. ಶ್ರೀಪಾದ್ ಭಟ್.

ಸೌಹಾರ್ದ ಕರ್ನಾಟಕ ಸಂಘಟನೆಯು ಗಾಂಧಿ ಹುತಾತ್ಮ ದಿನದಂದು ಆಯೋಜಿಸಿದ್ದ 'ಗಾಂಧಿಯಿಂದ ಗೌರಿವರೆಗೆ : ಸ್ವಾತಂತ್ರ್ಯ, ಅಭಿವ್ಯಕ್ತಿ, ಬಹುತ್ವ, ಸಹಬಾಳ್ವೆಗಿರುವ ಸವಾಲುಗಳು' ಎಂಬ ಸಾಂಸ್ಕೃತಿಕ ಸ್ಪಂದನೆ ಕಾರ್ಯಕ್ರಮದ ಭಾಗವಾಗಿ ಈ ನಾಟಕ ಪ್ರದರ್ಶನಗೊಂಡಿತು.

'ಸೌಹಾರ್ದತೆಗಾಗಿ ಕರ್ನಾಟಕ' ಎಂಬ ಆಶಯದಲ್ಲಿ ಕಳೆದ ವರುಷ ರಾಜ್ಯದಾದ್ಯಂತ ಬೃಹತ್ ಮಾನವ ಸರಪಳಿ ಯನ್ನು ರಚಿಸಲಾಗಿತ್ತು. ಈ ವರುಷವೂ ಸೌಹಾರ್ದತೆಗೆ ಒದಗಿರುವ ಬೆದರಿಕೆ, ಸವಾಲುಗಳ ಕುರಿತ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಸಂವಿಧಾನ ರಕ್ಷಣೆಯಲ್ಲಿ ಸಂಸದೀಯ ವ್ಯವಸ್ಥೆ ವಿಫಲ: ನ್ಯಾ ವಿ.ಗೋಪಾಲಗೌಡ

ಇದಕ್ಕೂ ಮೊದಲು ನಡೆದ ವಿಚಾರ ಹಂಚಿಕೆಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸುಪ್ರೀಂಕೋರ್ಟ್ ನ ವಿಶ್ರಾಂತ ನ್ಯಾಯಮೂರ್ತಿ ವಿ.ಗೋಪಾಲಗೌಡ ರವರು 'ದೇಶದ ಸಂವಿಧಾನ ಬಹುತ್ವ, ಸಾಮರಸ್ಯದ ಆಶಯ ಹೊಂದಿದೆಯಾದರೂ ಇಂದಿನ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ ಈ ಮಹೋನ್ನತ ಆಶಯಗಳ ಜಾರಿಗೆ ಹಾಗೂ ಅದರ ರಕ್ಷಣೆಗೆ ನಿಲ್ಲುವಲ್ಲಿ ವಿಫಲವಾಗಿದೆ" ಎಂದರು.

ತ್ರಿವಳಿ ತಲಾಖ್ ವಿಚಾರದಲ್ಲಿ ಒಂದು ನಿಲುವಿಗೆ ಬಂದು ಮಸೂದೆ ಅಂಗೀಕಾರಕ್ಕೆ ಸಿದ್ಧಗೊಂಡ ಕೇಂದ್ರ ಸರ್ಕಾರ, ಶಬರಿಮಲೆ ವಿಷಯದಲ್ಲಿ ನ್ಯಾಯಾಲಯದ ತೀರ್ಪಿನ ಬಗ್ಗೆ ತೀರಾ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ, ಸಂವಿಧಾನ ಎಲ್ಲರಿಗೂ ಲಿಂಗಭೇದವಿಲ್ಲದೇ ಸಮಾನತೆಯ ಅವಕಾಶ ಕಲ್ಪಿಸಿದೆ, ಹೀಗಿದ್ದೂ ಸಂವಿಧಾನ ಬದ್ಧವಾಗಿ ಅಧಿಕಾರ ನಡೆಸಬೇಕಾದ ಸರ್ಕಾರವೊಂದು ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂವಿಧಾನದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಲಾಗಿದೆ. ಆದರೆ ದೇಶದಲ್ಲಿ ಜನತೆ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣವಾಗುತ್ತಿದೆ ಎಂದು ದನಿ ಎತ್ತುತ್ತಿದ್ದಾರೆ. ಪ್ರಜಾಪ್ರಭುತ್ವ, ಬಹುತ್ವ ನಮ್ಮ ಸಂವಿಧಾನದ ಮೂಲ ಅಂಶಗಳು. ಆದರೆ ಅವುಗಳ ಮೇಲೆಯೇ ದಾಳಿ ನಡೆಯುತ್ತಿದೆ. ವಿಚಾರವಾದಿಗಳ ಹತ್ಯೆಯಾಗುತ್ತಿದೆ. ಹೀಗಿರುವಾಗ ಸಂವಿಧಾನ–ಕಾನೂನುಬದ್ಧ ಆಡಳಿತ ಎಲ್ಲಿ ಎಂದು ಪ್ರಶ್ನಿಸಿದ ಅವರು ಸಂವಿಧಾನ ಮತ್ತು ಅದರ ಜಾರಿಯಲ್ಲಿನ ವೈರುಧ್ಯಗಳನ್ನು ತೆರೆದಿಟ್ಟರು. ನಮ್ಮದು ಸಂಸದೀಯ ಪ್ರಜಾಪ್ರಭುತ್ವವೇ ಹೊರತು ಜನತೆಯ ಪ್ರಜಾಪ್ರಭುತ್ವ ಅಲ್ಲ ಎಂಬ ಅಂಶದತ್ತಲೂ ಗಮನ ಸೆಳೆದರು.

ಸಾಹಿತಿ, ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಅರವಿಂದ ಮಾಲಗತ್ತಿ ಯವರು ಮಾತನಾಡಿ 'ಹಿಂದೊಮ್ಮೆ ನಮ್ಮ ಒಂದು ಬರಹ ಸಂಬಂಧ ಪೊಲೀಸರು ನನ್ನ ಹಾಗೂ ಪುರುಷೋತ್ತಮ ಬಿಳಿಮಲೆ ಯವರ ಮೇಲೆ ಮಂಗಳೂರಿನಲ್ಲಿ ಸ್ವಯಂಪ್ರೇರಿತ ಕೇಸು ದಾಖಲಿಸಿದ್ದರು. ಯಾರು ಎಂದು ಪೋಲೀಸರನ್ನು ವಿಚಾರಿಸಲಾಗಿ ಅದು ತಾವೇ ಎಂದು ಉತ್ತರಿಸಿದ್ದರು. ಸಮಾಜದಲ್ಲಿ ಅಶಾಂತಿ ಮೂಡಬಹುದೆಂಬ ಕಾರಣಕ್ಕೆ ಕೇಸು ದಾಖಲಿಸಲಾಗಿದೆ ಎಂದು ಸಮಜಾಯಿಸಿ ನೀಡಿದ್ದರು. ಆದರೆ ಈಗ ಜವಾಬ್ದಾರಿ ಸ್ಥಾನದಲ್ಲಿರುವ ಕೆಲವರು ಬಹಿರಂಗವಾಗಿ ಕೈ ಕಡಿಯುತ್ತೇನೆ, ತಲೆ ಕಡಿಯುತ್ತೇನೆ, ಹತ್ಯೆ ಮಾಡುತ್ತೇವೆ ಎಂದು ಹೇಳಿಕೆ ನೀಡುತ್ತಿದ್ದರೂ ಅವರ ವಿರುದ್ಧ ಕೇಸು ದಾಖಲಿಸುತ್ತಿಲ್ಲ ಏಕೆ ಎಂದು ಪ್ರಶ್ನಿಸುತ್ತಾ, ಕೇಂದ್ರ ಸರ್ಕಾರ ಸಂವಿಧಾನಕ್ಕೆ ಸೆಡ್ಡುಹೊಡೆಯುವಂತಹ ಕೆಲಸ ಮಾಡುತ್ತಿದೆ' ಎಂದು ಆಪಾದಿಸಿದರು.

ಕುವೆಂಪು ಭಾಷಾ ಭಾರತಿ ನಿರ್ದೇಶಕ ಡಾ.ಕೆ. ಮರುಳ ಸಿದ್ದಪ್ಪ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ವಸುಂಧರಾ ಭೂಪತಿ, ಚಿಂತಕ ರೆ.ಫಾದರ್ ಡಾ.ಮನೋಹರ್ ಚಂದ್ರ ಪ್ರಸಾದ್, ಕಾರ್ಮಿಕ ನಾಯಕರಾದ ಕಾಂ.ಆರ್.ಶ್ರೀನಿವಾಸ್, ಕಾಂ. ಕೆ.ಎನ್. ಉಮೇಶ್, ವೇದಿಕೆಯಲ್ಲಿದ್ದರು.

ಕಾಂ.ಕೆ.ಎನ್.ಉಮೇಶ್ ರವರು ಹಿಂದುತ್ವದ ಪ್ರತಿಪಾದಕಿ, ದ ನಾಯಕಿ ಪೂಜಾ ಪಾಂಡೆ ಗಾಂಧೀಜಿ ಯವರ ಭಾವಚಿತ್ರದಲ್ಲಿ ಅವರ ಎದೆಗೆ ಗುಂಡು ಹೊಡೆಯುತ್ತಿರುವುದು ಪ್ರಸಕ್ತ ಸನ್ನಿವೇಶ ಎಷ್ಟು ಅಪಾಯಕಾರಿ ಮಟ್ಟದಲ್ಲಿದೆ ಎಂಬುನ್ನು ತೋರಿಸುತ್ತದೆ. ಕೋಮುವಾದಿ, ಮತೀಯವಾದಿಗಳು ಒಡ್ಡುತ್ತಿರುವ ಈ ಕಾಲದ ಸವಾಲುಗಳನ್ನು ಸೋಲಿಸಲೇಬೇಕು ಎಂದರು.

ಆರಂಭದಲ್ಲಿ ಎಸ್.ವೈ.ಗುರುಶಾಂತ್ ರವರು ಸ್ವಾಗತಿಸಿ ಪ್ರಸ್ತಾವನೆ ಮಾತುಗಳನ್ನಾಡಿದರು. ಕಳೆದ ವರುಷದ ಮಾನವ ಸರಪಳಿಯಲ್ಲಿ ಲಕ್ಷಾಂತರ ಜನ ವ್ಯಾಪಕವಾಗಿ ಎಲ್ಲಾ ಜಿಲ್ಲೆಗಳಲ್ಲಿ ಭಾಗವಹಿಸಿದ್ದು ಐತಿಹಾಸಿಕ ದಾಖಲೆ ಎಂದು ನೆನಪಿಸಿದ ಅವರು ಸೌಹಾರ್ದತೆಯನ್ನು ಉಳಿಸುವ ಪ್ರಯತ್ನ, ಕಾರ್ಯಕ್ರಮ ಗಳನ್ನು ನಿರಂತರವಾಗಿಸಬೇಕು ಎಂದರು. ದಲಿತ ಹಕ್ಕುಗಳ ಸಮಿತಿಯ ನಾಯಕರಾದ ಗೋಪಾಲಕೃಷ್ಣ ಅರಳಹಳ್ಳಿ ವಂದಿಸಿದರು.

ನಂತರ ನಡೆದ ಕವಿಗೋಷ್ಠಿಯಲ್ಲಿ ಪತ್ರಕರ್ತ ಆರ್.ಜಿ.ಹಳ್ಳಿ ನಾಗರಾಜ್, ಹೆಚ್.ಆರ್.ಸುಜಾತ, ಗಿರೀಶ್ ಹಂದಲಗೆರೆ, ಚೇತನಾ ತೀರ್ಥಹಳ್ಳಿ, ಕೆ.ವಿನೋದ್ ಮತ್ತು ಶ್ರೀಕಾಂತ್ ಹವಲ್ದಾರ್ ಸ್ವರಚಿತ ಕವನ ವಾಚನ ಮಾಡಿದರು.ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಕವಯತ್ರಿ ಶಾಕಿರಾ ಖಾನುಮ್ ರವರು ಕವನ ವಾಚಿಸಿದರಲ್ಲದೇ ಸನ್ನಿವೇಶ ಮತ್ತು ಕವಿಗಳ ಆಶಯಗಳ ಕುರಿತು ಮಾತನಾಡಿದರು.

ಡಾ.ಜಯಲಕ್ಷ್ಮಿ, ಜೋಗಿಲ ಸಿದ್ಧರಾಜು, ಮೋಹನ ಮತ್ತವರ ತಂಡ, ಕೆ.ಮಹಂತೇಶ್ ಅವರ ಹಾಡುಗಳು ಕಾರ್ಯಕ್ರಮವನ್ನು ಮತ್ತಷ್ಟೂ ಅರ್ಥಪೂರ್ಣ ಗೊಳಿಸಿದವು.

ಸಿನಿಮಾ ನಿರ್ದೇಶಕ ಪಿ.ಶೇಷಾದ್ರಿ, ವಾರ್ತಾ ಇಲಾಖೆ ನಿವೃತ್ತ ನಿರ್ದೇಶಕ ವಿಶುಕುಮಾರ್, ಸಾಹಿತಿ ಬೋಳುವಾರು ಮಹಮ್ಮದ್ ಕುಂಞ, ಸೂಫಿ ವಲಿಬಾ ಹಾಗೂ ಸೂಫಿ ಗುರುಗಳು, ಶೂದ್ರ ಶ್ರೀನಿವಾಸ್, ಲಕ್ಷ್ಮಿನಾರಾಯಣ ನಾಗವಾರ, ಡಾ.ಬಿ.ಆರ್.ಮಂಜುನಾಥ, ಡಾ.ಲೀಲಾ ಸಂಪಿಗೆ, ಜಯಕುಮಾರ್, ವಡ್ಡಗೆರೆ ನಾಗರಾಜಯ್ಯ, ಡಾ.ಶ್ರೀಪಾದ ಭಟ್, ಜಿ.ಸಿ.ಬಯ್ಯಾರೆಡ್ಡಿ, ಬಸವರಾಜ್ ಪೂಜಾರ್, ಗೌರಮ್ಮ, ಹೆಚ್.ಎನ್.ಗೋಪಾಲಗೌಡ, ಟಿ.ಸುರೇಂದ್ರರಾವ್, ಕೆ.ಎಸ್.ವಿಮಲಾ, ಕೆ.ಎಸ್.ಲಕ್ಷ್ಮಿ, ವಿ.ಕೋದಂಡರಾಮ್ ಡಾ.ಕೆ.ಪ್ರಕಾಶ್ ಮೊದಲಾದ ಪ್ರಮುಖರು, ಹಲವು ಸಂಘಟನೆಗಳ ಮುಖಂಡರು ಅಲ್ಲದೇ ನೂರಾರು ಜನರು ಬೆಂಗಳೂರಿನ ಕಲಾಕ್ಷೇತ್ರದ ಸಂಸ ರಂಗ ಬಯಲು ಮಂದಿರದಲ್ಲಿನ ಸಂಜೆಯ ಈ ಕಾರ್ಯಕ್ರಮ ದಲ್ಲಿ ಭಾಗವಹಿಸಿದ್ದರು. ವಾರ್ತಾ ಇಲಾಖೆ, ಗಾಂದೀ ಭವನ ಸಹಾಯ, ಸಹಕಾರ ನೀಡಿದ್ದವು. ■

ವಿಜಯಬ್ಯಾಂಕ್ ಉಳಿಸಿ ಹೋರಾಟ ಸಮಿತಿ ರಚಿಸಲಾಗಿದ್ದು ಫೆಬ್ರವರಿ 2, 2019 ರಂದು ಮುಲ್ಕಿ, ಕಾರ್ನಾಡು ಗಾಂಧಿ ಮೈದಾನದಲ್ಲಿ ಪ್ರತಿಭಟನೆಯನ್ನು ಹಮ್ಮಿಕೊಂಡಿದೆ.

ಬ್ಯಾಂಕುಗಳು ಇಂದು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಅದರಲ್ಲಿ ಪ್ರಮುಖವಾಗಿ ಹೆಚ್ಚುತ್ತಿರುವ **"ಕೆಟ್ಟ ಸಾಲದ"** ಪ್ರಮಾಣ (ಎನ್.ಪಿ.ಎ). ಕೆಟ್ಟ ಸಾಲದ ಏರುವಿಕೆಗೆ ಕೇಂದ್ರ ಸರಕಾರದ ತಪ್ಪು ಆರ್ಥಿಕ ನೀತಿ ಒಂದೆಡೆ ಕಾರಣವಾಗಿದ್ದರೆ, ಬ್ಯಾಂಕಿನ ಉನ್ನತ ಅಧಿಕಾರಿಗಳು – ರಾಜಕಾರಣಿಗಳು – ದೊಡ್ಡ ಉದ್ಯಮಿದಾರರ ದುಷ್ಟಕೂಟ ಕಾರಣವಾಗಿದೆ. ನೂರಾರು ಕೋಟಿ ರೂ. ಸಾಲ ಪಡೆದವರು ಸಾಲ ವಾಪಾಸು ನೀಡದೆ ವಿದೇಶದಲ್ಲಿ ನೆಲೆಸಿರುವುದನ್ನು ಕಾಣುತ್ತೇವೆ. ವಿಲೀನಿಕರಣವು ತಾವು ಮಾಡಿದ ತಪ್ಪನ್ನು ಮುಚ್ಚಿ ಹಾಕುವ ಪ್ರಯತ್ನ ಎಂದು ಸಿ.ಪಿ.ಐ.(ಎಂ) ಆಪಾದಿಸಿದೆ.

ಆದ್ದರಿಂದ ಫೆಬ್ರವರಿ 2 ತಾರೀಕಿನಂದು ನಡೆಯುವ ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕೆಂದು ಸಿ.ಪಿ.ಐ.(ಎಂ) ತನ್ನ ಸದಸ್ಯರಿಗೆ ಮತ್ತು ನಾಗರಿಕರಿಗೆ ಮನವಿ ಮಾಡುತ್ತದೆ.

ಕೇಂದ್ರ ಸರಕಾರವು ಜಾರಿಗೆ ತರಲು ಯತ್ನಿಸುತ್ತಿರುವ ವಿಲೀನಿಕರಣ ನೀತಿಯಿಂದ ದೇಶದ ಮತ್ತು ವಿದೇಶದ ಉದ್ದಿಮೆದಾರರಿಗೆ ಅನುಕೂಲವಾಗಲಿದೆ ಮತ್ತು ಮುಂದೆ ಖಾಸಗೀಕರಣಕ್ಕೆ ದಾರಿ ಮಾಡಿ ಕೊಡಲಿದೆ ಎಂದು ಸಿ.ಪಿ.ಐ.(ಎಂ) ಉಡುಪಿ ಜಿಲ್ಲಾ ಸಮಿತಿ ಅಭಿಪ್ರಾಯ ಪಡುತ್ತದೆ. ●



ಮದ್ಯೋದ್ಯಮ, ಬಂಡವಳಿಗರು ಮತ್ತು ಮಹಿಳಾ ಹೋರಾಟ

ಜಾಗತಿಕ ಬಂಡವಾಳವು ಸರಕು ಬಂಡವಾಳದಿಂದ, ಸೇವೆಗಳ ಬಂಡವಾಳ, ಹಣಕಾಸು ಬಂಡವಾಳ, ಡಿಜಿಟಲ್ ಬಂಡವಾಳ ಹೀಗೆ ತನ್ನ ಉಳಿವಿಗಾಗಿ ವೇಷ ಬದಲಾಯಿಸುತ್ತಾ, ಫ್ಯಾಸೀವಾದದ ಕಡೆಗೆ ಸಾಗುತ್ತಿರುವಾಗ ಶ್ರಮಿಕರ ಸಂಘಟನಾ ಸ್ವರೂಪಗಳು, ಹೋರಾಟದ ವಿಧಾನಗಳು ಬದಲಾಗುತ್ತಾ ರೈತ ಹೋರಾಟ, ದಲಿತ ಹೋರಾಟಗಳಾಗಿ, ಶ್ರಮದ ಸ್ತ್ರೀಕರಣವು ಹೆಚ್ಚು ಹೆಚ್ಚು ವ್ಯಾಪಕವಾಗುತ್ತಾ, ಮಹಿಳಾ ಹೋರಾಟಗಳಾಗಿ, ಕುಟುಂಬಗಳ ಸಾತ್ವಿಕ ಸಿಟ್ಟಿನ ಮಹಿಳೆಯರಲ್ಲಿ ಸುಪ್ತವಾಗಿರುವ ಹೋರಾಟದ ಕೆಚ್ಚನ್ನು ಬಡಿದೆಬ್ಬಿಸುತ್ತಿದೆಯೇ ಎಂಬ ಪ್ರಶ್ನೆಯನ್ನು ಮದ್ಯದ ನಿಷೇಧಕ್ಕಾಗಿ ಜಾಥಾ ನಡೆಸಿದ ಮಹಿಳೆಯರ ಸಂಘಟನೆಯು ಎತ್ತುತ್ತಿದೆ. ಜನಸಮುದಾಯದ ಪಾಲಿಗೆ ಇದು ಖಂಡಿತವಾಗಿಯೂ ಒಂದು ಆಶಾದಾಯಕ ಬೆಳವಣಿಗೆ.



ಪ್ರೊ. ವಿ.ಎಸ್.ಲಕ್ಷ್ಮೀನಾರಾಯಣ

ದೇವರ ಮೇಲಿನ ಶ್ರದ್ಧೆ-ನಂಬಿಕೆಗಳಿಗೂ ಮದ್ಯಸೇವನೆ-ವ್ಯಸನಗಳಿಗೂ ತುಂಬಾ ಹತ್ತಿರದ ಸಾಮ್ಯತೆಗಳಿವೆ. ಸಂದರ್ಭಾನುಸಾರವಾಗಿ ಎರಡೂ ಮಾನಸಿಕವಾಗಿ ಸಾವಿನ ಭಯ ಮತ್ತು ಸೋಲಿನ ಭಯದ ವಿರುದ್ಧ ಭ್ರಾಮಕ ನೆಲೆಯಲ್ಲಿ ರಕ್ಷಣೆಯನ್ನು ಕೊಡುತ್ತವೆ. ನೊಂದ ಮನಸ್ಸುಗಳಿಗೆ ಹತಾಶ ಸ್ಥಿತಿಯಲ್ಲಿ ಆಸರೆಯಾಗಿ ಬಳಕೆಯಾಗುತ್ತವೆ. ಮೈಮರೆಸುವ ಸಾಧನಗಳಾಗಿ ಭ್ರಾಮಕ ಸುಖ-ಸಂತೋಷಗಳನ್ನು ಕೊಡುತ್ತವೆ. ಬಡತನ 'ಮೂಲದ ಕಷ್ಟ-ಕೋಟಲೆಗಳನ್ನು ತಾತ್ಕಾಲಿಕವಾಗಿ ಮರೆಮಾಡುವ ಉಪಾಯಗಳಾಗಿ ಜನಪ್ರಿಯವಾಗಿವೆ. ಸಾಮಾಜಿಕವಾಗಿ ಮನರಂಜನೆ ಮತ್ತು ವಿನೋದಗಳನ್ನೊದಗಿಸುವ ಕಾಲಕ್ಷೇಪದ ವ್ಯವಸ್ಥೆಗಳಾಗಿವೆ. ಆರ್ಥಿಕವಾಗಿ ಉದ್ಯಮ ಮತ್ತು ಜೀವನೋಪಾಯ ಸಾಧನಗಳಾಗಿ ಆದಾಯದ ಮೂಲಗಳಾಗಿವೆ. ಕಪ್ಪುಹಣದ ಸಂಗ್ರಹಣೆ ಮತ್ತು ವಾಹಕಗಳಾಗಿವೆ. ರಾಜಕೀಯವಾಗಿ ಜನಸಮುದಾಯದ ಸಂಕೀರ್ಣ ನಿಯಂತ್ರಕಗಳಾಗಿವೆ. ಹೀಗಾಗಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ದೇವರು ಮತ್ತು ಮದ್ಯಗಳಿಗೆ ವಿಶಿಷ್ಟ ಸ್ಥಾನವಿದೆ. ಇವೆರಡಕ್ಕೂ ಇರುವ ಪ್ರಮುಖ ವ್ಯತ್ಯಾಸವೆಂದರೆ, ಯಾವುದೇ ವ್ಯಕ್ತಿಗೆ ದೇವರ ಬಗೆಗಿನ ಶ್ರದ್ಧೆ-ನಂಬಿಕೆಗಳು ಅತಿರೇಕಕ್ಕೆ ಹೋದರೆ ಅಂಥ ವ್ಯಕ್ತಿಯ ಕೌಟುಂಬಿಕ ಸಂಬಂಧಗಳು ಶಿಥಿಲಗೊಂಡರೂ ಸಾಧು, ಸನ್ಯಾಸಿ-ಸಂತ-ಮಹಾತ್ಮರೆನಿಸಿ 'ಪೂಜ್ಯ'ರಾಗುತ್ತಾರೆ. ಸಾಂಸ್ಥಿಕ ರೂಪದಲ್ಲಿ ದೇವಸ್ಥಾನ, ಮಠ-ಮಾನ್ಯಗಳ ಕೇಂದ್ರ ವ್ಯಕ್ತಿಗಳಾಗಿ, ಇಲ್ಲವೆ ಮುಖ್ಯಸ್ಥರಾಗಿ ಧರ್ಮಗುರು, ಮಠಾಧಿಪತಿ ಅಥವಾ ಧರ್ಮಾಧಿಕಾರಿಯಾಗಿ ಜನರನ್ನು ನಿಯಂತ್ರಿಸುತ್ತಾರೆ. ಈ ಕಾರಣಕ್ಕಾಗಿ ರಾಜಕಾರಣಿಗಳಿಗೆ ಹತ್ತಿರವಾಗುತ್ತಾರೆ. ಹೀಗೆ ರಾಜಕೀಯ ಶಕ್ತಿಕೇಂದ್ರಗಳ ದಲ್ಲಾಳಿಗಳಾಗಿರುತ್ತಾರೆ.

ಮದ್ಯಸೇವನೆ ಮತ್ತು ವ್ಯಸನಗಳ ಅತಿರೇಕವನ್ನು ಮುಟ್ಟಿದ ವ್ಯಕ್ತಿಗಳಲ್ಲೂ ಸಹ ಸಾಧು-ಸಂತ-ಸನ್ಯಾಸಿ-ಮಹಾತ್ಮರ ಜೀವನದಲ್ಲಾಗುವಂತೆ ಕೌಟುಂಬಿಕ ಸಂಬಂಧಗಳು ಶಿಥಿಲವಾಗುತ್ತವೆ. ಆದರೆ ಅಂಥ ವ್ಯಕ್ತಿಗಳು ಆರ್ಥಿಕವಾಗಿ ಜರ್ಜರಿತರಾಗಿ, ನೈತಿಕವಾಗಿ ಭ್ರಷ್ಟರು, ಸುಳ್ಳುಗಾರರು, ಒಟ್ಟಿನಲ್ಲಿ ಕುಡುಕರೆಂದು ಅವಹೇಳನೆಗೊಳಗಾಗುತ್ತಾರೆಯೇ ಹೊರತು ಎಂದಿಗೂ ಪೂಜ್ಯರಾಗುವುದಿಲ್ಲ. ಆದರೆ ಮದ್ಯದ ಬಳಕೆದಾರರಾಗಿ, ಅತ್ಯಂತ ಲಾಭದಾಯಕವಾದ, ರಾಕ್ಷಸ ಉದ್ಯಮವೆನ್ನಬಹುದಾದ ಮದ್ಯೋದ್ಯಮದ ಆಧಾರಸ್ತಂಭಗಳಾಗಿರುತ್ತಾರೆ. ಬಂಡವಾಳಶಾಹೀ ಸರ್ಕಾರಗಳ ತೆರಿಗೆ ಮೂಲದ ಸಂಪನ್ಮೂಲ ಸಂಗ್ರಹಣೆಯಲ್ಲಿ ಅತ್ಯಂತ ಹೆಚ್ಚಿನ 'ಆದಾಯ'ವನ್ನು ತರುವ ಬಲಿಪಶುಗಳಾಗುತ್ತಾರೆ.



ಈ ಕಾರಣಗಳಿಗಾಗಿಯೇ ಎಲ್ಲ ಸರ್ಕಾರಗಳೂ ಪಕ್ಷಭೇದವಿಲ್ಲದೆ ಒಂದಲ್ಲ ಒಂದು ಕಾರಣವನ್ನೊಡ್ಡಿ ಮದ್ಯತಯಾರಿಕೆಯನ್ನು ಸಮರ್ಥಿಸುವ ಮೂಲಕ ಮದ್ಯೋದ್ಯಮದ ಬಂಡವಳಿಗರನ್ನು ರಕ್ಷಿಸುತ್ತಾರೆ. ಇದೇ ಕಾರಣಕ್ಕಾಗಿಯೇ ಬಂಡವಾಳಶಾಹಿ ವ್ಯವಸ್ಥೆಯ ಫಲಾನುಭವಿಗಳೂ, ಬಂಡವಳಿಗರ ವರ್ಗಬಂಧುಗಳೂ ಆದ ಮಠಾಧೀಶರು ಮತ್ತು ಧರ್ಮಗುರುಗಳು ಮದ್ಯತಯಾರಿಕೆಯ ವಿರುದ್ಧ, ಮದ್ಯದ ಬಳಕೆಯ ವಿರುದ್ಧ ಸೊಲ್ಲೆತ್ತದೆ ಚತುರ ಮೌನಿಗಳಾಗಿದ್ದು ಬಿಡುತ್ತಾರೆ. ಹೆಚ್ಚೆಂದರೆ 'ಮದ್ಯಪಾನ ಆತ್ಮವನ್ನು ನಾಶಮಾಡುತ್ತದೆ' ಎಂಬಂಥ ಯಾರಿಗೂ ತಗಲದ ಉಪದೇಶ ಬಾಣಗಳನ್ನು ಮದ್ಯದ ವಿರುದ್ಧ ಆಕಾಶಕ್ಕೆಸೆಯುತ್ತಾ ಜಯಂತಿ, ವರ್ಧಂತಿ, ಪುಣ್ಯತಿಥಿ, ಉತ್ಸವ, ಮಹಾಮಸ್ತಕಾಭಿಷೇಕಗಳಲ್ಲಿ ಮುಖ ಮರೆಸಿಕೊಳ್ಳುತ್ತಾರೆ. ಆತ್ಮದ ಅವಿನಾಶತ್ವದ ಬಗ್ಗೆ ಅವರೇ ಹೇಳಿಕೊಳ್ಳುವ "ನೈನಂ ಛಿದಂತಿ ಶಸ್ತ್ರಾಣಿ, ನೈನಂ ದಹತಿ ಪಾವಕಃ..."ಇತ್ಯಾದಿ ಮಾತುಗಳೆಲ್ಲಾ ಅವರಿಗೆ ಆಗ ಮರೆತೇಹೋಗಿರುತ್ತವೆ.

ಇನ್ನು, ಬಂಡವಾಳ ಸಂಚಯದ 'ರಹಸ್ಯ'ವನ್ನು ಭೇದಿಸಲು, ಬಡತನದ ಮೂಲವನ್ನು ಅರ್ಥಮಾಡಿಕೊಳ್ಳಲು ಹಿಂದೆಗೆಯುವ, ಆದರೆ ಬಡವರ ಕ್ರೋಧವನ್ನು ಸಾಂತ್ವನಗೊಳಿಸಿ ವ್ಯವಸ್ಥೆಯನ್ನು ಸಮಾಜವಾದದಿಂದ ರಕ್ಷಿಸುವ ಕೆಲಸವನ್ನೇ ತಮ್ಮ ಉದ್ಯೋಗವನ್ನಾಗಿಸಿಕೊಳ್ಳುವ ಸರ್ಕಾರೇತರ ಸೇವಾ ಸಂಸ್ಥೆಗಳು ಮದ್ಯ ಮತ್ತಿತರ ಅಮಲುಕಾರಕಗಳ ಸಂತ್ರಸ್ತರಿಗೆ ಸಣ್ಣ ಪುಟ್ಟ ಸಹಾಯ ಮಾಡುತ್ತಾರೆಯೇ ಹೊರತು ಮದ್ಯತಯಾರಿಕೆಯ ವಿರುದ್ಧ ಬಂಡೇಳುವ ಜನಾಂದೋಲನಗಳಲ್ಲಿ ಭಾಗಿಗಳಾಗುವುದಿಲ್ಲ. ಮದ್ಯದ 'ಮಿತಪಾನದಿಂದ ತೊಂದರೆಯಿಲ್ಲ', 'ಸಾಮಾಜಿಕ ಪಾನ ಒಳ್ಳೆಯದು', 'ಮದ್ಯಸಂಯಮ ಸಾಧ್ಯ', 'ಸಂಪೂರ್ಣ ವರ್ಜನೆ ಅಸಾಧ್ಯ', 'ವಿವೇಕಯುತ ಬಳಕೆ ಬೇಕು', 'ಆರೋಗ್ಯವರ್ಧನೆಗೆ ಸಹಾಯಕ', 'ಇತರ ಅಮಲುಕಾರಕ ವಸ್ತುಗಳಿಂದ ರಕ್ಷಣೆಗಾಗಿ ಮದ್ಯಪಾನ ಅಗತ್ಯ' 'ಮದ್ಯೋದ್ಯಮದ ಉದ್ಯೋಗಿಗಳ ಹಿತರಕ್ಷಣೆಯೂ ಮುಖ್ಯ', 'ಸರ್ಕಾರದ ಮುಖ್ಯ ಆದಾಯ ಮೂಲವಾಗಿ ಅನಿವಾರ್ಯ', ಮುಂತಾದ ಕಾರಣಗಳಿಗಾಗಿ ಮದ್ಯತಯಾರಿಕೆ ಬೇಕೆನ್ನುವವರು, ತಿಳಿದೋ, ತಿಳಿಯದೆಯೋ ಮದ್ಯೋದ್ಯಮದ ಸಮರ್ಥಕರೇ ಆಗಿಬಿಡುತ್ತಾರೆ. ನಮ್ಮ ಸಂವಿಧಾನವು ಜನರಿಗೆ ಆಯ್ಕೆಯ ಸ್ವಾತಂತ್ರ್ಯವನ್ನು ಕೊಟ್ಟಿದೆಯಾದ್ದರಿಂದ ಪ್ರಜಾತಾಂತ್ರಿಕವಾಗಿ ಮದ್ಯೋದ್ಯಮವನ್ನು ಮುಚ್ಚಲಾಗದು ಎನ್ನುವ ಪ್ರಜಾಪ್ರಭುತ್ವವಾದಿಗಳು 'ಮದ್ಯವು' ಒಂದು ವಿಷವಸ್ತು ಎಂದು ಸ್ಪಷ್ಟ ಮಾತುಗಳಲ್ಲಿ ಹೇಳುವ ವೈದ್ಯ-ವಿಜ್ಞಾನಿಗಳ ಖಚಿತ ಅಭಿಪ್ರಾಯವನ್ನು ಮರೆತು ಮಾತನಾಡುತ್ತಾರೆ. ವ್ಯಕ್ತಿಗಳ ಮಟ್ಟದಲ್ಲಿ, ವೈದ್ಯರು, ವಿಜ್ಞಾನಿಗಳು, ತಂತ್ರಜ್ಞರು, ಕಲಾವಿದರು, ಶಿಕ್ಷಣತಜ್ಞರು, ಶಿಕ್ಷಕರು, ನ್ಯಾಯವಾದಿಗಳು, ನ್ಯಾಯಾಧೀಶರು, ಮುಂತಾದ ಕಸುಬುದಾರ-ಉದ್ಯೋಗಿಗಳನ್ನು ಒಳಗೊಂಡು, ಎಡಪಕ್ಷ, ಬಲಪಕ್ಷ, ನಡುಪಕ್ಷ, ಮುಂತಾದ ಪಕ್ಷಭೇಧಗಳನ್ನು ದಾಟಿದ ರಾಜಕೀಯ ಪಕ್ಷಗಳ ಸದಸ್ಯ-ಸಮರ್ಥಕರಿರುವುದರಿಂದಲೇ ಮದ್ಯೋದ್ಯಮವನ್ನು ಕೇವಲ ಆರ್ಥಿಕ ಚಟುವಟಿಕೆಯೆಂದು, ವ್ಯಕ್ತಿಮಟ್ಟದ ನೈತಿಕ, ಪ್ರಜಾತಾಂತ್ರಿಕ ಆಯ್ಕೆಯೆಂದು ನೋಡದೆ ಬಂಡವಾಳಶಾಹಿಯ ಕೈಲಿರುವ ಸಂಕೀರ್ಣ ಶೋಷಣಾ ಸಾಧನವೆಂದು ಪರಿಗಣಿಸಬೇಕಾಗುತ್ತದೆ.

ಶ್ರೀಮಂತ-ಬಡವ, ಕೈಗಾರಿಕೋದ್ಯಮಿ-ಶ್ರಮಿಕ ಎಂಬ ವರ್ಗಭೇದಕ್ಕೆ ಕುರುಡಾಗಿ ಬಡವರು ಮದ್ಯಸೇವನೆಯಿಂದ ಹಾಳಾಗುತ್ತಾರೆ, ಆದ್ದರಿಂದ ಬಡವರು ಕುಡಿಯಬಾರದೇ ಹೊರತು ಶ್ರೀಮಂತರು ಕುಡಿಯಲು ಸ್ವತಂತ್ರರು ಎಂದು ಹೇಳುವವರಿದ್ದಾರೆ. ಮದ್ಯಸೇವಿಸುವ ಬಡವರು ಹಾಳಾಗುವುದು ಮದ್ಯಸೇವನೆಯಿಂದಲ್ಲ, ಬಡವರಾಗಿರುವುದರಿಂದ. ಅಂದರೆ ಮದ್ಯದ ಬಳಕೆಯಿಂದ ಆಗುವ ತೊಂದರೆಯನ್ನು ಎದುರಿಸುವ ಆರ್ಥಿಕ ಬಲವಿಲ್ಲದ್ದರಿಂದ. ದೀರ್ಘಕಾಲೀನ ಮದ್ಯಸೇವನೆಯ ತೀವ್ರ ಪರಿಣಾಮಗಳಾದ ಯಕೃತ್ತಿನ ಕಾಯಿಲೆ, ಮೂತ್ರಪಿಂಡಗಳ ವೈಫಲ್ಯ ಮುಂತಾದ ತೊಂದರೆಗಳು ಬಡವ-ಶ್ರೀಮಂತ ಇಬ್ಬರಿಗೂ ಆಗಿಯೇ ಆಗುತ್ತವೆ, ಶ್ರೀಮಂತರಿಗೆ ಹಣದ ಬಲದಿಂದಾಗಿ ದೇಶೀಯವಾಗಿ ಅಥವಾ ವಿದೇಶೀಯವಾಗಿ ಲಭ್ಯವಿರುವ ಅತ್ಯುತ್ತಮ ವೈದ್ಯಕೀಯ ಸಹಾಯವನ್ನು ಪಡೆದು ಗುಣಮುಖರಾಗುವುದು ಅಥವಾ ನರಳುತ್ತಲೇ ಸಾವನ್ನು ಮುಂದೂಡುವುದು ಸಾಧ್ಯ. ಬಡವರಿಗೆ ಹಣದ ಬಲವಿಲ್ಲದ್ದರಿಂದ ಗುಣಮುಖರಾಗುವುದು ಅಥವಾ ನರಳುತ್ತಲಾದರೂ ಸಾವನ್ನು ಮುಂದೂಡುವುದು ಅಸಾಧ್ಯ. ಸಾಲದ ಹೊರೆಗೆ ಸಿಲುಕಿದರೆ ಕಷ್ಟಸಾಧ್ಯ. ಹೀಗಾಗಿ ದೀರ್ಘನರಳಿಕೆ ಅಥವಾ ಅನಿವಾರ್ಯ ಮರಣವಲ್ಲದೆ, ಕುಟುಂಬದ ಇತರ ಸದಸ್ಯರ ತಲೆಯ ಮೇಲೆ ಹೆಚ್ಚುವ ಸಾಲದ ಹೊರೆಯು ಹೆಚ್ಚುವರಿಯಾಗಿ ಬರುವ ಕಷ್ಟ.

ಮದ್ಯೋದ್ಯಮವು ತನ್ನ ಉತ್ಪನ್ನಗಳ ನೇರ ಬಳಕೆದಾರರನ್ನು ಮಾತ್ರ ಕಷ್ಟಕ್ಕೀಡುಮಾಡುವುದಿಲ್ಲ. ಕುಟುಂಬದ ಸದಸ್ಯರ ನಿರ್ವಹಣೆಯ ಜವಾಬ್ದಾರಿ ಮದ್ಯದ ಬಳಕೆದಾರನ ಮೇಲಿದ್ದಾಗಲಂತೂ ಇಡೀ ಕುಟುಂಬವೇ ಸಂಕಷ್ಟಕ್ಕೆ ಸಿಲುಕಿ ನರಳುತ್ತದೆ. ಕುಟುಂಬದ ನಿರ್ವಹಣೆಗೆ ಅವಶ್ಯಕವಾದ ಜೀವನಾಧಾರಸಾಧನಗಳನ್ನು ಹೊಂದಿಸಿಕೊಳ್ಳಲು ಸಂಪನ್ಮೂಲದ ಕೊರತೆ ಕಾಡುತ್ತದೆ. ಕುಡಿತದ ಖರ್ಚು ಹೆಚ್ಚಿದಂತೆಲ್ಲಾ ಅಸಹನೆ, ಅಶಾಂತಿ, ಮನಸ್ತಾಪ, ಜಗಳಗಳು ಸಾಮಾನ್ಯವಾಗುತ್ತದೆ. ಮನೆ ಎಂಬುದು ನೆಮ್ಮದಿ-ಭದ್ರತೆಗಳ ತಾಣವಾಗಿರುವ ಬದಲು ನಿತ್ಯನರಕದ ಗೂಡಾಗುತ್ತದೆ. ಅದರ ನೇರ ಪರಿಣಾಮ ತಾಯಿ ಅಥವಾ ಹೆಂಡತಿಯ ಮೇಲಾಗುತ್ತದೆ. ಮದ್ಯವ್ಯಸನಿಗೆ ತನ್ನ ನಿತ್ಯದ ಮದ್ಯಕ್ಕಾಗಿ ಹಣ ಹೊಂಚುವುದು ಆದ್ಯತೆಯ ಪ್ರಶ್ನೆಯಾದಾಗ ಕುಟುಂಬವು ಛಿದ್ರವಾಗುತ್ತದೆ. ಕೌಟುಂಬಿಕ ಕ್ರೌರ್ಯ, ಪೀಡನೆ, ಕೊಲೆಗಳನ್ನು ತಾಂತ್ರಿಕವಾಗಿ ಅಪರಾಧವನ್ನಾಗಿ ನೋಡುವವರಿಗೆ ಮದ್ಯದ ಮೂಲಕ ಹೆಚ್ಚುವ ಬಡತನವು ಸಮಸ್ಯೆಯ ಮೂಲವಾಗಿ ಕಾಣಿಸುವುದಿಲ್ಲ. ದೇವರ ಪಟಗಳಿಂದ ರಾರಾಜಿಸುವ ಮದ್ಯದಂಗಡಿಗಳ ಮುಂದೆ, ಮಿಣುಕು ದೀಪದ ಬಾರ್‌ಗಳಲ್ಲಿ, ಗುಂಡಿ-ಗೊಟರುಗಳು, ಕತ್ತಲೆ ತುಂಬಿದ ರಸ್ತೆ, ಫುಟ್‌ಪಾತ್, ಪಾರ್ಕುಗಳು-ಎಲ್ಲೆಂದರಲ್ಲಿ ಕಾಣಸಿಗುವ 'ಕೊಳಕು ವ್ಯಕ್ತಿತ್ವದ ಬೇಜವಾಬ್ದಾರಿಯ, ನತದೃಷ್ಟ ಕುಡುಕರು' ಶುಭ್ರ ವ್ಯಕ್ತಿತ್ವದ ನೈತಿಕತೆಯ ಬೆಳಕಿನಲ್ಲಿ ತಿರಸ್ಕಾರಕ್ಕೆ ಒಳಗಾಗುತ್ತಾರೆ. ಸಿನೆಮಾ, ಟಿವಿ ಷೋ, ನಾಟಕಗಳಲ್ಲಿ ನೋಡುವವರನ್ನು ರಂಜಿಸುವ ಪಾತ್ರಗಳಿಗೆ ಈ ಕುಡುಕರೇ ಸ್ಫೂರ್ತಿ.

ಅಲ್ಲದೆ ಕುಡಿದು ವಾಹನ ಚಾಲನೆಮಾಡಿ ಅಪಘಾತಗಳಿಗೆ ಕಾರಣವಾಗುವ ಚಾಲಕರ ಚಾಲನಶಕ್ತಿಯಾಗಿ, ಮೋಜಿಗೆಂದು ಕುಡಿದು ನೀರಲ್ಲಿ ಮುಳುಗಿ ಸಾಯುವ ಯುವಕ-ಯುವತಿಯರ ಮೋಜಿನ ಜೀವನೋತ್ಸಾಹವಾಗಿ, ರಸ್ತೆಗಳಲ್ಲೇ ಹೊಡೆದಾಡಿ ಪ್ರಾಣ ತೆಗೆಯುವ ರೌಡಿಗಳ ಕ್ರೋಧವಾಗಿ, ಅವಕಾಶ ಸಿಕ್ಕಿದಾಗಲೆಲ್ಲಾ ಯಾರದ್ಯಾರದೋ ಖರ್ಚಿನಲ್ಲಿ ಪಾರ್ಟಿಮಾಡಿ ತಲೆ ಹಗುರಮಾಡಿಕೊಳ್ಳುವ ಉದ್ಯಮಿ, ಪುಢಾರಿ, ಪತ್ರಕರ್ತ, ಕಲಾವಿದ, ಕ್ರೀಡಾಪಟು, ಸಾಹಿತಿ, ಬುದ್ಧಿಜೀವಿ, ನೌಕರ, ಸಾಮಾನ್ಯರ ಜೀವಶಕ್ತಿಯಾಗಿರುವ ಮದ್ಯದ ಬಗ್ಗೆ ಮದ್ಯೋದ್ಯಮವಾಗಲಿ, ಆಳುವವರಾಗಲಿ ಒಂದಿಷ್ಟೂ ತಲೆಕೆಡಿಸಿಕೊಂಡಿದ್ದು ಎಲ್ಲೂ ಕಾಣುವುದಿಲ್ಲ. ಇಷ್ಟೊಂದು ಬಹೂಪಯೋಗಿ ಮತ್ತು ವರ್ಣರಂಜಿತ

ಪುಟ 10 ಕ್ಕೆ

ವೆನಿಜುವೆಲಾವನ್ನು ಮುಟ್ಟಬೇಡಿ!
ಅಮೆರಿಕಾ ಆಡಳಿತಕ್ಕೆ ಎಚ್ಚರಿಕೆ



ವೆನಿಜುವೆಲಾ ತನ್ನ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಸಾರ್ವಭೌಮತೆಗೆ ಎದುರಾಗಿರುವ ಗಂಭೀರ ಅಪಾಯವನ್ನು ದಿಟ್ಟವಾಗಿ ಎದುರಿಸುತ್ತಿದ್ದು ಜಗತ್ತಿನಾದ್ಯಂತ ಇರುವ ಎಲ್ಲಾ ಪ್ರಜಾಸತ್ತಾತ್ಮಕ ಮತ್ತು ಸಾಮ್ರಾಜ್ಯಶಾಹಿ–ವಿರೋಧಿ ಶಕ್ತಿಗಳು ಮ್ಯಾಡುರೊ ಸರಕಾರಕ್ಕೆ ಸೌಹಾರ್ದತೆ ಸೂಚಿಸಲು ಹಾಗೂ ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ಬಲವಾಗಿ ಖಂಡಿಸಬೇಕಾದ ಸಮಯವಿದು. ಮೋದಿ ಸರಕಾರವೂ ತನ್ನ ದಿವ್ಯಮೌನ ಮುರಿದು ಸ್ಪಷ್ಟವಾಗಿ ಮಾತನಾಡಬೇಕಿದೆ.

* **ಪ್ರಕಾಶ್ ಕಾರಟ್**

ಅಧ್ಯಕ್ಷ ನಿಕೊಲಸ್ ಮ್ಯಾಡುರೊ ನೇತೃತ್ವದ ವೆನಿಜುವೆಲಾದ ಕಾನೂನುಬದ್ಧ ಸರಕಾರದ ವಿರುದ್ಧ ಅಮೆರಿಕ ಸಮರ ಸಾರಿದೆ.

ಬಲಪಂಥೀಯ ಪ್ರತಿಪಕ್ಷ ನಾಯಕ ಜುವಾನ್ ಗುಯಾಡೊ ಅವರನ್ನು ಹಂಗಾಮಿ ಅಧ್ಯಕ್ಷ ಎಂದು ಮಾನ್ಯ ಮಾಡಿ ಡೊನಾಲ್ಡ್ ಟ್ರಂಪ್ ಆಡಳಿತ ಹೊರಡಿಸಿರುವ ಘೋಷಣೆಯು ವೆನಿಜುವೆಲಾದ ಆಂತರಿಕ ವ್ಯವಹಾರಗಳಿನ ಹಸ್ತಕ್ಷೇಪದ ಭಂಡ ಕೃತ್ಯದ ಅರ್ಥವಿದು. ಈ ಕಾನೂನುಬಾಹಿರ ಕೃತ್ಯದೊಂದಿಗೆ ವೆನೆಝುವೆಲಾ ಸಶಸ್ತ್ರ ಪಡೆಗಳಿಗೆ ಕಾನೂನು ಪ್ರಕಾರ ಚುನಾಯಿತರಾದ ಅಧ್ಯಕ್ಷರಿಗೆ ಬೆಂಬಲವನ್ನು ಹಿಂತೆಗೆದುಕೊಳ್ಳಬೇಕೆಂಬ ಕರೆಯೂ ಇತ್ತು.

ತಾನು ಹಂಗಾಮಿ ಅಧ್ಯಕ್ಷ ಎಂದು ಗುಯಾಡೊ ಜನವರಿ 23ರಂದು ಘೋಷಿಸಿಕೊಂಡಿದ್ದು ಅದನ್ನು ಅಮೆರಿಕ ತಕ್ಷಣವೇ ಅಂಗೀಕರಿಸಿತ್ತು. ಇದೊಂದು ಕ್ಷಿಪ್ರಕ್ರಾಂತಿಯ ಪ್ರಯತ್ನ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ರಕ್ಷಣಾ ಸಚಿವರು ಮತ್ತು ಸೇನಾ ಮುಖ್ಯಸ್ಥರು ಕಾನೂನುಸಮ್ಮತವಾಗಿ ಆಯ್ಕೆಯಾದ ಸರಕಾರಕ್ಕೆ ಬೆಂಬಲ ಘೋಷಿಸಿದ್ದರಿಂದ ಕ್ಷಿಪ್ರಕ್ರಾಂತಿ ವಿಫಲಗೊಂಡಿತ್ತು. ಅಧ್ಯಕ್ಷ ಮ್ಯಾಡುರೊ ಅವರನ್ನು ಬೆಂಬಲಿಸಿ ಕರಕಾಸ್‌ನಲ್ಲಿ ಒಂದು ಬೃಹತ್ ಮತಪ್ರದರ್ಶನ ನಡೆದಿದೆ.

ಹ್ಯೂಗೊ ಚಾವೆಜ್ 1999ರಲ್ಲಿ ವೆನಿಜುವೆಲಾದ ಅಧ್ಯಕ್ಷರಾಗಿ ಆಯ್ಕೆಯಾಗಿ ಬೊಲಿವೇರಿಯನ್ ಕ್ರಾಂತಿಯ ಪ್ರಕ್ರಿಯೆಯನ್ನು ಆರಂಭಿಸಿದಾಗಿನಿಂದ ಅಮೆರಿಕದ ಬೆಂಬಲ ಹೊಂದಿರುವ ದೇಶದ ಬಲಪಂಥೀಯ ಕೂಟ ಬೊಲಿವೇರಿಯನ್ ಸರಕಾರವನ್ನು ಉರುಳಿಸಿ ಆಡಳಿತದಲ್ಲಿ ಬದಲಾವಣೆ ತರಲು ಯತ್ನಿಸುತ್ತಲೇ ಇತ್ತು.

2002ರಲ್ಲಿ ಅಧ್ಯಕ್ಷ ಚಾವೆಜ್ ವಿರುದ್ಧ ಒಂದು ಕ್ಷಿಪ್ರಕ್ರಾಂತಿಯ ಪ್ರಯತ್ನ ನಡೆದರೂ ಬೃಹತ್ ಪ್ರಮಾಣದಲ್ಲಿ ಜನಸಮೂಹಗಳು ಅಣಿನೆರೆದಿದ್ದರಿಂದಾಗಿ ಅದು ವಿಫಲವಾಯಿತು. ಆಗಿನಿಂದಲೂ ವೆನಿಜುವೆಲಾದ ಬಂಡವಾಳಶಾಹಿ ಕೂಟ ಮತ್ತು ಅಮೆರಿಕ ಸಾಮ್ರಾಜ್ಯಶಾಹಿಯ ಬೆಂಬಲ ಹೊಂದಿರುವ ಬಲಪಂಥೀಯ ಪ್ರತಿಪಕ್ಷವು ಸರಕಾರವನ್ನು ಅಸ್ಥಿರಗೊಳಿಸಲು ಸತತ ಪ್ರಯತ್ನ ಮಾಡುತ್ತಲೇ ಬಂದಿದೆ. ಸರಕಾರವನ್ನು ಅಸ್ಥಿರಗೊಳಿಸಲು ಅದು ಬೀದಿ ಬದಿ ಪ್ರದರ್ಶನಗಳು ಹಾಗೂ ಯೋಜಿತ ಹಿಂಸಾಚಾರಗಳನ್ನು ನಡೆಸುತ್ತಿದೆ.

ಪ್ರಸಕ್ತ ಬಿಕ್ಕಟ್ಟಿಗೆ ಎರಡು ಅಂಶಗಳು ಕಾರಣ. ಮೊದಲನೆಯದಾಗಿ, 2014ರ ನಂತರದಿಂದ ತೈಲ ಬೆಲೆಗಳಲ್ಲಿ ತೀವ್ರ ಕುಸಿತವಾಗಿದ್ದರಿಂದ ವೆನಿಜುವೆಲಾ ಆರ್ಥಿಕತೆ ಸಂಕಷ್ಟಕ್ಕೊಳಗಾಗಿ ಜನತೆಯ ಜೀವನದ ಮೇಲೆ ನೇರ ದುಷ್ಪರಿಣಾಮ ಉಂಟಾಗಿದೆ. ದೊಡ್ಡ ಬಂಡವಾಳಶಾಹಿಗಳ ಬುಡಮೇಲು ಕೃತ್ಯಗಳು ಹಾಗೂ ಅಮೆರಿಕ ಹೇರಿರುವ ದಿಗ್ಬಂಧನಗಳಿಂದಾಗಿ ಪರಿಸ್ಥಿತಿ ಹದಗೆಟ್ಟಿದೆ.

ಎರಡನೆಯದು, ಬಾಹ್ಯ ಅಂಶವಾಗಿದೆ. ಕಳೆದ ಒಂದುವರೆ ದಶಕದಿಂದ ಲ್ಯಾಟಿನ್ ಅಮೆರಿಕದಲ್ಲಿ ಎಡಶಕ್ತಿಗಳು ಸತತವಾಗಿ ಮುನ್ನಡೆ ಸಾಧಿಸಿದ ನಂತರ ಇದೀಗ ಅದಕ್ಕೆ ತದ್ವಿರುದ್ಧವಾದದ್ದು ನಡೆಯುತ್ತಿದೆ. ಅಮೆರಿಕ ಸಾಮ್ರಾಜ್ಯಶಾಹಿ ಬೆಂಬಲಿತ ಬಲಪಂಥೀಯ ಶಕ್ತಿಗಳು ಪ್ರತಿದಾಳಿ ನಡೆಸುತ್ತಿವೆ. ಅರ್ಜೆಂಟಿನಾದಲ್ಲಿ ಬಲಪಂಥೀಯ ಸರಕಾರ ಮತ್ತು ಬ್ರೆಜಿಲ್‌ನಲ್ಲಿ ಅತಿ–ಬಲಪಂಥೀಯ ಅಧ್ಯಕ್ಷ ಆಯ್ಕೆಯಾಗಿರುವುದರಿಂದ ಶಕ್ತಿಗಳ ಸಮತೋಲ ಬದಲಾಗಿದೆ. ಪೆರು, ಕೊಲಂಬಿಯಾ ಮತ್ತು ಚಿಲಿಯಲ್ಲಿ ಬಲಪಂಥೀಯ ಸರಕಾರಗಳಿವೆ. ಎರಡು ನೆರೆ ದೇಶಗಳಾದ ಕೊಲಂಬಿಯಾದ ಅಧ್ಯಕ್ಷ ಇವಾನ್ ಡುಕ್ಯು ಮತ್ತು ಬ್ರೆಜಿಲ್‌ನ ಅಧ್ಯಕ್ಷ ಜೈರ್ ಬೊಲ್ಸನಾರೊ ವೆನಿಜುವೆಲಾ ಅಧ್ಯಕ್ಷ ಮ್ಯಾಡುರೊ ಅವರನ್ನು ಪದಚ್ಯುತಗೊಳಿಸಲು ಕಟಿಬದ್ಧರಾಗಿದ್ದಾರೆ. ಇದೀಗ ಅಧ್ಯಕ್ಷ ಟ್ರಂಪ್ ವೆನಿಜುವೆಲಾದೊಳಗಿನ ಬಲಪಂಥೀಯ ಶಕ್ತಿಗಳು ಮತ್ತು ಲ್ಯಾಟಿನ್ ಅಮೆರಿಕದ ಬಲಪಂಥೀಯ ಸರಕಾರಗಳೊಂದಿಗೆ ಕೈಜೋಡಿಸಿದ್ದಾರೆ. ವೆನಿಜುವೆಲಾದಲ್ಲಿ ಸರಕಾರ ಬದಲಾವಣೆ ಮಾಡುವುದು ಹಾಗೂ ಹೊಸ ಶತಮಾನದ ಆರಂಭದ ಸಂದರ್ಭದಲ್ಲಿ ಎಡ ಮುನ್ನಡೆಯ ಪ್ರಮುಖ ಕೇಂದ್ರವಾಗಿದ್ದ ವೆನಿಜುವೆಲಾದಲ್ಲಿ ಎಡಶಕ್ತಿಗಳನ್ನು ದಮನಿಸುವುದು ಅವರ ಉದ್ದೇಶವಾಗಿದೆ.

ವೆನಿಜುವೆಲಾದಿಂದ ತೈಲ ಖರೀದಿಯನ್ನು ಕಡಿತ ಮಾಡುವ ಕ್ರಮಗಳೇ ಅಧ್ಯಕ್ಷ ಮ್ಯಾಡುರೊ ಟವರನ್ನು ಪದಚ್ಯುತಗೊಳಿಸಲು ಅಮೆರಿಕ ಎಷ್ಟು ಕಾತರವಾಗಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಅಮೆರಿಕದಲ್ಲಿರುವ ವೆನಿಜುವೆಲಾ ಸರಕಾರಿ ಸ್ವಾಮ್ಯದ ಪಿಡಿವಿಎಸ್‌ಎ ಕಂಪೆನಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಅಮೆರಿಕವು ವೆನಿಜುವೆಲಾದ ಪ್ರಮುಖ ತೈಲ ಖರೀದಿ ದೇಶವಾಗಿದ್ದು ವೆನಿಜುವೆಲಾದ ಆರ್ಥಿಕತೆಗೆ ಹಾನಿಯುಂಟು ಮಾಡುವುದೆಂದೇ ಇದರ ಅರ್ಥವಾಗಿದೆ.

ವೆನಿಜುವೆಲಾದಲ್ಲಿ ಅಮೆರಿಕದ ಅಕ್ರಮ ಹಸ್ತಕ್ಷೇಪಕ್ಕೆ ಪಾಶ್ಚಿಮಾತ್ಯ ದೇಶಗಳೂ ಬೆಂಬಲ ವ್ಯಕ್ತಪಡಿಸಿವೆ. ಒಂದು ವಾರದೊಳಗೆ ಹೊಸ ಚುನಾವಣೆಯನ್ನು ಘೋಷಿಸುವಂತೆ ಫ್ರಾನ್ಸ್, ಬ್ರಿಟನ್, ಜರ್ಮನಿ ಮತ್ತು ಸ್ಪೇನ್ ಮ್ಯಾಡುರೊ ಅವರಿಗೆ ಕರೆ ನೀಡಿವೆ. ಇಲ್ಲದಿದ್ದರೆ ತಾವು ಹಂಗಾಮಿ ಅಧ್ಯಕ್ಷರಿಗೆ ಮಾನ್ಯತೆ ನೀಡುವುದಾಗಿ ಬೆದರಿಸಿವೆ. ವೆನಿಜುವೆಲಾ ಸರಕಾರ ಈ ಎಚ್ಚರಿಕೆಯನ್ನು ಸಾರಾಸಗಟಾಗಿ ತಿರಸ್ಕರಿಸಿದೆ. 2018ರ ಮೇ ತಿಂಗಳಲ್ಲಿ ಅಧ್ಯಕ್ಷೀಯ ಚುನಾವಣೆ ನಡೆದಿತ್ತು. ಅದರಲ್ಲಿ ಮ್ಯಾಡುರೊ ಶೇಕಡಾ 67.8 ಮತ ಗಳಿಸಿದ್ದರು. ಪ್ರತಿಪಕ್ಷದ ಕೆಲವು ವಿಭಾಗಗಳು ಚುನಾವಣೆಯನ್ನು ಬಹಿಷ್ಕರಿಸಿದ್ದವು.

ತನ್ನ ಸ್ವಾತಂತ್ರ್ಯ ಮತ್ತು ರಾಷ್ಟ್ರೀಯ ಸಾರ್ವಭೌಮತೆಗೆ ಎದುರಾಗಿರುವ ಗಂಭೀರ ಅಪಾಯವನ್ನು ವೆನಿಜುವೆಲಾ ದಿಟ್ಟವಾಗಿ ಎದುರಿಸುತ್ತಿದ್ದು ಜಗತ್ತಿನಾದ್ಯಂತ ಇರುವ ಎಲ್ಲಾ ಪ್ರಜಾಸತ್ತಾತ್ಮಕ ಮತ್ತು ಸಾಮ್ರಾಜ್ಯಶಾಹಿ–ವಿರೋಧಿ ಶಕ್ತಿಗಳು ಮ್ಯಾಡುರೊ ಸರಕಾರಕ್ಕೆ ಸೌಹಾರ್ದತೆ ಸೂಚಿಸಲು ಹಾಗೂ ಸಾಮ್ರಾಜ್ಯಶಾಹಿ ಕುತಂತ್ರಗಳನ್ನು ಬಲವಾಗಿ ಖಂಡಿಸಬೇಕಾದ ಸಮಯವಿದು.

ವೆನಿಜುವೆಲಾದ ಕಾನೂನುಬದ್ಧ ಸರಕಾರವನ್ನು ಅಸ್ಥಿರಗೊಳಿಸುವ ಪಿತೂರಿ ಬಗ್ಗೆ ನರೇಂದ್ರ ಮೋದಿ ಸರಕಾರ ದಿವ್ಯ ಮೌನ ವಹಿಸಿದೆ. ಸರಕಾರ ಬದಲಾವಣೆ ಪ್ರಯತ್ನಗಳ ವಿಚಾರದಲ್ಲಿ ಅದು ತನ್ನ ಮೌನ ಮುರಿದು ಸ್ಪಷ್ಟವಾಗಿ ಮಾತನಾಡಬೇಕಿದೆ.

ಅನು: ವಿಶ್ವ



ಭಾರತ ಪ್ರಜಾಪ್ರಭುತ್ವ ಮತ್ತು ಸಾರ್ವಭೌಮತೆಗೆ ಬದ್ಧವಾಗಿದೆ ಎಂದು ಜಗತ್ತಿಗೆ ಸಾರಬೇಕು
–ಪ್ರಧಾನಿಗಳಿಗೆ ಯೆಚುರಿ ಪತ್ರ

ವೆನೆಝುವೆಲಾದ ವಿರುದ್ಧ ಅಮೆರಿಕ ಸಂಯುಕ್ತ ಸಂಸ್ಥಾನಗಳ ಭಂಡ ಹಸ್ತಕ್ಷೇಪದ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರು ಜನವರಿ 25ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಪತ್ರ ಬರೆದು ಇದು ವಿಶ್ವ ಸಂಸ್ಥೆಯ ಸನ್ನದ್ದಿನ ಉಲ್ಲಂಘನೆಯಾಗಿದೆ ಮತ್ತು ವೆನೆಝುವೆಲಾದ ಸಾರ್ವಭೌಮತೆಯ ಮೇಲಿನ ಭಂಡ ಹಲ್ಲೆಯಾಗಿದೆ ಎಂಬುದನ್ನು ಅವರೂ ಖಂಡಿತಾ ಒಪುತ್ತಾರೆ ಎಂದು ಆಶಯ ವ್ಯಕ್ತಪಡಿಸಿದ್ದಾರೆ. ಆದ್ದರಿಂದ, ಭಾರತ ಪ್ರಜಾಪ್ರಭುತ್ವ ಮತ್ತು ಸ್ವತಂತ್ರ ದೇಶಗಳ ಸಾರ್ವಭೌಮತೆ ಇವೆರಡಕ್ಕೂ ಬದ್ಧವಾಗಿದೆ, ಮತ್ತು ವೆನೆಝುವೆಲಾದ ಜನತೆಗೆ ತಮ್ಮದೇ ಸರಕಾರವನ್ನು ಆರಿಸುವ ಹಕ್ಕು ಇದೆ ಎಂಬ ನಿಲುವು ಹೊಂದಿದೆ ಎಂದು ಜಗತ್ತಿಗೆ ಸಾರಬೇಕು ಎಂದು ಹೇಳಿದ್ದಾರೆ.

ಮೋದಿ ಸರಕಾರ ಇದುವರೆಗೂ ಈ ಬಗ್ಗೆ ದಿವ್ಯಮೌನ ತಳೆದಿದೆ, ಆದರೆ ಪ್ರಧಾನ ಮಂತ್ರಿಗಳು ತಮ್ಮ 'ಮಿತ್ರ' ಅಧ್ಯಕ್ಷ ಟ್ರಂಪ್‌ಗೆ ಬೆಂಬಲವನ್ನೂ ನೀಡಿಲ್ಲ ಎಂಬುದು ಗಮನಾರ್ಹ.

ಜಗತ್ತಿನಾದ್ಯಂತ ಖಂಡನೆ

ಜನವರಿ 29 ರಂದು ಅಮೆರಿಕಾ ವೆನೆಝುವೆಲಾದ ತೈಲ ಕಂಪನಿ ಪಿಡಿವಿಎಸ್‌ಎ ನ 7 ಬಿಲಿಯ ಡಾಲರುಗಳ ಮೌಲ್ಯದ ಆಸ್ತಿಗಳನ್ನು ಮತ್ತು 11 ಬಿಲಿಯ ಡಾಲರ್ ರಫ್ತು ಆದಾಯವನ್ನು ತಡೆ ಹಿಡಿಯುವುದಾಗಿಯೂ ಈ ಕಂಪನಿಯ ಅಮೆರಿಕನ್ ಉಪಕಂಪನಿ ಸಿಟ್ಗೊದ ಆಸ್ತಿಗಳನ್ನು ಜಫ್ತಿ ಮಾಡುವುದಾಗಿಯೂ ಜನವರಿ 29ರಂದು ಪ್ರಕಟಿಸಿದೆ. ಹಾಗೆ ಪ್ರಕಟಿಸುವಾಗ ಅಲ್ಲಿನ ರಾಷ್ಟ್ರೀಯ ಭದ್ರತಾ ಸಲಹೆಗಾರ ಮಿಲಿಟರಿ ಕ್ರಮವನ್ನೂ ಕೈಗೊಳ್ಳಬಹುದು ಎಂಬ ಪರೋಕ್ಷ ಬೆದರಿಕೆಯನ್ನೂ ಸೂಚಿಸಿದರು.

ಇದು 2015ರಲ್ಲಿ ಅಧ್ಯಕ್ಷ ಒಬಾಮ ನಿರ್ಬಂಧಗಳನ್ನು ಆರಂಭಿಸಿದ ನಂತರ ಅತ್ಯಂತ ಕಠಿಣ ನಿರ್ಬಂಧ ಎನ್ನಲಾಗಿದೆ.

ಇದನ್ನು ಜಗತ್ತಿನಾದ್ಯಂತ ಖಂಡಿಸಲಾಗಿದೆ. ಬೊಲಿವಿಯಾದ ಅಧ್ಯಕ್ಷ ಇವೊ ಮೊರಲೆಸ್ ಅಮೆರಿಕ ಈ ಮೂಲಕ ಈ ಪ್ರದೇಶದ ಶಾಂತಿ ಮತ್ತು ಪ್ರಾದೇಶಿಕ ಸ್ಥಿರತೆಯ ಮೇಲೆ ದಾಳಿ ಮಾಡಿದೆ ಎಂದು ಖಂಡಿಸಿದ್ದಾರೆ.

ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಮೈಕ್ ಪಾಂಪಿಯೊ ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ವಿಶೇಷ ಅಧಿವೇಶನ ಕರೆಯಬೇಕು, ಅದರಲ್ಲಿ ಅಮೆರಿಕಾದ ಕ್ರಮವನ್ನು ಬೆಂಬಲಿಸಬೇಕು ಎಂದು ಕರೆ ನೀಡಿದರು. ಆದರೆ ಭದ್ರತಾ ಸಮಿತಿಯಲ್ಲಿರುವ 35 ದೇಶಗಳಲ್ಲಿ 19 ಈ ಕರೆಯನ್ನು ತಿರಸ್ಕರಿಸಿವೆ.

ವಿಶ್ವಸಂಸ್ಥೆಯಲ್ಲಿ ರಷ್ಯಾದ ಖಾಯಂ ಪ್ರತಿನಿಧಿ ವಾಸಿಲಿ ನೆಬೆಂಝಿಯ "ನೀವು ವೆನೆಝುವೆಲಾದ ಸಾರ್ವಭೌಮತೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದೀರಿ..ನೀವು ಕಾನೂನುಬದ್ಧ ಅಧಿಕಾರವನ್ನು ಗೌರವಿಸಬೇಕು, ಒಂದು ಸಾರ್ವಭೌಮ ದೇಶದ ಆಂತರಿಕ ಪ್ರಶ್ನೆಗಳಲ್ಲಿ ಹಸ್ತಕ್ಷೇಪ ಮಾಡಬಾರದು, ಹೊರಗಿನಿಂದ ನಿರ್ಧಾರಗಳನ್ನು ಹೇರಬಾರದು, ಅದರ ಬದಲಿಗೆ ಅವರ ಸಮಸ್ಯೆಗಳನ್ನು ಶಾಂತಿಯುತವಾಗಿ ಪರಿಹರಿಸಲು ನೆರವಾಗಬೇಕು "ಎಂದು ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿಗೆ ಸಲಹೆ ನೀಡಿದ್ದಾರೆ.

70ಕ್ಕೂ ಹೆಚ್ಚು ವಿದ್ವಾಂಸರು ಮತ್ತು ಪರಿಣಿತರ ಖಂಡನೆ–ಸಲಹೆ

ಇದಕ್ಕೆ ಮೊದಲು ಅಮೆರಿಕ ಸಂಯುಕ್ತ ಸಂಸ್ಥಾನಗಳ ಜಗತ್ಪ್ರಸಿದ್ಧ ವಿದ್ವಾಂಸ ನೋಮ್ ಚೋಮ್ಸ್ಕಿ ಸೇರಿದಂತೆ ಜಗತ್ತಿನ 70ಕ್ಕೂ ಹೆಚ್ಚು ವಿದ್ವಾಂಸರು ಮತ್ತು ಪರಿಣಿತರು ಅಮೆರಿಕ ಬೆಂಬಲಿತ ಪದಚ್ಯುತಿ ಪ್ರಯತ್ನವನ್ನು ಖಂಡಿಸಿದ್ದಾರೆ. ವೆನೆಝುವೆಲಾದ ಆಂತರಿಕ ರಾಜಕೀಯದಲ್ಲಿ ಹಸ್ತಕ್ಷೇಪ ನಡೆಸುವುದನ್ನು ನಿಲ್ಲಿಸಬೇಕು, ಅಮೆರಿಕ ಮತ್ತು ಅದರ ಮಿತ್ರದೇಶಗಳು ಹಿಂಸಾತ್ಮಕವಾಗಿ ಮತ್ತು ಕಾನೂನುಬಾಹಿರವಾಗಿ ಆಳ್ವಿಕೆ ಬದಲಾವಣೆಯನ್ನು ಪ್ರೋತ್ಸಾಹಿಸುವುದನ್ನು ನಿಲ್ಲಿಸಬೇಕು ಎಂದು ಅವರುಗಳು ಕರೆ ನೀಡಿದ್ದಾರೆ.

"ವೆನೆಝುವೆಲಾದಲ್ಲಿ ಎರಡೂ ಕಡೆಯವರು ಪರಸ್ಪರರನ್ನು ಪರಾಜಯಗೊಳಿಸುವುದು ಸಾಧ್ಯವಿಲ್ಲ. ಉದಾಹರಣೆಗೆ, ಮಿಲಿಟರಿ ಕನಿಷ್ಟ 235,000 ಮುಂಚೂಣಿ ಸದಸ್ಯರನ್ನು ಹೊಂದಿದೆ, ಜತೆಗೆ 1.6 ಮಿಲಿಯ ಅರೆ ಸೈನಿಕರಿದ್ದಾರೆ. ಇವರೆಲ್ಲರೂ ಹೋರಾಡುತ್ತಾರೆ, ಲ್ಯಾಟಿನ್ ಅಮೆರಿಕಾದಲ್ಲಿ ವ್ಯಾಪಕವಾಗಿರುವ ರಾಷ್ಟ್ರೀಯ ಸಾರ್ವಭೌಮತೆಯಲ್ಲಿನ ನಂಬಿಕೆಯ ಆಧಾರದಲ್ಲಿ ಮಾತ್ರವಲ್ಲ, ಪ್ರತಿಪಕ್ಷವು ಸರಕಾರವನ್ನು ಬಲಪ್ರಯೋಗಿಸಿ ಉರುಳಿಸಿದರೆ ತಮ್ಮನ್ನು ಬಾಧಿಸಬಹುದದ ದಮನದಿಂದ ರಕ್ಷಿಸಿಕೊಳ್ಳಲು ಕೂಡ ಹೋರಾಡುತ್ತಾರೆ. ಇಂತಹ ಸನ್ನಿವೇಶಗಳಲ್ಲಿ ಏಕೈಕ ಪರಿಹಾರವೆಂದರೆ, ಒಂದು ಮಾತುಕತೆಯ ಮೂಲಕ ಇತ್ಯರ್ಥ. ಇದು ಈ ಹಿಂದೆ ಈ ಪ್ರದೇಶದಲ್ಲಿ ರಾಜಕೀಯವಾಗಿ ಧ್ರುವೀಕರಣಗೊಂಡ ಸಮಾಜಗಳು ಚುನಾವಣೆಗಳ ಮೂಲಕ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಸಾಧ್ಯವಾಗದಾಗ ಸಂಭವಿಸಿದೆ" ಎಂದು ಈ ಪರಿಣಿತರು, ವಿದ್ವಾಂಸರು ತಮ್ಮ ಜಂಟಿ ಹೇಳಿಕೆಯಲ್ಲಿ ಅಭಿಪ್ರಾಯ ಪಟ್ಟಿದ್ದಾರೆ.

ಬಸವಕಲ್ಯಾಣದಲ್ಲಿ ಅಂಗನವಾಡಿ ಅವ್ವಂದಿರ ರಣಕಹಳೆ

ಬಸವಕಲ್ಯಾಣದಲ್ಲಿ ಅಂಗನವಾಡಿ ನೌಕರರ 7 ನೇ ರಾಜ್ಯ ಸಮ್ಮೇಳನ ಜನವರಿ 30, 31, ಫೆಬ್ರುವರಿ 1 ರಂದು ಯಶಸ್ವಿಯಾಗಿ ಜರುಗಿದೆ. ಆಕರ್ಷಕ ಮೆರವಣಿಗೆ, ಬೃಹತ್ ಬಹಿರಂಗ ಸಭೆ, ಪ್ರತಿನಿಧಿಗಳ ಅಧಿವೇಶನ, ವಿಚಾರ ಸಂಕಿರಣಗಳೆಲ್ಲವೂ ಸ್ಫೂರ್ತಿದಾಯಕವಾಗಿ ನಡೆದಿವೆ. ಕಳೆದ ಮೂರು ವರ್ಷಗಳಲ್ಲಿ ಅಂಗನವಾಡಿ ನೌಕರರ ಸಮಸ್ಯೆಗಳು, ಅದಕ್ಕಾಗಿ ಮಾಡಿದ ಹೋರಾಟಗಳು, ಅವರು ಕೆಲಸ ಮಾಡುವ ಐ.ಸಿ.ಡಿ.ಎಸ್. ನಲ್ಲಿ ಆಗುತ್ತಿರುವ ಬದಲಾವಣೆಗಳು, ಭಾರತದ ಮಹಿಳೆಯರ ಮಕ್ಕಳ ಮೇಲೆ ಅದರ ಪರಿಣಾಮ – ಇವೆಲ್ಲವುಗಳ ಪರಾಮರ್ಶೆ ಮಾಡಿ ಅಂಗನವಾಡಿ ನೌಕರರ, ಐ.ಸಿ.ಡಿ.ಎಸ್. ಯೋಜನೆಯ, ಭಾರತದ ಮಹಿಳೆಯರ ಮಕ್ಕಳ ಭವಿಷ್ಯದ ಬಗ್ಗೆ ಮುಂದಿನ ಯೋಜನೆಗಳನ್ನು ರೂಪಿಸಿತು. ಇವ್ಯಾವುವೂ ಹೋರಾಟಗಳು ಇಲ್ಲದೆ ಜಾರಿಯಾಗುವವು ಅಲ್ಲ ಎಂಬ ಅನುಭವವಿರುವ ಅಂಗನವಾಡಿ ಅವ್ವಂದಿರು ಮುಂದಿನ ಹೋರಾಟಗಳ ರಣಕಹಳೆ ಊದಿದ್ದಾರೆ. ಈ ಯಶಸ್ವಿ ಸಮ್ಮೇಳನದ ಬಗ್ಗೆ ವರದಿಗಳನ್ನು ಓದಿ.





"ಅಂಗನವಾಡಿ ಕಾರ್ಯಕರ್ತೆಯರಿಗೆ ಕೇಂದ್ರ ಸರ್ಕಾರದಿಂದ 1,500 ರೂ. ವೇತನ ಹೆಚ್ಚಳ ಮಾಡಲಾಗುವುದು ಎಂದು ಭರವಸೆ ನೀಡಲಾಗಿತ್ತು. ಇದರಲ್ಲಿ 900 ರೂ. ರಾಜ್ಯ ಸರ್ಕಾರದ ಪಾಲೂ ಇರುತ್ತದೆ. ಆದರೆ ಪ್ರಧಾನಿ ಮೋದಿ ಮಾತ್ರ ಎಲ್ಲವೂ ನಾನೇ ಕೊಡುತ್ತಿದ್ದೇನೆ ಎನ್ನುತ್ತಿದ್ದು ಅವರ ಈ ವರ್ತನೆಯನ್ನು ಖಂಡಿಸಲಾಗುತ್ತದೆ' ಎಂದು ಅಂಗನವಾಡಿ ನೌಕರರ ರಾಜ್ಯಮಟ್ಟದ 7 ನೇ ಸಮ್ಮೇಳನದ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡುತ್ತಾ ಅಂಗನವಾಡಿ ನೌಕರರ ರಾಜ್ಯ ಸಮಿತಿ ಅಧ್ಯಕ್ಷೆ ಎಸ್.ವರಲಕ್ಷ್ಮಿ ಅವರು ಹೇಳಿದರು.

'ಅಂಗನವಾಡಿಗಳಿಗೆ ನೀಡಲಾಗುತ್ತಿದ್ದ ಅನುದಾನವನ್ನು ಈಚೆಗೆ ಕಡಿತಗೊಳಿಸಲಾಗಿದೆ. ಬೇಟಿ ಬಚಾವೋ ಬೇಟಿ ಪಡಾವೋ ಎಂದು ಮೋದಿಯವರು ಹೇಳುತ್ತಿದ್ದಾರಾದರೂ ಅಂಗನವಾಡಿಯಲ್ಲಿ ಮಹಿಳೆಯರೇ ಕಾರ್ಯಕರ್ತೆಯರಾಗಿ ಹಾಗೂ ಸಹಾಯಕಿಯರಾಗಿ ಕೆಲಸ ನಿರ್ವಹಿಸುತ್ತಿದ್ದರೂ ಇವರ ಬಗ್ಗೆ ನಿರ್ಲಕ್ಷ್ಯ ತೋರಲಾಗುತ್ತಿದೆ' ಎಂದು ಅವರು ಆರೋಪಿಸಿದರು.

'ಅಂಗನವಾಡಿಗಳಿಗೆ ಸಿಇಒ, ಇಒ ಭೇಟಿ ನೀಡಿ ಪರಿಶೀಲನೆಯ ಹೆಸರಲ್ಲಿ ತೊಂದರೆ ನೀಡಿದರೆ ಸಹಿಸಲಾಗುವುದಿಲ್ಲ. ಹೀಗಾದರೆ ಮಾತೃಪೂರ್ಣ ಯೋಜನೆಯನ್ನು ಬಹಿಷ್ಕರಿಸಲಾಗುವುದು' ಎಂದು ಅವರು ಎಚ್ಚರಿಸಿದರು. 'ಶಿಶು ಅಭಿವೃದ್ಧಿ ಅಧಿಕಾರಿಗಳು ಹಾಗೂ ಇತರೆ ಸಂಬಂಧಿತರು ಭೇಟಿ ನೀಡಲಿ. ಆದರೆ, ಕೆಲ ದಿನಗಳಿಂದ ಬೀದರ್ ನಲ್ಲಿ ಸಿಇಒ ಅವರು ಅಂಗನವಾಡಿಗಳಿಗೆ ಹೋಗಿ ತೊಂದರೆ ನೀಡುತ್ತಿದ್ದು ಇದು ಎಷ್ಟು ಸರಿ? ಐದಾರು ತಿಂಗಳಿಂದ ಮೊಟ್ಟೆ ಸರಬರಾಜು ಮಾಡಲಾಗಿಲ್ಲ. ಕೆಲ ತಿಂಗಳಿಂದ ವೇತನ ನೀಡಲಾಗಿಲ್ಲ. ಈ ಬಗ್ಗೆ ಮಾತ್ರ ಯಾರೂ ಕೇಳುವುದಿಲ್ಲ' ಎಂದರು.

'ಕೆಲವರು ಅಂಗನವಾಡಿ ಕೇಂದ್ರಗಳಲ್ಲಿ ಭಗವದ್ಗೀತೆ ಓದಿಸುವ ಹುನ್ನಾರ ನಡೆಸಿದ್ದಾರೆ. ಇದನ್ನು ಖಂಡಿಸುತ್ತೇವೆ. ಈ ಕೇಂದ್ರಗಳಲ್ಲಿ ಎಲ್ಲ ಜಾತಿ ಧರ್ಮದ ಮಕ್ಕಳಿರುತ್ತಾರೆ. ಇಂಥ ಜಾತ್ಯತೀತ ಕೇಂದ್ರಗಳಲ್ಲಿ ರಾಮ, ಹಿಂದುತ್ವದ ಪ್ರಚಾರ ಸಲ್ಲದು.' ಎಂದು ಹೇಳಿದರು.

ಬಹಿರಂಗ ಸಭೆಯ ಮೊದಲು ಕೋಟೆಯಿಂದ ಅಂಬೇಡ್ಕರ್ ವೃತ್ತದವರೆಗೆ ಬೃಹತ್ ಮೆರವಣಿಗೆ ನಡೆಸಲಾಯಿತು. ಕೆಂಪು ಸೀರೆಯುಟ್ಟು ಕೈಯಲ್ಲಿ ಧ್ವಜಗಳನ್ನು ಹಿಡಿದು ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ನೌಕರರು ಪಾಲ್ಗೊಂಡಿದ್ದರು. ಸಿಐಟಿಯುನ ಬೃಹತ್ ಧ್ವಜವನ್ನು ಕೂಡ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಬಿಜೆಪಿ ಹಟಾವೋ ಅಂಗನವಾಡಿ ಬಚಾವೋ :

'ಕೇಂದ್ರ ಸರ್ಕಾರ ಬರೀ ಸುಳ್ಳು ಹೇಳುತ್ತಿದೆ. ಅಂಗನವಾಡಿ ನೌಕರರಿಗೆ ವಿವಿಧ ಸೌಲಭ್ಯ ನೀಡಲಾಗುವುದು ಎಂದು ಪ್ರಧಾನಿ ಮೋದಿ ಮನಕಿ ಬಾತ್ ನಲ್ಲಿ ಭರವಸೆ ನೀಡಿಯೂ ಈಡೇರಿಸಿಲ್ಲ. ಮಹಿಳಾ ಸಬಲೀಕರಣದ ಮಾತಾಡುತ್ತಾರೆ. ಆದರೆ, 28 ಲಕ್ಷ ಅಂಗನವಾಡಿ ನೌಕರರ ಸಶಕ್ತಿಕರಣಕ್ಕೆ ಮುಂದಾಗುತ್ತಿಲ್ಲ. ಇಷ್ಟೇ ಅಲ್ಲ; ವಿವಿಧ ಭರವಸೆಗಳನ್ನು ನೀಡಿ ನುಡಿದಂತೆ ನಡೆಯುತ್ತಿಲ್ಲ. ಬರೀ ದೊಡ್ಡ ಉದ್ಯಮಿಗಳಿಗೆ ಮಾತ್ರ ಲಾಭ ಮಾಡಿಕೊಡುತ್ತಿದ್ದಾರೆ. ಆದ್ದರಿಂದ ಮುಂಬರುವ ಲೊಕಸಭೆ ಚುನಾವಣೆಯಲ್ಲಿ ಬಿಜೆಪಿ ಹಟಾವೋ ಅಂಗನವಾಡಿ ಬಚಾವೋ ಎಂಬ ಅಭಿಯಾನವನ್ನು ಆರಂಭಿಸಬೇಕಿದೆ' ಎಂದು ಅಂಗನವಾಡಿ ನೌಕರರ ಸಂಘದ ರಾಷ್ಟ್ರೀಯ ಅಧ್ಯಕ್ಷೆ ಉಷಾರಾಣಿ ಆಕ್ರೋಶ ವ್ಯಕ್ತಪಡಿಸಿದರು.

'ಕೇಂದ್ರ ಸರ್ಕಾರ ಜಿಪಿಎಸ್ ಅಳವಡಿಸುವ ನಿರ್ಧಾರ ತೆಗೆದುಕೊಂಡು ಅಂಗನವಾಡಿ ನೌಕರರ ಶೋಷಣೆಗೆ ಮುಂದಾಗಿದೆ. ಇದನ್ನು ಖಂಡಿಸುತ್ತೇನೆ. ನೌಕರರು 14 ಗಂಟೆ ಕೆಲಸ ನಿರ್ವಹಿಸುತ್ತಾರೆ. ಸರ್ಕಾರದ ವಿವಿಧ ಯೋಜನೆಗಳನ್ನು ಜಾರಿಗೊಳಿಸಲು ಸಹಕರಿಸುತ್ತಾರೆ. ಮನೆಮನೆಗೆ ಹೋಗಿ ಫಲಾನುಭವಿಗಳ ಆಯ್ಕೆ ಮಾಡುತ್ತಾರೆ. ಹೀಗಿದ್ದಾಗ ಜಿಪಿಎಸ್ ಅಳವಡಿಕೆ ನ್ಯಾಯವೇ? ಇಂಥ ವ್ಯವಸ್ಥೆ ಸದಾ ಸುಳ್ಳು ಹೇಳುವ ಹಾಗೂ ಹೋಟಲುಗಳಲ್ಲಿ ಐಷಾರಾಮಿ ಜೀವನ ನಡೆಸುವ ಸಂಸದ, ಸಚಿವರಿಗೆ ಅಗತ್ಯವಾಗಿದೆ' ಎಂದು ಹರಿಹಾಯ್ದರು.

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎ.ಆರ್.ಸಿಂಧು ಮಾತನಾಡಿ, 'ಅಂಗನವಾಡಿ ಕಾರ್ಯಕರ್ತೆಯರಿಗೆ 18 ಸಾವಿರ ಕನಿಷ್ಠ ವೇತನ ಜಾರಿ ಹಾಗೂ ನಿವೃತ್ತಿ ವೇತನ ನೀಡುವಂತೆ ಆಗ್ರಹಿಸಿ ಫೆ. 25 ರಂದು ದೆಹಲಿಯಲ್ಲಿ ಬೃಹತ್ ಪ್ರತಿಭಟನೆ ಆಯೋಜಿಸಲಾಗುವುದು' ಎಂದರು.

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಮಾರುತಿ ಮಾನ್ಪಡೆ ಮಾತನಾಡಿ, 'ಅಂಗನವಾಡಿ ಕಾರ್ಯಕರ್ತೆಯರನ್ನು ಪೂರ್ವ-ಪ್ರಾಥಮಿಕ ಶಿಕ್ಷಕರೆಂದು ಪರಿಗಣಿಸಬೇಕು. ಸ್ವಾಮಿನಾಥನ್ ಆಯೋಗದ ವರದಿ ಜಾರಿಗೊಳಿಸಿ ರೈತರಿಗೆ ನೆರವು ನೀಡಬೇಕು. ತೊಗರಿಗೆ ಬೆಂಬಲಬೆಲೆ ಘೋಷಿಸಬೇಕು. ರೈತರ ಸಂಪೂರ್ಣ ಸಾಲವನ್ನು ಮನ್ನಾ ಮಾಡಬೇಕು' ಎಂದು ಆಗ್ರಹಿಸಿದರು.

ನೌಕರರ ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಸುನಂದಾ ಅವರು ಅಂಗನವಾಡಿಗಳನ್ನೇ ಎಲ್.ಕೆ.ಜಿ ಹಾಗೂ ಯು.ಕೆ.ಜಿ ಕಲಿಕಾ ಕೇಂದ್ರಗಳನ್ನಾಗಿ ಪರಿವರ್ತಿಸಬೇಕು. ಕಾರ್ಯಕರ್ತೆಯರಿಗೆ ವಿಶೇಷ ತರಬೇತಿ ನೀಡಿ ಶಿಕ್ಷಕರೆಂದು ಮುಂದುವರೆಸಬೇಕು ಎಂಬ ಬೇಡಿಕೆಯನ್ನು ಮಂಡಿಸಿದರು. ಇದಕ್ಕೆ ಎಲ್ಲರೂ ಚಪ್ಪಾಳೆತಟ್ಟಿ ಅನುಮೋದಿಸಿದರು.

ಪ್ರಧಾನ ಕಾರ್ಯದರ್ಶಿ ಎಂ.ಎಸ್.ಮೀನಾಕ್ಷಿ ಸುಂದರಂ, ಶಾಂತಾ ಘಂಟೆ, ತಾಲ್ಲೂಕು ಘಟಕದ ಅಧ್ಯಕ್ಷೆ ಶ್ರೀದೇವಿ ಚುಡೆ ಮಾತನಾಡಿದರು. ಪದ್ಮಾಸ್ವಾಮಿ, ಸುಶೀಲಾ ಹತ್ತಿ, ಪ್ರಭು ಸಂತೋಷಕರ್, ಯರ್ರಮ್ಮ, ಯಮುನಾ ಗಾಂವ್ಕರ್ ಉಪಸ್ಥಿತರಿದ್ದರು.



ಹೋರಾಟದ ಹೆಜ್ಜೆಗಳ ಸಾಕ್ಷ್ಯಚಿತ್ರ ಸಿಡಿ ಬಿಡುಗಡೆ





ಕರ್ನಾಟಕ ಮಾತ್ರವಲ್ಲ ದೇಶದ ಗಮನವನ್ನು ಸೆಳೆದಂತಹ, ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ಒಂದು ಮಾದರಿಯಾದ ಹೋರಾಟವನ್ನು 2017 ರಲ್ಲಿ ಕೆಂಬಾವುಟದ ಅಡಿಯಲ್ಲಿ ರಾಜ್ಯದ ಅಂಗನವಾಡಿ ನೌಕರರು ಸಿಐಟಿಯು ನೇತೃತ್ವದಲ್ಲಿ ನಡೆಸಿದ್ದರು. ಈ ಹೋರಾಟ ಸೇರಿದಂತೆ ಅಂಗನವಾಡಿ ನೌಕರರ ಇದುವರೆಗಿನ ಹೋರಾಟಗಳು, ಐಸಿಡಿಎಸ್ ಯೋಜನೆಯನ್ನು ಸಮರ್ಥವಾಗಿ ಜಾರಿಗೊಳಿಸುವಲ್ಲಿ ಶಿಕ್ಷಕಿಯರು ಮತ್ತು ಸಹಾಯಕಿಯರ ಪಾತ್ರ, ಮತ್ತು ಅವರು ಎದುರಿಸುತ್ತಿರುವ ಸಮಸ್ಯೆ – ಸವಾಲುಗಳ ಕುರಿತು ರೂಪಗೊಂಡಿರುವ ಸಾಕ್ಷ್ಯಚಿತ್ರವೇ **"ಅಂಗನವಾಡಿ ಅವ್ವಂದಿರ ಹೋರಾಟದ ದಿಟ್ಟ ಹೆಜ್ಜೆಗಳು – ಒಂದು ಪಕ್ಷಿ ನೋಟ"**

ಈ ಸಾಕ್ಷ್ಯಚಿತ್ರವನ್ನು ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು) ರಾಜ್ಯ ಸಮಿತಿ ನಿರ್ಮಾಣ ಮಾಡಿದ್ದು ಸುರಭಿಯವರು ನಿರ್ದೇಶನವನ್ನು ಮಾಡಿದ್ದಾರೆ. ಛಾಯಾಗ್ರಾಹಕರಾಗಿ ಪ್ರಸನ್ನಕುಮಾರ್, ಪರಿಕಲ್ಪನೆ ಚೇತನಾ ತೀರ್ಥಹಳ್ಳಿ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಎಚ್.ಆರ್.ನವೀನ್‌ಕುಮಾರ್ ನಿರ್ವಹಿಸಿದ್ದಾರೆ.

ಒಟ್ಟು 41 ನಿಮಿಷಗಳಲ್ಲಿ ಮೂಡಿಬಂದಿರುವ ಈ ಸಾಕ್ಷ್ಯಚಿತ್ರದ ಸಿಡಿಗಳನ್ನು ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ನಡೆದ ಅಂಗನವಾಡಿ ನೌಕರರ ಸಂಘದ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಸೇರಿದ್ದ ಸಾವಿರಾರು ನೌಕರರ ಎದುರು ಅಂಗನವಾಡಿ ನೌಕರರ ಫೆಡರೇಷನ್‌ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಎ.ಆರ್.ಸಿಂಧು ರವರು ಬಿಡುಗಡೆಗೊಳಿಸಿದರು.







'ತಾಯಿ– ಮಕ್ಕಳ ಹಕ್ಕುಗಳ ಸಂರಕ್ಷಣೆ' ವಿಚಾರ ಸಂಕಿರಣ

ಅಂಗನವಾಡಿ ಖಾಸಗೀಕರಣ ಸಲ್ಲದು

'ಅಪೌಷ್ಠಿಕತೆ ಮಹಾಮಾರಿಯಾಗಿದೆ. ಅದನ್ನು ಹೊಗಲಾಡಿಸಲು ಸರ್ವಪ್ರಯತ್ನ ನಡೆದಿದೆ. 66 ಸಾವಿರ ಅಂಗನವಾಡಿ ಕಾರ್ಯಕರ್ತೆಯರು ಕುಗ್ರಾಮಗಳಲ್ಲಿ ಸೇವೆ ಸಲ್ಲಿಸುತ್ತಾರೆ. ಇವರು ಅಂಗನವಾಡಿಗೆ ದಾಖಲಾಗುವ ಎಲ್ಲ ಮಕ್ಕಳ ತಾಯಿ ಹಾಗೂ ಶಿಕ್ಷಕಿಯ ಸ್ಥಾನದಲ್ಲಿ ನಿಂತು ಕೆಲಸ ನಿರ್ವಹಿಸುತ್ತಾರೆ. ಇಂಥವರಿಗೆ ಎಷ್ಟೇ ಸೌಲಭ್ಯ ನೀಡಿದರೂ ಕಡಿಮೆ. ಹಾವುಗಳ ಕಾಟವಿರುವ ಅಂಗನವಾಡಿಗಳಿದ್ದರೆ ಈ ಬಗ್ಗೆ ಮಾಹಿತಿ ನೀಡಿದರೆ ಹಾವುಗಳು ಒಳ ಪ್ರವೇಶಿಸದಂತೆ ಕ್ರಮಕೈಗೊಳ್ಳಲಾಗುತ್ತದೆ' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಜಯಮಾಲಾ ಹೇಳಿದರು.

ಬಸವಕಲ್ಯಾಣದ ಬಸವ ಮಹಾಮನೆ ಆವರಣದಲ್ಲಿ ಜನವರಿ 31ರಂದು ನಡೆದ ಅಂಗನವಾಡಿ ನೌಕರರ 7 ನೇ ರಾಜ್ಯ ಸಮ್ಮೇಳನದ 2 ನೇ ದಿನದ 'ತಾಯಿ– ಮಕ್ಕಳ ಹಕ್ಕುಗಳ ಸಂರಕ್ಷಣೆ' ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು. 'ಶೀಘ್ರದಲ್ಲಿ ಮಂಡನೆ ಆಗಲಿರುವ ರಾಜ್ಯ ಸರ್ಕಾರದ ಬಜೆಟ್ ಅಂಗನವಾಡಿ ನೌಕರರಿಗೆ ಸಂತಸ ತರಲಿದೆ' ಎಂದೂ ಅವರು ಹೇಳಿದರು.

'ಕರ್ನಾಟಕ ಸರ್ಕಾರ ದಮನಿತ ಮಹಿಳೆಯರ ಸಂಪೂರ್ಣ ಸಮೀಕ್ಷೆ ಕೈಗೊಂಡಿದೆ. ಅವರಿಗೆ ಉಚಿತ ಶಿಕ್ಷಣ, ಉದ್ಯೋಗ, ಮನೆ, ನಿವೇಶನ ನೀಡಿ ಪುನರ್ವಸತಿ ಕಲ್ಪಿಸುವುದಕ್ಕಾಗಿ ಯೋಜನೆ ಸಿದ್ಧಪಡಿಸಲಾಗಿದ್ದು ಅದು ಶೀಘ್ರದಲ್ಲಿ ಜಾರಿಯಾಗುವ ಸಾಧ್ಯತೆಯಿದೆ. ಸರ್ಕಾರಗಳು ಎಷ್ಟೇ ಪ್ರಯತ್ನಪಟ್ಟರೂ ಮಹಿಳೆಗೆ ಸಮಾನ ಸ್ಥಾನ ನೀಡುವುದು ಸಾಧ್ಯ ಆಗುತ್ತಿಲ್ಲ. ಆದರೂ, 12ನೇ ಶತಮಾನದಲ್ಲಿ ಈ ನೆಲದ ಮೇಲೆ ನಡೆದಾಡಿದ ಬಸವಣ್ಣನವರು ಸ್ತ್ರೀಸಮಾನತೆ ನೀಡಿದನ್ನು ಮರೆಯುವಂತಿಲ್ಲ' ಎಂದರು.

ನೌಕರರ ಸಮಿತಿ ರಾಜ್ಯ ಕಾರ್ಯದರ್ಶಿ ಯಮುನಾ ಗಾಂವ್ಕರ್ ಮಾತನಾಡಿ, 'ಅಂಗನವಾಡಿಗಳ ಖಾಸಗೀಕರಣ ಸಲ್ಲದು. ಅಲ್ಲದೆ ಅಂಗನವಾಡಿಗಳನ್ನು ಮಠಗಳ ಆಧೀನಕ್ಕೆ ಒಪ್ಪಿಸಬೇಕು ಎಂಬ ಕೂಗು ಕೂಡ ಎದ್ದಿದೆ. ಹಾಗೆ ಮಾಡುವುದು ಸರಿಯಲ್ಲ. ಮಹಿಳೆಯರಲ್ಲಿನ ಮೌಢ್ಯತೆ ಹೊಗಲಾಡಿಸಿ ಅರಿವು ಮೂಡಿಸಬೇಕಾಗಿದೆ. ಮಹಿಳೆ ಹಾಗೂ ಮಕ್ಕಳಲ್ಲಿ ಅಪೌಷ್ಠಿಕತೆ ಇಲ್ಲದಂತಾಗಲು ಎಲ್ಲರೂ ಒಟ್ಟಾಗಿ ಪ್ರಯತ್ನಿಸಬೇಕು' ಎಂದು ಕೇಳಿಕೊಂಡರು.

ಸಾಹಿತಿ ಎಚ್.ಎಸ್.ಅನುಪಮಾ ಮಾತನಾಡಿ, 'ರಾಜ್ಯದಲ್ಲಿ ಶೇ 31 ರಷ್ಟು ಬಾಲ್ಯವಿವಾಹಗಳು ನಡೆಯುತ್ತಿರುವುದು ದುರದೃಷ್ಟಕರ ಸಂಗತಿ. ಇದನ್ನು ತಡೆಯಬೇಕಾಗಿದೆ. ಲಿಂಗ ತಾರತಮ್ಯ ಹಾಗೂ ಜಾತಿ ತಾರತಮ್ಯ ಎಲ್ಲದಕ್ಕಿಂತ ದೊಡ್ಡ ಮೂಢನಂಬಿಕೆಗಳಾಗಿವೆ. ಸ್ತ್ರೀಭ್ರೂಣಹತ್ಯೆ, ವರದಕ್ಷಿಣೆ ಪದ್ಧತಿ ತಡೆಯಬೇಕು. ತಾನು ಮಹಿಳೆ ಎಂಬ ಕೀಳು ಭಾವನೆ ಮನಸ್ಸಿನಿಂದ ತೊಡೆದು ಹಾಕಬೇಕು. ಸ್ತ್ರೀ ಮತ್ತು ಪುರುಷರಲ್ಲಿ ಸಮಾನತೆ ಬರಬೇಕು. ಉಪವಾಸ ವ್ರತಾಚರಣೆ ಹಾಗೂ ಸತ್ವಯುತ ಆಹಾರ ಸೇವನೆ ಬಗ್ಗೆ ನಿರ್ಲಕ್ಷ ತಾಳುವುದರಿಂದ ಮಹಿಳೆಯರಿಗೆ ಅಪೌಷ್ಠಿಕತೆಯ ಸಮಸ್ಯೆ ಹೆಚ್ಚಾಗಿ ಕಾಡುತ್ತದೆ.' ಎಂದು ಹೇಳಿದರು.



'ಮಾಂಸದೂಟ ಕನಿಷ್ಠ, ತರಕಾರಿ ಊಟ ಶ್ರೇಷ್ಠ ಎಂಬುದಿಲ್ಲ. ದೇಹಕ್ಕೆ ಶಕ್ತಿ ನೀಡುವ ಯಾವುದೇ ಆಹಾರವಿದ್ದರೂ ಸೇವಿಸಬೇಕು. ನಾರಿನಾಂಶವಿಲ್ಲದ ಕರಿದ ಆಹಾರ ದೇಹಕ್ಕೆ ಹಾನಿಕಾರಕವಾಗಿದೆ. ಆದ್ದರಿಂದ ಇಂಥ ಆಹಾರದಿಂದ ದೂರವಿರಬೇಕು. ಅಂಗನವಾಡಿ ನೌಕರರ ವೇತನ ಹೆಚ್ಚಿಸಬೇಕು ಎಂಬ ಬೇಡಿಕೆ ಬಹುದಿನಗಳದ್ದಾಗಿದೆ. ಆದರೂ ಸರ್ಕಾರಗಳು ಇವರ ಸಮಸ್ಯೆ ಬಗೆಹರಿಸದೆ ಉದ್ಯಮಿಗಳ ಕೋಟ್ಯಂತರ ರೂಪಾಯಿ ಸಾಲಮನ್ನಾ ಮಾಡುವುದಕ್ಕೆ ಮಹತ್ವ ನೀಡುತ್ತಿವೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಎಸ್.ವರಲಕ್ಷ್ಮಿ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎ.ಆರ್.ಸಿಂಧು, ವಕೀಲ ಸುಧೀರಕುಮಾರ ಮರೊಳ್ಳಿ, ಯರ್ರಮ್ಮ, ಶ್ರೀದೇವಿ ಚುಡೆ, ಶಾಂತಾ ಘಂಟೆ, ಪದ್ಮಾಸ್ವಾಮಿ, ಸುಶೀಲಾ ಹತ್ತೆ ಉಪಸ್ಥಿತರಿದ್ದರು. ಅನೇಕ ನೌಕರರು ಪಾಲ್ಗೊಂಡಿದ್ದರು.

ಬಜೆಟ್ ನಲ್ಲಿ ಮೋದಿ-ಗೋಯಲ್ ಕೊಟ್ಟಿದ್ದೇನು?

ಅಂಗನವಾಡಿ ರಾಜ್ಯ ಸಮ್ಮೇಳನದ ಕೊನೆಯ ದಿನ ಫೆ.1 ರಂದು ಕೇಂದ್ರ ಬಜೆಟ್ ಮಂಡಿಸಲಾಗಿದ್ದು, ಅಂನವಾಡಿ ನೌಕರರ ಸಂಘದ ಪರವಾಗಿ ಈ ಹೇಳಿಕೆ ನೀಡಲಾಗಿದೆ:

ಅಂಗನವಾಡಿ ನೌಕರರಿಗೆ ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಕೇಂದ್ರ ಸರ್ಕಾರ ತಾನು ದೀಪಾವಳಿಯ ಉಡುಗೊರೆಯಾಗಿ 1500 ಮತ್ತು750 ರೂ. ಹೆಚ್ಚಿಸಿದ್ದೇನೆಂದು ಹೇಳಿದ ಹಣವನ್ನೇ ಇನ್ನೂ ನೀಡದೇ ಈಗ ಬಜೆಟ್ಟಿನಲ್ಲಿ ಗೌರವಧನ ದುಪ್ಪಟ್ಟು ಹೆಚ್ಚಿಸಿರುವುದಾಗಿ ಮತ್ತೆ ಸುಳ್ಳುಗಳ ಸರಮಾಲೆಯನ್ನೇ ಹೆಣೆದು ಮಹಾದ್ರೋಹವೆಸಗಿದೆ. ಪಿಂಚಣಿಗಾಗಿ ಏನನ್ನೂ ಹಣ ಮೀಸಲಿಟ್ಟಿಲ್ಲ. ಪೂರಕ ಪೌಷ್ಟಿಕ ಆಹಾರದ ಸಲುವಾಗಿ ಅಗತ್ಯವಿರುವ ಬಜೆಟ್ ಅನುದಾನವನ್ನು ಘೋಷಿಸಿಲ್ಲ. ಇದನ್ನು ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ರಿ) ರಾಜ್ಯ ಸಮಿತಿಯು ಬಲವಾಗಿ ಖಂಡಿಸುತ್ತದೆ. ಮತ್ತು ಮುಂದಿನ ದಿನಗಳಲ್ಲಿ ಕೇಂದ್ರ ಬಿಜೆಪಿ ಸರ್ಕಾರದ ಧೋರಣೆ ಖಂಡಿಸಿ ತೀವ್ರ ಹೋರಾಟಕ್ಕೆ ಕರೆ ನೀಡಲಾಗಿದೆ. ವಾಸ್ತವಿಕವಾಗಿ 17,870.19 ಕಳೆದ ವರ್ಷ ಮೀಸಲಿಡಲಾಗಿತ್ತು.

ಈ ವರ್ಷ 19,834.37 ಕೋಟಿ ರೂ. ಅಂಗನವಾಡಿ ಸೇವೆಗೆ ಮೀಸಲಿಟ್ಟಿದ್ದಾರೆ ಹೊರತೂ ಐಸಿಡಿಎಸ್ ಗೆ ಹೆಚ್ಚಳ ಅಲ್ಲ. ಅಂದರೆ ಕೇವಲ 1944.18 ಕೋಟಿ ರೂ. ಹೆಚ್ಚಳವಾಗಿದೆ. ಇದು ಇಂದಿನ ಬೆಲೆ ಏರಿಕೆಗೆ ಅನುಗುಣವಾಗಿಲ್ಲ. ಇದು ಸೆಪ್ಟೆಂಬರ್ ದಿಂದ ಮಾರ್ಚ 2020 ಗೌರವಧನದಲ್ಲಿ ಹೆಚ್ಚಳಕ್ಕೆ ಬಜೆಟ್ ಬೇಕಿರುವುದು 18 ತಿಂಗಳಿಗೆ 10649.41. ಕೋಟಿ ರೂ. ಆದರೆ ಕೇಂದ್ರ ಘೋಷಿಸಿದ 1500 ರೂ ಗೌರವಧನ ಹೆಚ್ಚಳದಲ್ಲಿ ಕೇಂದ್ರ ರಾಜ್ಯದ 60 : 40 ಅನುಪಾತಕ್ಕೆ ಹೋಲಿಸಿದರೆ ಒಂದು ವರ್ಷಕ್ಕೆ 4259 ಕೋಟಿ ಬೇಕು. ಆದರೆ ಮೋದಿ ಸರ್ಕಾರವು ಅಂಗನವಾಡಿ ಸೇವೆಗೆ ಹೆಚ್ಚಿಸಿದ ಹಣ ಕೇವಲ 1944.18 ಕೋಟಿ ರೂ. ಇದು ಏನೇನೂ ಸಾಲದು. ಹಾಗಾಗಿ ಈ ಬಜೆಟ್ ಸುಳ್ಳಿನ ಸರಮಾಲೆ ಎಂದು ತೀವ್ರವಾಗಿ ಪ್ರತಿಭಟಿಸುತ್ತೇವೆ.



ಅಂಗನವಾಡಿ ರಾಜ್ಯ ಪದಾಧಿಕಾರಿಗಳ ಆಯ್ಕೆ

ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿದ್ದ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ 7ನೇ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಸಮಿತಿ ಅಧ್ಯಕ್ಷರಾಗಿ ಎಸ್.ವರಲಕ್ಷ್ಮಿ, ಪ್ರಧಾನ ಕಾರ್ಯದರ್ಶಿಯಾಗಿ ಎಚ್.ಎಸ್. ಸುನಂದಾ ಖಜಾಂಚಿಯಾಗಿ ಕಮಲಾ ಉಪಾಧ್ಯಕ್ಷರಾಗಿ ಲೀಲಾವತಿ ಟಿ ಬೆಂಗಳೂರು, ಕೆ ನಾಗರತ್ನ ಬಳ್ಳಾರಿ, ಶ್ರೀದೇವಿ ಚುಡೆ ಬೀದರ್, ಭಾರತಿ ವಾಲಿ ವಿಜಯಪುರ, ಸುರೇಖಾ ಯಾದಗೀರ್, ಕಲಾವತಿ ಕೊಪ್ಪಳ, ಇಂದ್ರಮ್ಮ ಹಾಸನ, ಕಾರ್ಯದರ್ಶಿಗಳಾಗಿ ಯಮುನಾ ಗಾಂವ್ಕರ್ ಉಕ, ನಾಗರತ್ನ ಬಿ.ಎಸ್ ಕೋಲಾರ, ಗೌರಮ್ಮ ಪಾಟೀಲ್ ಕಲಬುರಗಿ, ಲಕ್ಷ್ಮಿದೇವಮ್ಮ ಚಿಕ್ಕಬಳ್ಳಾಪುರ, ದೊಡ್ಡವ್ವ ಬೆಳಗಾವಿ, ಪದ್ಮಾ ರಾಯಚೂರು, ಸುಶೀಲಾ ನಾಡಾ ಉಡುಪಿ, ಗುಲ್ಜಾರ್ ಬಾನು ತುಮಕೂರು, ಸುಜಾತಾ ಚಾಮರಾಜನಗರ ಪದಾಧಿಕಾರಿಗಳು ಆಯ್ಕೆಯಾದರು.


ಎಸ್. ವರಲಕ್ಷ್ಮಿ


ಎಚ್.ಎಸ್. ಸುನಂದಾ


ಕಮಲಾ



ಮಂಗನ ಕಾಯಿಲೆ

ಡಾ. ಪ್ರಕಾಶ ಸಿ. ರಾವ್

> **ಈ ರೋಗ ಸಾಂಕ್ರಾಮಿಕ ರೂಪ ತಾಳಲು ಅರಣ್ಯನಾಶ, ವೈದ್ಯಕೀಯ ವ್ಯವಸ್ಥೆಯ ಕಳಪೆ ಕಾರ್ಯವೈಖರಿ ಹಾಗೂ ಜನರಿಗೆ ಈ ರೋಗದ ಬಗ್ಗೆ ಸರಿಯಾದ ಮಾಹಿತಿ ನೀಡದಿರುವುದು ಮುಖ್ಯ ಕಾರಣವಾಗಿದೆ.**

'ಮಂಗನ ಕಾಯಿಲೆ' ಎಂಬುದು ಕೈಸನೂರ್ ಫಾರೆಸ್ಟ್ ಡಿಸೀಸ್ (KFD) ಎಂಬ ರೋಗದ ಜನಜನಿತವಾದ ಹೆಸರು. ಈ ರೋಗ ದಕ್ಷಿಣ ಏಷಿಯಾ ಭಾಗದ ಸ್ಥಳೀಯ ರೋಗವಾದರೂ ಆಗಾಗ ಬೇರೆ ಬೇರೆ ಕಡೆಗಳಲ್ಲಿ ಸಾಂಕ್ರಾಮಿಕ ರೋಗದಂತೆ ಸಾಕಷ್ಟು ಸಾವುಗಳನ್ನು ಉಂಟುಮಾಡುತ್ತದೆ.

ಇದು ಉಣ್ಣೆ ಹುಳುವಿನ ಕಚ್ಚುವಿಕೆಯಿಂದ ಹರಡುವ ವೈರಸ್ ಜ್ವರ. ಈ ವೈರಸ್ ಗುಂಪಿಗೆ ಸೇರಿದ ಇತರೆ ವೈರಸ್‌ಗಳು ಹಳದಿ ಜ್ವರ ಹಾಗೂ ಡೆಂಗೂ ಜ್ವರ ರೋಗ ಉಂಟು ಮಾಡುತ್ತವೆ. ಭಾರತದಲ್ಲಿ ಈ ರೋಗ ಮೊದಲ ಬಾರಿಗೆ ವರದಿಯಾದದ್ದು, ಮಾರ್ಚ್ 1957 ರಲ್ಲಿ. ಈ ರೋಗ ಕೋತಿಗಳಲ್ಲಿ ಕಂಡು ಬಂದಿತ್ತು ಹಾಗೂ ಈ ರೋಗದಿಂದ ಹಲವಾರು ಕೋತಿಗಳು ಸಾವನ್ನಪ್ಪಿದ್ದವು.

ಈಗ PCR ಹಾಗೂ Elisa ಪರೀಕ್ಷೆಗಳು ಲಭ್ಯವಿರುವುದರಿಂದ ಈ ರೋಗದ ಬಗ್ಗೆ ಹೆಚ್ಚು ಮಾಹಿತಿ ಲಭ್ಯವಾಗುತ್ತಿದೆ. ಈ ವೈರಸ್ 700 ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿದೆ ಎಂದು ಹೇಳಲಾಗುತ್ತಿದೆ.

ರೋಗದ ವ್ಯಾಪ್ತಿ

ಈ ರೋಗ ಮೊದಲಿಗೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನಲ್ಲಿ ಕಂಡು ಬಂದಿತ್ತು. ನಂತರ ಚಾಮರಾಜನಗರ ರಾಷ್ಟ್ರೀಯ ಉದ್ಯಾನದಲ್ಲಿ ಹಾಗೂ ನಂತರ ತಮಿಳುನಾಡಿನಲ್ಲಿ ಪತ್ತೆಯಾಗಿತ್ತು. ಅದೇ ವೇಳೆ ಒಂದು ಕುತೂಹಲಕರ ಸಂಗತಿ ಬೆಳಕಿಗೆ ಬಂದಿತ್ತು. ಅದೇನೆಂದರೆ ಸತ್ತ ಕೋತಿಗಳನ್ನು ಸಾಗಿಸುತ್ತಿದ್ದ ಮಾನವನಲ್ಲಿ ಈ ರೋಗ ಕಂಡು ಬಂದು ಅವರು ಮೃತಪಟ್ಟಿದ್ದು ವರದಿಯಾಗಿತ್ತು. ಅದೇ ವೇಳೆಗೆ ಕೇರಳದ ವೈನಾಡಿನಲ್ಲಿ ಒಬ್ಬ ವ್ಯಕ್ತಿಯ ದೇಹದಲ್ಲಿ ವೈರಸ್ ಪತ್ತೆಯಾಗಿ (Carrier) ಆ ವ್ಯಕ್ತಿ ಯಾವ ರೋಗ ತೊಂದರೆಯಿಂದ ಬಳಲದೇ ಇರುವುದು ಕಂಡು ಬಂದಿತ್ತು. ಈ ರೋಗ ಮಾನವನಲ್ಲಿಯೂ ಸಾವು ಉಂಟುಮಾಡಲು ಆರಂಭಿಸಿತು. ಈಗ ಈ ರೋಗ ಕರ್ನಾಟಕದ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಸಾಗರ, ಶಿಕಾರಿಪುರ, ಸೊರಬ ಮುಂತಾದವುಗಳಲ್ಲಿ ಕಂಡು ಬರುವುದಲ್ಲದೇ ಇತರ ರಾಜ್ಯಗಳಾದ ಕೊಲ್ಕತ್ತಾ, ಗುಜರಾತ್ ಅಲ್ಲದೆ, ಇತರ ದೇಶಗಳಾದ ಚೀನಾ ಹಾಗೂ ಸೌದಿ ಅರೇಬಿಯಾದಲ್ಲೂ ಕಂಡು ಬಂದಿದೆ. ಈ ರೋಗದ ವೈರಸ್ ಕೋತಿ, ಮುಳ್ಳುಹಂದಿ, ಅಳಿಲು ಹಾಗೂ ಇಲ್ಲಿಗಳಲ್ಲಿ ಜೀವಿಸುತ್ತಿದ್ದು ಇಲಿ ಹಾಗೂ ಕೋತಿಗಳಿಂದ ಉಣ್ಣೆ ಹುಳುಗಳ ಮೂಲಕ ಹರಡುತ್ತದೆ ಹಾಗೂ ಮಾನವನಲ್ಲಿ ರೋಗ ಉಂಟು ಮಾಡುತ್ತದೆ.

ಈ ರೋಗದಿಂದ 9–10% ಜನರು ಸಾವನ್ನಪುತ್ತಾರೆ ಹಾಗೂ ವಾರ್ಷಿಕವಾಗಿ ಕರ್ನಾಟಕದಲ್ಲಿ 400 ರಿಂದ 500 ಜನರು ಸಾಯುವುದಾಗಿ ತಿಳಿದು ಬಂದಿದೆ.

ರೋಗ ತೊಂದರೆ

ವ್ಯಕ್ತಿಯಲ್ಲಿ ವಿಪರೀತ ಜ್ವರ, ತಲೆನೋವು, ಗಂಟಲು, ಒಸಡು, ಮೂಗು ಹಾಗೂ ಜೀರ್ಣಾಂಗ ವ್ಯವಸ್ಥೆಯಿಂದ ರಕ್ತಸ್ರಾವ ಇದಲ್ಲದೆ ವಾಂತಿ ಸ್ನಾಯುಗಳ ಸೆಳೆತ ಮೈ ನಡುಕ, ಮಾನಸಿಕ ತೊಂದರೆಗಳು ಕಂಡುಬರುತ್ತವೆ. ವ್ಯಕ್ತಿ ಎರಡು ವಾರದಲ್ಲಿ ಗುಣಹೊಂದುತ್ತಾನೆ ಆದರೆ ಪೂರ್ಣ ಚೇತರಿಸಿ ಕೊಳ್ಳಲು ಹಲವಾರು ತಿಂಗಳುಗಳೇ ಬೇಕಾಗುತ್ತದೆ. ಈ ಚೇತರಿಕೆಯ ಸಮಯದಲ್ಲಿ ವ್ಯಕ್ತಿಗೆ ನೋವು ಹಾಗೂ ಸುಸ್ತು ಕಂಡು ಬರುತ್ತದೆ ಹಾಗೂ ವ್ಯಕ್ತಿಗೆ ವಿಶ್ರಾಂತಿ ಅನಿವಾರ್ಯವಾಗುತ್ತದೆ. ಈ ರೋಗದ ಬಗ್ಗೆ ಎಲ್ಲಾ ವಿಚಾರಗಳೂ ತಿಳಿದುಬಂದಿಲ್ಲ, ಆದರೆ ಈಗ ತಿಳಿದಿರುವ ವಿಷಯವೇನೆಂದರೆ ಏಈಆ ವೈರಸ್ ಪ್ರಮುಖವಾಗಿ ಇಲಿಗಳ ಮಿದುಳಿನಲ್ಲಿ ಸಂಖ್ಯಾವೃದ್ಧಿ ಹೊಂದುತ್ತವೆ ಹಾಗೂ ಆ ಜೀವಕೋಶಗಳ ಉರಿಯೂತ ಉಂಟುಮಾಡುತ್ತವೆ. ಕೊನೆಯಲ್ಲಿ ಸಾವು ಸಂಭವಿಸುತ್ತದೆ. ಆದ್ದರಿಂದ ಇದೊಂದು ಸರದಿ ಕಾಯಿಲೆಯಾಗಿದೆ.

ಇಲ್ಲಿಯವರೆಗೆ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ನಮಗೆ ಇರುವ ಅಸ್ತ್ರ ಲಸಿಕೆಗಳು ಹಾಗೂ ನೈರ್ಮಲ್ಯ. ಈ ರೋಗ ತಡೆಗಟ್ಟಲು ಲಸಿಕೆ ಹಾಗೂ ಉಣ್ಣೆ ಹುಳುವಿನ ಕಚ್ಚುವಿಕೆಯಿಂದ ದೂರವಿರುವುದು. ಈ ರೋಗ ತಡೆಗಟ್ಟುವಿಕೆಗೆ ಲಸಿಕೆಯನ್ನೂ ಬಳಸಲಾಗುತ್ತಿದೆ. ಅದನ್ನು ಎರಡು ಬಾರಿ ಒಂದು ತಿಂಗಳ ಅಂತರದಲ್ಲಿ ನೀಡಲಾಗುತ್ತದೆ. ಇನ್ನೊಮ್ಮೆ ಬಲವರ್ಧಕ ಲಸಿಕೆಯನ್ನೂ ಕೊಡಲಾಗುವುದು.

ಕರ್ನಾಟಕದಲ್ಲಿ

2018 ಜನವರಿಯಲ್ಲಿ ಈ ರೋಗದ ಸಾಂಕ್ರಾಮಿಕತೆ ಕಂಡುಬಂದಿದ್ದು ಶಿವಮೊಗ್ಗ ಜಿಲ್ಲೆಯಲ್ಲಿ ಮತ್ತು ಅರಕಲಗೂಡು ತಾಲೂಕಿನಲ್ಲಿ. ಅಲ್ಲಿಯ ಜನರಿಗೆ ಮೊದಲಿನಿಂದಲೂ ಪ್ರತಿವರ್ಷ ಲಸಿಕೆ ಹಾಕಲಾಗುತ್ತಿತ್ತು. ಆದರೆ ಲಸಿಕೆ ಹಾಕುವಲ್ಲಿ ಲೋಪದೋಷಗಳು ಕಂಡು ಬಂದಿದ್ದರಿಂದ ಈ ಬಾರಿ ಸಾಂಕ್ರಾಮಿಕವಾಗಿ ಈ ರೋಗ ಕಂಡು ಬಂದಿದೆ ಅಧಿಕಾರಿಗಳು ಹೇಳುತ್ತಿದ್ದಾರೆ ಹಾಗೂ ಲೋಪದೋಷಗಳನ್ನು ಒಪ್ಪಿಕೊಂಡಿದ್ದಾರೆ. ಈಗ ಆದ ಲೋಪದೋಷಗಳನ್ನು ತನಿಖೆ ಮಾಡಲು ತಂಡ ರಚನೆಯಾಗಿದೆ. ಸಾಮಾನ್ಯವಾಗಿ ಈ ರೋಗ ವೈರಸ್ ಪತ್ತೆಯಾದ 5 ಕಿ.ಮಿ.ನ ಸುತ್ತಮುತ್ತಲಿನ ಪ್ರದೇಶದಲ್ಲಿ ಲಸಿಕೆ ಹಾಕಬೇಕೆಂದು 1990 ರಲ್ಲಿ ತೀರ್ಮಾನಿಸಲಾಗಿತ್ತು. ಆದರೆ 2014 ರಲ್ಲಿ ಈ ತೀರ್ಮಾವನ್ನೂ ಬದಲಿಸಿ 10 ಕಿ.ಮೀ. ಆಸುಪಾಸಿನಲ್ಲಿ ಈ ಲಸಿಕೆ ಹಾಕಬೇಕೆಂದು ಬದಲಿಸಲಾಗಿತ್ತು. ಆದರೆ ಈ ತೀರ್ಮಾನವನ್ನೂ ಪಾಲಿಸದಿರುವುದರಿಂದ, ಇತ್ತೀಚೆಗಿನ ಜನವರಿ 2019ರ ಸಾಂಕ್ರಾಮಿಕತೆಯಿಂದ ಬಳಲುತ್ತಿರುವ ರೋಗಿಗಳನ್ನು ಮಂಗಳೂರಿನ ಮೆಗ್ಗಾನ್ ಆಸ್ಪತ್ರೆ, ಸಾಗರದ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಯಿತು.

1990 ರಿಂದ ಪ್ರತಿವರ್ಷ ಆಗಸ್ಟ್‌ನಿಂದ ನವೆಂಬರ್‌ವರೆಗೆ ಲಸಿಕೆ ಹಾಕಲು ಸರ್ಕಾರ ಕಾರ್ಯರೂಪಿಸಿದೆ. ಅದರೆ 2018 ರ ಸಾಂಕ್ರಾಮಿಕತೆಯ ನಂತರ 2000 ಜನರಿಗೆ ಲಸಿಕೆ ಹಾಕಲಾಗಿದೆ ಹಾಗೂ ಜನರು ಈಗ ಲಸಿಕೆ ಹಾಕಿಸಿಕೊಳ್ಳಲು ಮುಂದೆ ಬರುತ್ತಿದ್ದಾರೆ. ಈ ಲಸಿಕೆಯನ್ನು 7 ರಿಂದ 65 ವರ್ಷ ವಯಸ್ಸಿನವರಿಗೆ ಹಾಕಲಾಗುವುದು.

ಈ ರೋಗ ಸಾಂಕ್ರಾಮಿಕ ರೂಪ ತಾಳಲು ಅರಣ್ಯನಾಶ, ವೈದ್ಯಕೀಯ ವ್ಯವಸ್ಥೆಯ ಕಳಪೆ ಕಾರ್ಯವೈಖರಿ ಹಾಗೂ ಜನರಿಗೆ ಈ ರೋಗದ ಬಗ್ಗೆ ಸರಿಯಾದ ಮಾಹಿತಿ ನೀಡದಿರುವುದು ಮುಖ್ಯ ಕಾರಣವಾಗಿದೆ. ●

ಮದ್ಯೋದ್ಯಮ, ಬಂಡವಳಿಗರು ಮತ್ತು ಮಹಿಳಾ ಹೋರಾಟ.......... ಪುಟ 6 ರಿಂದ

ವಸ್ತುವಾದ ಮದ್ಯದ ತಯಾರಿಕೆಯನ್ನು ನಿಲ್ಲಿಸುವುದಕ್ಕೆ ಆಳುವ ವರ್ಗದ ಯಾರಿಗೇ ಆಗಲಿ ಹೇಗೆ ಮನಸ್ಸು ಬರಲು ಸಾಧ್ಯ?

ಈ ಮೌಢ್ಯ–ಬೆವರು–ವ್ಯಸನಗ್ರಸ್ತ 'ನತದೃಷ್ಟ ಕೊಳಕು ಕುಡುಕರ' ಕೊಳಕು ಹಣವು, ಇದರ ಇನ್ನೊಂದು ಕೊನೆಯಲ್ಲಿ ಮದ್ಯವ್ಯಾಪಾರದ ನೇರ ಫಲಾನುಭವಿಗಳಾದ ಮದ್ಯೋದ್ಯಮದ ಒಡೆಯರು, ಮದ್ಯದಂಗಡಿ ಮತ್ತು ಬಾರ್‌ಗಳ ಮಾಲೀಕರು ಮತ್ತು ಅವರ ಮನೆಜನರ ಶ್ರೀಮಂತಿಕೆಯಲ್ಲಿ, ಅವರ ಜೀವನಶೈಲಿಯ ಝಗಮಗದ ಒಡವೆ–ವಸ್ತ್ರಗಳಲ್ಲಿ ಗುರುತೇ ಸಿಗದಷ್ಟು ಪ್ರಖರವಾಗಿ ಹೊಳೆಯುತ್ತವೆ. ಮುಂದೆ ಸಾಗಿದಂತೆ ಭ್ರಷ್ಟ ಅಧಿಕಾರಿಗಳ ಲಂಚವಾಗಿ, ಸಂಚಯಗೊಂಡು ಪುಢಾರಿ–ರಾಜಕಾರಣಿ–ಪಕ್ಷಗಳ ವಂತಿಗೆಯಾಗಿ ಗೌರವ ರೂಪವನ್ನು ಪಡೆಯುತ್ತವೆ. ವಸೂಲಿಗೆ ಬರುವ ಪೋಲೀಸರ, ರೌಡಿಗಳ ಕೈಗೆ ದಾಟಿಸುವ ಮಾಮೂಲಿ ಹಫ್ತಾ ಆಗುತ್ತದೆ. ಅಲ್ಲಿ ಬಿದ್ದು, ಇಲ್ಲಿ ಸುತ್ತಿ, ಬಗೆ ಬಗೆಯ ವ್ಯಾಪಾರಿಗಳ ಕೈಗಳನ್ನು ಮುಟ್ಟಿ ಕೂಲಿ, ಸಂಬಳ, ಚೀಟಿಹಣ, ಕೈಸಾಲ, ಮೀಟರ್‌ಬಡ್ಡಿಗಳ ರೂಪದಲ್ಲಿ ಕುಡುಕರ ಸೇವನೆಗೆ ಅಂದರೆ, ಮದ್ಯೋದ್ಯಮಿಗಳ ಸೇವೆಗೆ ಸೇರಲು ಮತ್ತೆ ಸಜ್ಜಾಗುತ್ತದೆ.

ಮದ್ಯೋದ್ಯಮವು ಜನರ ಆರೋಗ್ಯಕ್ಕೆ ತೀವ್ರವಾಗಿ ಧಕ್ಕೆ ತರುವಂಥ ರಾಕ್ಷಸೀ ಉದ್ಯಮ ಎಂಬುದನ್ನು ಬಹುಜನರು ಬಲ್ಲರು. ಈ ಉದ್ಯಮದ ಮಾಲೀಕರಾಗಲಿ, ನೌಕರರಾಗಲಿ, ತಾವು ತಯಾರಿಸಿ ಮಾರಾಟಮಾಡುವ ಉತ್ಪನ್ನವು ಅಂತಿಮವಾಗಿ ಯಾರನ್ನು ತಲುಪುತ್ತದೆ ಎಂಬುದನ್ನು ಅರಿಯದವರೇನಲ್ಲ. ಚುನಾವಣೆಗಳಲ್ಲಿ ಆರಿಸಿ ಬರುವಾಗ ಬಡಜನರ ಕಡೆಗೆ ಮದ್ಯದ ಹೊಳೆಯನ್ನೇ ಹರಿಸಿ ಅಧಿಕಾರಕ್ಕೆ ಬರುವ ಚುನಾಯಿತ ಸರ್ಕಾರಗಳು ಮದ್ಯೋದ್ಯಮವನ್ನು ಪರವಾನಗಿಯ ಮೂಲಕ ನಿಯಂತ್ರಿಸಿ, ಅಗಾಧ ಪ್ರಮಾಣದ ಹಣವನ್ನು ತನ್ನ ಖಜಾನೆಗೆ ಸೇರಿಸಿಕೊಳ್ಳುತ್ತವೆ. ಜನರ ಕಲ್ಯಾಣಕ್ಕಾಗಿ ಆ ಹಣವನ್ನು ಬಳಸುತ್ತೇವೆಂದು ಹೇಳಿಕೊಳ್ಳುತ್ತವೆ. ಹಾಗಿದ್ದರೆ ಇವರ‍್ಯಾರಿಗೂ ಸಂವೇದನೆ ಎಂಬುದು ಇಲ್ಲವೆ? ಉತ್ತರ ಕಷ್ಟವೇನಲ್ಲ. ಖಾಸಗಿ ವ್ಯಕ್ತಿಗಳಾಗಿ ಸಂವೇದನೆ ಇದೆ. ಆದರೆ ಆಳುವ ಸಂಸ್ಥೆಗಳಾಗಿ ಯಾವ ಸಂವೇದನೆಯೂ ಇರುವುದಿಲ್ಲ. ಮದ್ಯಪಾನಾಸಕ್ತರು ಮತ್ತು ವ್ಯಸನಿಗಳು ಮೂಲತಹ ಸ್ವಕೇಂದ್ರಿತ ಹಿತಾಸಕ್ತಿಯ ಬಲಿಪಶುಗಳು. ಹೀಗಾಗಿ ಅವರ‍್ಯಾರೂ ಮದ್ಯೋದ್ಯಮದ ವಿರೋಧಿಗಳಲ್ಲ. ಇನ್ನುಳಿದಿರುವುದು ಮದ್ಯೋದ್ಯಮದಿಂದಾಗಿ ಹೇಳತೀರದ ಸಂಕಷ್ಟಗಳಿಗೆ ಒಳಗಾಗುವ ಬಡಮಹಿಳೆಯರು ಮತ್ತು ಸಹಾಯ ಮಕ್ಕಳು. ಮದ್ಯಸೇವನೆಯ ನಿಜವಾದ ಸಂತ್ರಸ್ತರು ಇವರೇ. ಮದ್ಯಪಾನವನ್ನು ಸಮರ್ಥಿಸುವವರಿಗೆ ವ್ಯಸನಿಗಳು ಕಣ್ಣಿಗೆ ಬೀಳುತ್ತಾರೆಯೇ ಹೊರತು ಈ ನಿಜವಾದ ಸಂತ್ರಸ್ತರು ಕಣ್ಣಿಗೆ ಬೀಳುವುದಿಲ್ಲ.

ಗ್ರಂಥಗಳಲ್ಲಿರುವ ಎಂಥಾ ಕ್ರಾಂತಿಕಾರಕ ಆಲೋಚನೆಯಾಗಲಿ, ಘೋಷಣಾಫಲಕ–ಭಿತ್ತಪತ್ರಗಳಲ್ಲಿ ಕಾಣಿಸುವ ಕಷ್ಟ, ಬೇಡಿಕೆ, ಆಗ್ರಹಗಳಾಗಲಿ, ಸಾಮಾಜಿಕವಾಗಿ ವ್ಯಕ್ತಿಗಳ ರೂಪದಲ್ಲಿ ಅಭಿವ್ಯಕ್ತಗೊಳ್ಳದಿದ್ದರೆ ಅವಕ್ಕೆ ಜೀವವಿಲ್ಲ. ಸಂಘಟನೆಯ ರೂಪ ತಾಳದಿದ್ದರೆ ಅವಕ್ಕೆ ರಾಜಕೀಯ ಶಕ್ತಿಯಿಲ್ಲ. ಆಳುವವರ ಅಸ್ತಿತ್ವನ್ನೇ ಅಲುಗಾಡಿಸದಿದ್ದರೆ ಅವರ ನೀತಿಗಳು ಬದಲಾಗುವುದಿಲ್ಲ. ನೀತಿ ಬದಲಾಗುವ ಭೀತಿ ಎದುರಾಯಿತೆಂದರೆ ಪೋಲೀಸರ ಆಗಮನವಾಗುತ್ತದೆ. ಆಳುವವರ್ಗದ ನಿಜವಾದ ಶಕ್ತಿಯ ಪರಿಚಯ ಅಲ್ಲಿಂದ ಮೊದಲಾಗುತ್ತದೆ.

ಚಿತ್ರದುರ್ಗದಿಂದ ಹೊರಟ ಮದ್ಯಪಾನ ಸಂತ್ರಸ್ತ ಮಹಿಳೆಯರು, ಕಾಲ್ನಡಿಗೆಯ 10 ದಿನಗಳ ಪ್ರಯಾಸಕರ ಜಾಥಾ ನಡೆಸಿ ರಾಜ್ಯದ ರಾಜಧಾನಿಯನ್ನು ತಲುಪಿ, ಮುಖ್ಯಮಂತ್ರಿಗಳಿಂದ 'ಸರ್ಕಾರಕ್ಕೆ ಅತ್ಯಧಿಕ ಆದಾಯ ತರುವ ಮದ್ಯದ ನಿಷೇಧ ಸಾಧ್ಯವಿಲ್ಲ' ಎಂಬ ಖಚಿತ ಉತ್ತರ ಪಡೆದು ಅವರವರ ಊರಿಗೆ ವಾಪಸ್ಸಾಗಿದ್ದಾರೆ. ತಮ್ಮ ಊರಿನ ಅಂಗಡಿಗಳ ಮುಂದೆ ಪ್ರತಿಭಟಿಸುತ್ತೇವೆ ಎಂಬ ನಿರ್ಧಾರ ಅವರದ್ದು. ವಿವಿಧ ಉದ್ಯಮಗಳ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರು, ಬ್ಯಾಂಕ್–ಎಲ್ಐಸಿ–ಅಂಚೆ ನೌಕರರರು ಸಂಬಳ ಕಳೆದುಕೊಂಡು ಕಾರ್ಮಿಕವಿರೋಧಿ ನೀತಿಗಳ ವಿರುದ್ಧ ಮಾಡಿದ ಎರಡು ದಿನದ ಪ್ರತಿಭಟನೆ ಸರ್ಕಾರದ ನೀತಿಗಳನ್ನು ಅಲ್ಲಾಡಿಸಿತೆ? ಹಾಗಿದ್ದರೆ ಅವೆಲ್ಲಾ ವ್ಯರ್ಥವೆ? ಸ್ವಯಂಸ್ಫೂರ್ತಿಯಿಂದ ಸಂಘಟಿತಗೊಂಡು ಒಂದು ಸಣ್ಣ ಆರ್ಥಿಕ ಹಕ್ಕಿಗಾಗಿ ಕೇವಲ ಎರಡೇ ದಿನ ನೆಡೆದರೂ ಕೇಂದ್ರ ಸರ್ಕಾರವು ತನ್ನ ನೀತಿಯನ್ನು ಹಿಂತೆಗೆದುಕೊಳ್ಳುವಂತೆ ಮಾಡಿದ ಬೀದಿ ಹೋರಾಟದ ಶಕ್ತಿ ಎಲ್ಲಿಂದ ಬಂದಿತು? ಮುಂದಿನ ದಿನಗಳ ಹೋರಾಟಗಳ ಸೂಚನೆಗಳು ಈ ವಿದ್ಯಮಾನಗಳಲ್ಲಿವೆಯೆ? ಜಾಗತಿಕ ಬಂಡವಾಳವು ಸರಕು ಬಂಡವಾಳದಿಂದ, ಸೇವೆಗಳ ಬಂಡವಾಳ, ಹಣಕಾಸು ಬಂಡವಾಳ, ಡಿಜಿಟಲ್ ಬಂಡವಾಳ ಹೀಗೆ ತನ್ನ ಉಳಿವಿಗಾಗಿ ವೇಷ ಬದಲಾಯಿಸುತ್ತಾ, ಫ್ಯಾಸೀವಾದದ ಕಡೆಗೆ ಸಾಗುತ್ತಿರುವಾಗ ಶ್ರಮಿಕರ ಸಂಘಟನಾ ಸ್ವರೂಪಗಳು, ಹೋರಾಟದ ವಿಧಾನಗಳು ಬದಲಾಗುತ್ತಾ ರೈತ ಹೋರಾಟ, ದಲಿತ ಹೋರಾಟಗಳಾಗಿ, ಶ್ರಮದ ಸ್ತ್ರೀಕರಣವು ಹೆಚ್ಚು ಹೆಚ್ಚು ವ್ಯಾಪಕವಾಗುತ್ತಾ, ಮಹಿಳಾ ಹೋರಾಟಗಳಾಗಿ, ಕುಟುಂಬಗಳ ಸಾತ್ವಿಕ ಸಿಟ್ಟಿನ ಮಹಿಳೆಯರಲ್ಲಿ ಸುಪ್ತವಾಗಿರುವ ಹೋರಾಟದ ಕೆಚ್ಚನ್ನು ಬಡಿದೆಬ್ಬಿಸುತ್ತಿದೆಯೇ ಎಂಬ ಪ್ರಶ್ನೆಯನ್ನು ಮದ್ಯದ ನಿಷೇಧಕ್ಕಾಗಿ ಜಾಥಾ ನಡೆಸಿದ ಮಹಿಳೆಯರ ಸಂಘಟನೆಯು ಎತ್ತುತ್ತಿದೆ. ಜನಸಮುದಾಯದ ಪಾಲಿಗೆ ಇದು ಖಂಡಿತವಾಗಿಯೂ ಒಂದು ಆಶಾದಾಯಕ ಬೆಳವಣಿಗೆ. ●



30 ಲಕ್ಷ ಜೀವಗಳನ್ನು ಬಲಿ ತೆಗೆದುಕೊಂಡ ಬಂಗಾಲದ ಭೀಕರ ಕ್ಷಾಮಕ್ಕೆ 75 ವರ್ಷ

ಅದು ಪ್ರಾಕೃತಿಕ ಕ್ಷಾಮವಲ್ಲ, ಆರ್ಥಿಕ ನರಮೇಧ

75 ವರ್ಷಗಳ ಹಿಂದೆ, 1943–44ರಲ್ಲಿ, ಬಂಗಾಲದಲ್ಲಿ ಸುಮಾರು 30ಲಕ್ಷ ಜೀವಗಳನ್ನು ಬಲಿ ತೆಗೆದುಕೊಂಡ ಭೀಕರ ಕ್ಷಾಮವು ಒಂದು ಪ್ರಾಕೃತಿಕ ದುರಂತವಲ್ಲ, ವಾಸ್ತವವಾಗಿ ಅದು ಒಂದು ಆರ್ಥಿಕ ನರಮೇಧವಲ್ಲದೆ ಮತ್ತೇನೂ ಅಲ್ಲ ಎಂಬುದನ್ನು ಮರೆ ಮಾಚಲಾಗಿದೆ. ಅದು ವಸಾಹತುಶಾಹೀ ದಮನದ ಅಂತಿಮ ಮತ್ತು ಅತ್ಯುಗ್ರ ಕೃತ್ಯವಾಗಿದ್ದು, 30 ಲಕ್ಷ ಜೀವಗಳನ್ನು ಅನಗತ್ಯವಾಗಿ ನಂದಿಸಿ ಬಿಟ್ಟದ್ದಕ್ಕೆ ಭಾರತ ಆ 'ಮಿತ್ರರಾಷ್ಟ್ರಗಳ ಕೂಟ'ದಿಂದ ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ನಷ್ಟಭರ್ತಿ ಮಾಡಿಕೊಡುವಂತೆ ಆಗ್ರಹಿಸಬೇಕಿದೆ ಎನ್ನುತ್ತಾರೆ ಪ್ರಸಿದ್ಧ ಅರ್ಥಶಾಸ್ತ್ರಜ್ಞೆ

ಪ್ರೊ. ಉತ್ಸಾ ಪಟ್ನಾಯಕ್

ಅನು: ಎಂ.ಜಿ.ವೆಂಕಟೇಶ್



ಬಂಗಾಳದ ಕ್ಷಾಮ 30 ಲಕ್ಷ ಹಸಿವಿನಿಂದ ನರಳುತ್ತಿದ್ದ ನಾಗರಿಕರನ್ನು ಬಲಿ ತೆಗೊಂಡು ಈಗ 75 ವರ್ಷಗಳು ಕಳೆದಿದೆ. 1943–44 ರಲ್ಲಿ ಸಂಭವಿಸಿದ ಈ ಕ್ಷಾಮಕ್ಕೆ ಕಾರಣ ಭಾರತದ ಜನಗಳಿಂದ ಸಂಪನ್ಮೂಲಗಳನ್ನು ಎತ್ತುವ ಆಗಿನ ಸರಕಾರದ ಉದ್ದೇಶಪೂರ್ವಕವಾದ ಧೋರಣೆ. ಇದನ್ನು ಅದು ಅರ್ಥಸಾಸ್ತ್ರಜ್ಞ ಜಾನ್ ಮೆನಾರ್ಡ್ ಕೀನ್ಸ್ "ಲಾಭದ ಹಣದುಬ್ಬರ" ಎಂದು ವರ್ಣಿಸಿದ್ದರು. ದುಡಿಯುವ ಜನಸಮೂಹಗಳ ಬಳಕೆಯ ಪ್ರಮಾಣವನ್ನು ಇಳಿಸುವುದು ಮತ್ತು ಅವರ ಉಳಿತಾಯವನ್ನು ಯುದ್ಧಕಾಲದಲ್ಲಿ ಉಂಟಾಗುವ ಖರ್ಚುಗಳನ್ನು ನಿಭಾಯಿಸಲು ಕಿತ್ತುಕೊಳ್ಳುವುದು ಈ ಧೋರಣೆಯ ಹೂರಣ. ಆತನ ಪ್ರಕಾರ ಇದೊಂದು ಕಾರ್ಯಸಾಧ್ಯ ಮಾರ್ಗ.

ಈ ಮಹಾನುಭಾವ ಭಾರತದ ಹಣಕಾಸು ವ್ಯವಹಾರಗಳಲ್ಲಿ ನಾಲ್ಕು ದಶಕಗಳ ಅನುಭವವನ್ನು ಹೊಂದಿದ್ದಾತ. ಲಂಡನ್‌ನ ಭಾರತದ ಕಛೇರಿಯಲ್ಲಿ ಉದ್ಯೋಗದಲ್ಲಿ ಪಡೆದುಕೊಂಡಿದ್ದ ಆತ ಭಾರತದ ಕರೆನ್ಸಿ ಮತ್ತು ಹಣಕಾಸು ಬಗ್ಗೆ ಪುಸ್ತಕವನ್ನು 1913 ರಲ್ಲಿ ಬರೆದಿದ್ದು ಭಾರತಕ್ಕೆ ಸಂಬಂಧಪಟ್ಟಂತೆ ಹಲವಾರು ಹಣಕಾಸು ಆಯೋಗಗಳಿಗೆ ಸಲಹೆಗಳನ್ನು ನೀಡಿದ್ದ. 1940 ರಲ್ಲಿ ಬ್ರಿಟನ್ನಿನ ಪ್ರಧಾನ ಮಂತ್ರಿಯವರಿಗೆ ಮತ್ತು ಹಣಕಾಸು ಮಂತ್ರಿಗೆ ಭಾರತದ ಹಣಕಾಸು ಮತ್ತು ವಿತ್ತೀಯ ವಿಚಾರಗಳಲ್ಲಿ ಪರಿಣತಿ ಹೊಂದಿದ್ದ ಸಲಹೆಗಾರನಾಗಿ ನೇಮಕಗೊಂಡಿದ್ದ. ತನ್ನ **ಕಾರ್ಮಿಕ–ವಿರೋಧಿ 'ಲಾಭದ ಹಣದುಬ್ಬರ' ಪರಿಕಲ್ಪನೆಗೆ ಬ್ರಿಟನ್ನಿನ ಕಾರ್ಮಿಕ ಸಂಘಟನೆಗಳ ತೀವ್ರ ವಿರೋಧದಿಂದಾಗಿ ಅದನ್ನು ಕೈಬಿಟ್ಟು ತೆರಿಗೆಗಳನ್ನು ಹೆಚ್ಚಿಸುವ ಕ್ರಮಗಳಿಗೆ ಮುಂದಾಗಬೇಕಾಯಿತು. ಆದರೆ ಎರಡನೇ ಮಹಾಯುದ್ಧದಲ್ಲಿ ಹೆಚ್ಚುತ್ತಿದ್ದ ಯುದ್ಧದ ವೆಚ್ಚಗಳಿಗಾಗಿ ಭಾರತದಲ್ಲಿ ಈ 'ಲಾಭದ ಹಣದುಬ್ಬರ'ವನ್ನು ಜಾರಿಗೆ ತರಲಾಯಿತು. ಅದರಿಂದಾಗಿ ಮಿಲಿಯಾಂತರ ಜನ ಬಂಗಾಳದಲ್ಲಿ ಹಸಿವಿನಿಂದ ಸಾಯಬೇಕಾಯಿತು.**

:"ಬೇಡಿಕೆ ನಿರ್ವಹಣೆಯ ಧೋರಣೆ"ಗಳು ಇಂದಿಗೂ ಮೇಲ್ವರ್ಗಗಳ ವಿದ್ಯಾವಂತ ಜನರಿಗೆ ನಿಚ್ಚಳವಾಗಿ ತಿಳಿಯದಿರುವಾಗ, ಈ ರೀತಿ ಬಲವಂತದ ಉಳಿತಾಯವನ್ನು ಹೆಚ್ಚಿಸಿ ಸಾಮೂಹಿಕ ಬೇಡಿಕೆಯನ್ನು ತಗ್ಗಿಸುವ ಉದ್ದೇಶಪೂರ್ವಕವಾದ ಧೋರಣೆಯಿಂದ 30 ಲಕ್ಷ ಜನ ಹಸಿವಿನಿಂದ ಸಾಯಬೇಕಾಗಿದ್ದ ಅಂಶವನ್ನು ಪ್ರಾಕೃತಿಕ ವೈಪರಿತ್ಯಗಳಾದ ಚಂಡಮಾರುತ, ಆಹಾರದ ಕೊರತೆ, ಕಾಳಸಂತೆ ಅಥವಾ ಸಕಾಲದಲ್ಲಿ ವಿದೇಶಗಳಿಂದ ಆಹಾರವನ್ನು ಆಮದು ಮಾಡಿಕೊಳ್ಳದಿರುವುದು ಅಥವಾ ಈ ಎಲ್ಲ ಪರಿಸ್ಥಿತಿಗಳ ಫಲಶೃತಿ ಎಂದು ತಪ್ಪು ಕಾರಣಗಳನ್ನು ಕೊಟ್ಟು ಯಶಸ್ವಿಯಾಗಿ ಮರೆಮಾಚಲು ಸಾಧ್ಯವಾಗಿದೆ. ಕೀನ್ಸ್ ತನ್ನ ಪುಸ್ತಕ "ಟ್ರೀಟೈಸ್ ಆನ್ ಮನಿ"(ಹಣದ ಕುರಿತ ಗ್ರಂಥ)ದಲ್ಲಿ ಯುದ್ಧಕ್ಕೆ ಮಾಡಬೇಕಾದ ವೆಚ್ಚ ಸ್ವೇಚ್ಛೆಯ ಉಳಿತಾಯಕ್ಕಿಂತ ಬಹಳಷ್ಟು ಹೆಚ್ಚಿರಬೇಕಾದ್ದರಿಂದ ಬಲವಂತದ ಉಳಿತಾಯ ಅಗತ್ಯವಾಗುತ್ತದೆ, ಅದನ್ನು ಉತ್ಪನ್ನಗಳ ಬೆಲೆಗಳನ್ನು ಬೇಕೆಂದೇ ವೇತನಕ್ಕಿಂತ ವೇಗವಾಗಿ ಹೆಚ್ಚಿಸಿ ಮಾಡಬಹುದು ಎಂದು ಪ್ರತಿಪಾದಿಸಿದನು. ಇದೇ ಆತ ಹೇಳಿದ 'ಲಾಭದ ಹಣದುಬ್ಬರ' ಎಂಬ ಪರಿಕಲ್ಪನೆ. "ಯುದ್ಧ ಕಾಲದಲ್ಲಿ ಬೆಲೆಗಳು ಹೆಚ್ಚಾಗಲು ಒಂದು ಲಾಭದ ಹಣದುಬ್ಬರಕ್ಕೆ ಅವಕಾಶ ಮಾಡಿಕೊಡುವುದು ಅನಿವಾರ್ಯವೂ ಹೌದು, ಜಾಣತನವೂ ಹೌದು" ಎಂದು ಆತ ಹೇಳಿದನು. ಈ ನೀತಿ ಕೂಲಿ ಕೆಲಸಗಾರರಲ್ಲದೇ ಸಣ್ಣ ಉತ್ಪಾದಕರಾದ ಮೀನುಗಾರರು, ಕುಶಲಕರ್ಮಿಗಳಿಗು, ಸಣ್ಣ ರೈತರಿಗೂ ಅಂದರೆ ಆಹಾರ ಸಾಮಗ್ರಿಗಳನ್ನು ಮಾರುಕಟ್ಟೆಯಿಂದಲೇ ಖರಿದಿಸಬೇಕಾದ ಸಮಾಜದ ಬಹುದೊಡ್ಡ ವಿಭಾಗಗಳನ್ನು ತಟ್ಟುವಂತದ್ದು.

1941 ರ ಅಂತ್ಯದ ವೇಳೆಯಲ್ಲಿ ಅಮೇರಿಕಾ ಜಪಾನಿನ ಮೇಲೆ ಯುದ್ಧ ಸಾರಿದಾಗ ಮಿತ್ರ ರಾಷ್ಟ್ರಗಳ ಸೈನ್ಯ ಮತ್ತು ವಾಯು ಪಡೆಗಳ ಚಲನವಲನ ಪೂರ್ವ ಭಾರತದ ಪೂರ್ವ ಪ್ರದೇಶಗಳಲ್ಲಿ ಚಲನೆ ಹೆಚ್ಚಾಯಿತು. ವಾಯುನೆಲೆ, ಬ್ಯಾರಕಗಳು, ಆಯುಧಗಳನ್ನು ತಯಾರಿಸುವ ಕಾರ್ಖಾನೆಗಳು, ರಾಸಾಯನಿಕಗಳು, ಸಮವಸ್ತ್ರ, ಬ್ಯಾಂಡೇಜ್‌ಗಳ ತಯಾರಿಕೆ ಮತ್ತು ನಿರ್ಮಾಣ ತೀವ್ರಗತಿಯಲ್ಲಿ ಮುಂದುವರೆಯಿತು. **1939ರ ಭಾರತ –ಬ್ರಿಟನ್ ಹಣಕಾಸು ಒಪ್ಪಂದದಂತೆ "ವಸೂಲಿ ಮಾಡಬಹುದಾದ ಯುದ್ಧ ವೆಚ್ಚ" ಎಂಬ ಒಂದು ವಿಧವನ್ನು ಸೃಷ್ಟಿಸಲಾಯಿತು. ತನ್ಮೂಲಕ ಮಿತ್ರ ರಾಷ್ಟ್ರಗಳ ಮಿಲಿಟರಿ ವೆಚ್ಚವನ್ನು ಯುದ್ಧ ಮುಗಿಯುವ ವರೆಗೆ ಭಾರತ ಭರಿಸಬೇಕಾಯಿತು. ರಿಸರ್ವ್ ಬ್ಯಾಂಕಿಗೆ ವೆಚ್ಚ ಮಾಡಿದ ಹಣಕ್ಕೆ ಪ್ರತಿಯಾಗಿ ಸ್ಟರ್ಲಿಂಗ್ ಪೌಂಡ್ ಪಾವತಿ ಮಾಡಬೇಕೆಂದು ನಿಗದಿ ಪಡಿಸಿದ್ದರೂ ಯಾವ ಪಾವತಿಯನ್ನು ಕೂಡ ಮಾಡಲಿಲ್ಲ. ಈ ವಸೂಲಿಯಾಗಬೇಕಿದ್ದ ಯುದ್ಧದ ವೆಚ್ಚವೇ 30 ಲಕ್ಷ ಜನರ ಮರಣ ಶಾಸನವಾಯಿತು.**

ರಿಸರ್ವ್ ಬ್ಯಾಂಕಿನ 1945–46 ರ ವರದಿಯಂತೆ ನಂಬಲಸಾಧ್ಯವಾದ ವೇಗದಲ್ಲಿ, ಬೇರಾವ ದೇಶದಲ್ಲೂ ಕಾಣದ ರೀತಿಯಲ್ಲಿ ಸರ್ಕಾರದ ವೆಚ್ಚದಲ್ಲಿ ಹೆಚ್ಚಳವಾಯಿತು. ಬ್ರಿಟಿಶ್ ಭಾರತದ ಯುದ್ಧ ಪೂರ್ವ ರಾಷ್ಟ್ರೀಯ ಅದಾಯದಲ್ಲಿ 35% ರಷ್ಟು ಯುದ್ಧದ ಕಾರಣಗಳಿಗೆ ಖರ್ಚಾದರೆ, ಇದರಲ್ಲಿ ಮೂರನೇ ಎರಡು ಭಾಗದಷ್ಟು ಹಣವನ್ನು ನೋಟುಗಳ ಪ್ರಿಂಟಿಂಗ್ ಮುಖಾಂತರ ನಿರ್ವಹಿಸಲಾಯಿತು. 1942–43 ಹಣಕಾಸು ವರ್ಷದಲ್ಲಿ ಕೇಂದ್ರ ಸರಕಾರದ ಒಟ್ಟು ವೆಚ್ಚ ಹಿಂದಿನ ಮೂರು ವರ್ಷಗಳಿಗೆ ಹೋಲಿಸಿದರೆ 7.5ಪಟ್ಟು ಹೆಚ್ಚಿ ಒಟ್ಟು 675 ಕೋಟಿ ರೂ.ಗೆ ತಲುಪಿತು. 1937–38 ರಿಂದ 1939–40 ರ ವರ್ಷಗಳಲ್ಲಿ ಸರಾಸರಿ ವೆಚ್ಚ 88 ಕೋಟಿ ರೂ. ಇತ್ತು. ಸರಕಾರದ ಬಜೆಟ್ ಕೊರತೆ 0 ದಿಂದ 112 ಕೋಟಿ ರೂ.ಗೆ ಏರಿತ್ತು. 1941–42 ಮತ್ತು 1942–43 ಬಜೆಟ್ ಕೊರತೆ "ವಸೂಲಿಮಾಡಬಹುದಾದ ಯುದ್ಧ ವೆಚ್ಚ"ದ ಅಡಿಯಲ್ಲಿ ವಾರ್ಷಿಕ 260 ಕೋಟಿ ರೂ. ವೆಚ್ಚದಿಂದ ಮತ್ತಷ್ಟು ಪರಿಣಾಮ ಉಂಟಾಯಿತು. ಒಟ್ಟಾರೆ ಕೊರತೆ 1942–43 ರ ವೇಳೆಗೆ 438 ಕೋಟಿ ರೂ. ಆಗಿದ್ದು ಇದರಲ್ಲಿ ಮುಕ್ಕಾಲು ಪಾಲು ಮಿತ್ರರಾಷ್ಟ್ರಗಳ "ವಸೂಲಿಮಾಡಬಹುದಾದ ಯುದ್ಧ ವೆಚ್ಚ" ಆಗಿತ್ತು.

ಈ ಸ್ಫೋಟಕ ಪ್ರಮಾಣದ ಕೊರತೆಯನ್ನು ಸಂಪೂರ್ಣವಾಗಿ ನೋಟ್ ಪ್ರಿಂಟಿಂಗ್ ಮುಖಾಂತರವೇ ನಿರ್ವಹಿಸಲಾಯಿತು. ಲಂಡನ್‌ನಲ್ಲಿ ಭಾರತದ ರಿಸರ್ವ್ ಬ್ಯಾಂಕಿನ ಲೆಕ್ಕಪುಸ್ತಕದಲ್ಲಿ ಸೇರಿಸಿದ ಸ್ಟರ್ಲಿಂಗ್ ಮೌಲ್ಯದ ಮೀಸಲು ಹಣದ ಆಧಾರದಲ್ಲಿ ಭಾರತದಲ್ಲಿ ಎರಡೂ ಪಟ್ಟು ಕರೆನ್ಸಿ ಮುದ್ರಿಸಬಹುದೆಂದು ಹೇಳಿ ಇದನ್ನು ಸಮರ್ಥಿಸಿಕೊಳ್ಳಲಾಯಿತು. ಆದರೆ ಇದೊಂದು ಅಪ್ರಾಮಾಣಿಕ ತರ್ಕ ಎಂಬುದು ಸ್ಪಷ್ಟವಾಗಿತ್ತು. ಮೀಸಲು ಎಂಬುದು ಅಗತ್ಯ ಬಿದ್ದಾಗ ಬಳಸಬಹುದಾದದ್ದು ಎಂದು ಅರ್ಥ. ಆದರೆ ಆ 'ಸ್ಟರ್ಲಿಂಗ್' ಮೀಸಲು ಎಂಬುದು ಕೇವಲ ಕಾಗದದ ಮಿಥ್ಯೆ. ಅದರಿಂದ ಚಿಕ್ಕಾಸೂ ಹೊರತೆಗೆಯುವಂತಿರಲಿಲ್ಲ.

ಅಷ್ಟೇ ಅಲ್ಲ, ಯುದ್ಧ ಮುಗಿದ ನಂತರ ಅದನ್ನು ಮಾತು ಕೊಟ್ಟಂತೆ ಪಾವತಿ ಮಾಡಲಾಗುವುದು ಎಂಬ ಭರವಸೆಯೂ ಇರಲಿಲ್ಲ. ವಾಸ್ತವವಾಗಿ ಆ 'ಸ್ಟರ್ಲಿಂಗ್ ಮೀಸಲು' ಎಂಬುದು ಅಸಿತ್ವದಲ್ಲೇ ಇರಲಿಲ್ಲ, ಅದೊಂದು ಭಾರತೀಯ ಜನತೆಯಿಂದ ಬೃಹತ್‌ಪ್ರಮಾಣದ ಸಂಪನ್ಮೂಲಗಳನ್ನು ಸೂರೆ ಮಾಡುವ ಲೆಕ್ಕಪತ್ರದ ಸಾಧನವಾಗಿತ್ತಷ್ಟೇ. ಕೀನ್ಸ್ ಹೆಚ್ಚು ಯುದ್ಧವೆಚ್ಚ ಮಾಡುವುದನ್ನು ವಿರೋಧಿಸಿದ್ದ. ಆದರೆ ಅದು ಯುದ್ದದ ನಂತರ ಬ್ರಿಟನ್ನಿನ ಸಾಲದ ಹೊರೆ ಹೆಚ್ಚಬಾರದೆಂಬ ಕಾರಣಕ್ಕೆ ಮಾತ್ರ, ಭಾರತೀಯ ಜನತೆಯ ಮೇಲೆ ಅದು ಎಂತಹ ದುಷ್ಪರಿಣಾಮ ಬೀರಬಹುದು ಎಂಬ ಬಗ್ಗೆ ಆತ ಯಾವ ಆತಂಕವನ್ನೂ ತೋರಲಿಲ್ಲ. ಏಕೆಂದರೆ ಭಾರತೀಯ ಜನಗಳ ಬಳಕೆಯ ಪ್ರಮಾಣವನ್ನು ತಗ್ಗಿಸುವುದೇ ಅದರ ಉದ್ದೇಶವಾಗಿತ್ತು ತಾನೇ.

ಇಂದು ನಾವು 2021 ರ ವೇಳೆಯಲ್ಲಿ ಸರ್ಕಾರದ ವೆಚ್ಚ 7.5 ಪಟ್ಟು ಹೆಚ್ಚಾದರೆ ಮತ್ತು ಅದನ್ನು ಮುಕ್ಕಾಲು ಭಾಗವನ್ನು ನೋಟುಗಳನ್ನು ಮುದ್ರಿಸಿ ಭರಿಸಿದರೆ ಉಂಟಾಗುವ ಪರಿಣಾಮ ವನ್ನು ಊಹಿಸಲು ಸಾಧ್ಯವೆ?

ಅವಶ್ಯವಸ್ತುಗಳ ಬೆಲೆಗಳು ಏರಲಾರಂಭಿಸಿ 18 ತಿಂಗಳ ಅವಧಿಯಲ್ಲಿ 1943ರ ಮಧ್ಯದ ವೇಳೆಗೆ 4 ಪಟ್ಟು ಹೆಚ್ಚಾದವು, ಸಗಟು ಬೆಲೆ (1943 ರ ವೇಳೆಗೆ)) 3 ಪಟ್ಟು ಹೆಚ್ಚಾಯಿತು. ಈ ಹಣದುಬ್ಬರ ಬಂಗಾಳದಲ್ಲಿ ಅತ್ಯಂತ ತೀವ್ರವಾಗಿತ್ತು. ಏಕಂದರೆ ಯುದ್ಧಕ್ಕೆದು ಹೆಚ್ಚಿಸಿದ ವೆಚ್ಚದ ಬಹುಪಾಲು ನಡೆದದ್ದು ಅಲ್ಲೇ ಮತ್ತು ಆಹಾರ ಸಾಮಗ್ರಿಗಳನ್ನು ಗ್ರಾಮಾಂತರ ಪ್ರದೇಶಗಳಿಂದ ಪಡೆಯಲಾಯಿತು. ಬೆಲೆಗಳು 2 ಪಟ್ಟು, 4 ಪಟ್ಟು 6 ಪಟ್ಟು ಹೆಚ್ಚಾದಾಗ ಅಲ್ಲಿಯ ಕಾರ್ಮಿಕರು, ಕುಶಲಕರ್ಮಿಗಳು, ಬಡರೈತ, ಮೀನುಗಾರರಿಗೆ ತಮಗೆ ಯಾವ ರೀತಿಯಿಂದ ಹೀಗಾಗಿದೆ ಎಂಬುದು ತಿಳಿಯಲಿಲ್ಲ. ಆಹಾರದ ದಾಸ್ತಾನು ಮಾಯವಾಯಿತು, ಏಕೆಂದರೆ ಸರಕಾರ ನಗರ ಪ್ರದೇಶಗಳಲ್ಲಿ ಪಡಿತರದ ಮೂಲಕ ಹಂಚಲು ಕಂಟ್ರಾಕ್ಟರ್‌ಗಳಿಂದ ಲಭ್ಯ ದಾಸ್ತಾನೆಲ್ಲವನ್ನೂಖರೀದಿಸಿತು.



ವ್ಯಾಪಾರಿಗಳು ಹೆಚ್ಚಿನ ಬೆಲೆ ಸಿಗಬಹುದೆಂದು ದಾಸ್ತಾನು ಮಾಡಿ ಕೊಂಡರು. **ಅದಾಗಲೇ ಹೇಗೋ ಬದುಕಿದ್ದ ಸಾವಿರಾರು ಗ್ರಾಮೀಣ ಕುಟುಂಬಗಳು ಮೊದಲಿಗೆ ಆಹಾರದ ಕೊರತೆ, ನಂತರ ಕ್ಷಾಮಕ್ಕೆ ,ಹಸಿವೆಗೆ, ಕೊನೆಗೆ ಸಾವಿಗೆ ತುತ್ತಾದರು. ಆಹಾರ ಹುಡುಕಿಕೊಂಡು ನಗರ ಪ್ರದೇಶಗಳಿಗೆ ಹೊರಟವರು ಮೊದಲೇ ಅಶಕ್ತರಾಗಿದ್ದರಿಂದ ಕಾಯಿಲೆಗಳಿಗೆ ತುತ್ತಾಗಿ ಪ್ರಾಣಕಳೆದುಕೊಂಡರು. ಅಮಾರ್ತ್ಯ ಸೇನ್‌ರವರು ಸಿಕ್ಕ ಸಾಕ್ಷಿಗಳ ಆಧಾರದಲ್ಲಿ 1943–44 ರ ಈ ಅವಧಿಯಲ್ಲಿ ಸಾವುಗಳ ಸಂಖ್ಯೆ 27 ರಿಂದ 31 ಲಕ್ಷ ಎಂದು ಹೇಳಿದ್ದಾರೆ. ಕ್ಷಾಮದ ನಂತರದ ದುಷ್ಪರಿಣಾಮಗಳನ್ನು ಗಮನಕ್ಕೆ ತಗೊಂಡು ರಜನಿ ಪಾಮೆ ದತ್ ಮತ್ತಿತರ ಲೇಖಕರು 35 ಲಕ್ಷ ಎಂದು ಲೆಕ್ಕ ಹಾಕಿದ್ದಾರೆ.**

1944ರಲ್ಲಿ ಬ್ರೆಟ್ಟನ್‌ವುಡ್ಸ್‌ನಲ್ಲಿ ಬ್ರಿಟನ್ ಭಾರತಕ್ಕೆ ತೆರಬೇಕಾಗಿದ್ದ ಸ್ಟರ್ಲಿಂಗ್ ಸಾಲದ ಬಹುಪಾಲನ್ನು ಮನ್ನಾ ಮಾಡಬೇಕು ಎಂದು ವಾದ ಹೂಡಿತು. ಆಗ ಇದರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನವನ್ನು ಒಳಗೊಂಡರೆ, ಅದರಿಂದ ಬಹಳ ತುರ್ತಾಗಿ ಬೇಕಾಗಿದ್ದ ಆಹಾರ ಸಾಮಗ್ರಿಗಳ ಆಮದಿಗೆ ಡಾಲರುಗಳು ಕೂಡಲೇ ಸಿಗಬಹುದು ಎಂಬ ಭಾರತದ ಕೋರಿಕೆಯನ್ನು ಕೀನ್ಸ್ ಮಧ್ಯೆ ತಲೆ ಹಾಕಿ ತಳ್ಳಿ ಹಾಕಿಸಿದರು. ಈ ಕುರಿತ ಸ್ಟರ್ಲಿಂಗ್ ಮೀಸಲಿನ ಒಪ್ಪಂದ ಭಾರತ ಮತ್ತು ಬ್ರಿಟನ್ ನಡುವಿನ ದ್ವಿಪಕ್ಷೀಯ ಒಪ್ಪಂದ ಎಂದು ಆತ ವಾದ ಹೂಡಿದ. ಆದರೆ ವಾಸ್ತವವಾಗಿ ಇದರ ಅಡಿಯಲ್ಲಿ ಅಮೆರಿಕಾವೂ ಸೇರಿದಂತೆ ಎಲ್ಲ ಮಿತ್ರಪಕ್ಷಗಳ ಪಡೆಗಳಿಗಾಗಿ ವೆಚ್ಚಮಾಡಲಾಗಿತ್ತು.

ಈ ಮಹಾಕ್ಷಾಮದ ಅವಧಿಯಲ್ಲಿ ಬಂಗಾಳದ ಕಮ್ಯೂನಿಸ್ಟ್ ಪಾರ್ಟಿ ದಣಿವರಿಯದೇ ಜನರ ಸಂಕಷ್ಟಗಳನ್ನು ಪರಿಹರಿಸಲು ದುಡಿಯಿತು, ಕ್ಷಾಮ ಪರಿಹಾರದ ಕೆಲಸಗಳಲ್ಲಿ ಭಾಗವಹಿಸಲು ಮಹಿಳಾ ಆತ್ಮರಕ್ಷಾ ಸಮಿತಿಗಳನ್ನು ರಚಿಸಲಾಯಿತು.

ಹತ್ಯಾಕಾಂಡ ವೆಂದೇ ಹೇಳಬಹುದಾದ ಈ ಕ್ಷಾಮದ ಅವಧಿಯ ದಾಖಲೆಗಳು, ಫೋಟೋಗಳು, ಸಾಹಿತ್ಯ ಸಾಕಷ್ಟು ಪ್ರಮಾಣದಲ್ಲಿ ಲಭ್ಯವಿದೆ. ಆದರೆ ನಿಜವಾದ ಆರ್ಥಿಕ ಕಾರಣಗಳ ವಿಶ್ಲೇಷಣೆಗಳು ಅತ್ಯಂತ ಅಸಮರ್ಪಕ ಎಂದೇ ಹೇಳಬೇಕಾಗುತ್ತದೆ.

ಈ ಕ್ಷಾಮವು ಒಂದು ಆರ್ಥಿಕ ನರಮೇಧ ಅಲ್ಲದೆ ಮತ್ತೇನೂ ಅಲ್ಲ. **ಭಾರತೀಯರಿಂದ ಬಲವಂತವಾಗಿ, 30 ಲಕ್ಷ ಜೀವಗಳನ್ನು ಬಲಿಗೊಟ್ಟು ವಸೂಲಿ ಮಾಡಿದ 1.3 ಬಿಲಿಯನ್ ಪೌಂಡ್ "ವಸೂಲಿಮಾಡಬಹುದಾದ ಯುದ್ಧ ವೆಚ್ಚ"ವನ್ನು ಅಮೇರಿಕಾ ಮತ್ತು ಬ್ರಿಟನಿನಲ್ಲಿ ತಲಾ ಕೇವಲ 1 ಪೌಂಡ್ ಹೆಚ್ಚುವರಿ ತೆರಿಗೆಯನ್ನು ವಿಧಿಸಿ ಸಂಗ್ರಹಿಸಬಹುದಿತ್ತು. ಭಾರತದ ತಲಾ ಆದಾಯದ 30 ರಿಂದ 40 ಪಟ್ಟು ಹೆಚ್ಚು ಆದಾಯವಿದ್ದ ಅಲ್ಲಿನ ಜನಗಳಿಗೆ ಇದರಿಂದ ಏನೂ ಕಷ್ಟವಾಗುತ್ತಿರಲಿಲ್ಲ.** 1943–44ರಲ್ಲಿ ವಸಾಹತುಶಾಹೀ ದಮನದ ಈ ಅಂತಿಮ ಮತ್ತು ಅತ್ಯುಗ್ರ ಕೃತ್ಯದಲ್ಲಿ 30 ಲಕ್ಷ ಜೀವಗಳನ್ನು ಅನಗತ್ಯವಾಗಿ ನಂದಿಸಿ ಬಿಟ್ಟದ್ದಕ್ಕೆ ಭಾರತ ಆ 'ಮಿತ್ರರಾಷ್ಟ್ರಗಳ ಕೂಟ'ದಿಂದ ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ನಷ್ಟಭರ್ತಿ ಮಾಡಿಕೊಡುವಂತೆ ಆಗ್ರಹಿಸಬೇಕಿದೆ. ○

ನಾಚಿಕೆಯಿಲ್ಲದ ವಿಶ್ವಾಸಘಾತ, ರೈತರ ನಿಜವಾದ ಬೇಡಿಕೆಗಳ ಬಗ್ಗೆ ಕ್ರಿಮಿನಲ್ ನಿರ್ಲಕ್ಷ್ಯ–ಎಐಕೆಎಸ್

"ರೈತರನ್ನು ಅವಮಾನಿಸುವುದನ್ನು ನಿಲ್ಲಿಸಿ–ರೈತರ ಆಕ್ರೋಶ ಮೋದಿ ಸರಕಾರವನ್ನು ಕಿತ್ತೆಸೆಯುತ್ತದೆ"


2019–20ರ ಕೇಂದ್ರ ಬಜೆಟಿನಲ್ಲಿ ಎನ್‌ಡಿಎ ಸರಕಾರ 2 ಹೆಕ್ಟೇರುಗಳು ಅಥವ 5 ಎಕ್ರೆಯ ವರೆಗೆ ಜಮೀನು ಹೊಂದಿರುವ ರೈತರಿಗೆ ವರ್ಷಕ್ಕೆ 6000 ರೂ. 'ಬೆಂಬಲ' ಕೊಡುವುದಾಗಿ ಹೇಳಿರುವುದು ಮಕ್ಕಳಿಗೆ ಚೀಪಲು ಕೊಟ್ಟಿರುವ ಲಾಲಿಪಾಪ್ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಟೀಕಿಸಿದೆ. ಒಂದು ರೈತ ಕುಟುಂಬಕ್ಕೆ ತಿಂಗಳಿಗೆ 500ರೂ. ಅಥವ ದಿನಕ್ಕೆ 15 ರೂ. ರೈತ ಸಮುದಾಯ ಎದುರಿಸುತ್ತಿರುವ ತೀವ್ರ ಬಿಕ್ಕಟ್ಟನ್ನು ಪರಿಹರಿಸಲಾರದು, ಇದು ಬಿಜೆಪಿ ನೇತೃತ್ವದ ಸರಕಾರದ ಇನ್ನೊಂದು ಬೊಗಳೆಯಷ್ಟೇ ಎಂದು ಅದು ವರ್ಣಿಸಿದೆ.

ಎಂ ಎಸ್ ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿರುವ ಸಿ2+50% ವನ್ನು ಎಲ್ಲ ಬೆಳೆಗಳಿಗೆ ಕೊಡುವ ಆಶ್ವಾಸನೆಯನ್ನು ಜಾರಿಗೊಳಿಸಬೇಕು ಮತ್ತು ರೈತರ ಉತ್ಪನ್ನಗಳನ್ನು ಖರೀದಿಸಲು ಸಾಕಷ್ಟು ವ್ಯವಸ್ಥೆ ಮಾಡಬೇಕು ಎನ್ನುವುದೇ ರೈತಾಪಿ ಜನಗಳ ನ್ಯೆಜ ಬೇಡಿಕೆ. ಈ ಮೂಲಕ ರೈತರಿಗೆ ಫಲದಾಯಕ ಬೆಲೆ ದೊರೆತು ಬೇಸಾಯ ಲಾಭದಾಯಕವಾಗುತ್ತದೆ. ರೈತರಿಗೆ ಸಲ್ಲಬೇಕಾದ್ದು ಸಿಕ್ಕರೆ ಅವರು ತಮ್ಮ ಸಾಲವನ್ನು ಬಡ್ಡಿ ಸಮೇತ ತೀರಿಸಲು, ಘನತೆಯಿಂದ ಬದುಕಲು ಸಾಧ್ಯವಾಗುತ್ತದೆ. ಇದರ ಬದಲು ಮೋದಿ ಸರಕಾರ ಜನಮರುಳು ತುಷ್ಟೀಕರಣದ ಕ್ರಮಗಳಿಗೆ ಇಳಿದಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಎಐಕೆಎಸ್ ಹೇಳಿದೆ.

ರೈತರ ಇನ್ನೊಂದು ಮಹತ್ವದ ಬೇಡಿಕೆಯಾದ ರೈತಾಪಿ ಜನಗಳ ಸಾಲ ಹೊರೆಯನ್ನು ಮನ್ನಾ ಮಾಡಬೇಕು ಎಂಬುದು. ಇದನ್ನೂ ಕೇಂದ್ರ ಬಜೆಟಿನಲ್ಲಿ ಉಪೇಕ್ಷಿಸಲಾಗಿದೆ. ಇದು ನಾಚಿಕೆಗೆಟ್ಟ ವಿಶ್ವಾಸಘಾತ ಎಂದು ಬಗೆದಿರುವ ಎಐಕೆಎಸ್, 2014ರಲ್ಲಿ ರೈತಾಪಿಗಳಿಗೆ ಸಾಲಬಾಧೆಯಿಂದ ಸ್ವಾತಂತ್ರ್ಯ ಕೊಡಿಸುವುದಾಗಿ ಆಶ್ವಾಸನೆಯಿತ್ತ ಬಿಜೆಪಿ ಕಳೆದ ಐದು ವರ್ಷಗಳಲ್ಲಿ ಈ ಹತ್ವದ ಬೇಡಿಕೆಯ ಬಗ್ಗೆ ಕ್ರಿಮಿನಲ್ ನಿರ್ಲಕ್ಷ್ಯ ತೋರಿದೆ ಎಂದು ಟೀಕಿಸಿದೆ.

6000ರೂ.ಗಳ ಆಶ್ವಾಸನೆಯು ಕುರಿತು ಹೇಳುವುದಾದರೆ, ಅದು ವಿಭಿನ್ನ ಬೆಳೆಗಳ ಉತ್ಪಾದನೆಯ ಖರ್ಚಿನಲ್ಲಿ 3%ದಿಂದ 5%ದಷ್ಟು ಮಾತ್ರ ಆಗುತ್ತದೆ. ಅಲ್ಲದೆ ಇದಕ್ಕೆ ಅರ್ಹರಾಗುವ ರೈತರ ಭೂದಾಖಲೆಗಳು ಆಧಾರ್ ನೊಂದಿಗೆ ಮತ್ತು ಬ್ಯಾಂಕ್ ಖಾತೆಯೊಂದಿಗೆ ಜೋಡಿಸಲ್ಪಟ್ಟಿರುವುದಿಲ್ಲ. ಆದ್ದರಿಂದ ಇದಕ್ಕೆ ಅರ್ಹರಾಗುವವರನ್ನು ಗುರುತಿಸಲು ಸರಕಾರೀ ಯಂತ್ರಕ್ಕೆ ತಕ್ಷಣವೇ ಸಾಧ್ಯವಿಲ್ಲ, ಮಾರ್ಚ್ 31, 2019ರ ಒಳಗೆ ಇದನ್ನು ಜಾರಿಗೊಳಿಸಲೂ ಸಾಧ್ಯವಿಲ್ಲ. ಇನ್ನು ಕೃಷಿ ಕೂಲಿಕಾರರು, ಗೇಣಿ ರೈತರು ಮತ್ತು ಭೂಹೀನ ಕುಟುಂಬಗಳು ಇದರ ವ್ಯಾಪ್ತಿಗೆ ಬರುವುದಿಲ್ಲ. ಒಣ ಮತ್ತು ಮರಳುಗಾಡು ಪ್ರದೇಶಗಳಲ್ಲಿ ಎರಡು ಹೆಕ್ಟೇರುಗಳ ಮಿತಿ ಬಹಳಷ್ಟು ಕಷ್ಟಕ್ಕೀಡಾಗುವ ರೈತರನ್ನು ಹೊರಗಿಡುತ್ತದೆ ಎಂಬ ಸಂಗತಿಯತ್ತ ಎಐಕೆಎಸ್ ಗಮನ ಸೆಳೆದಿದೆ.

ಕೇರಳದಲ್ಲಿ ರಾಜ್ಯ ಸರಕಾರ ಭತ್ತವನ್ನು ಕೇಂದ್ರದಿಂದ ನಿಗದಿ ಮಾಡಿದ ಕನಿಷ್ಟ ಬೆಂಬಲ ಬೆಲೆಯಾದ ಕ್ವಿಂಟಲ್‌ಗೆ 1700ರೂ.ಗಿಂತ 800ರೂ.ಹೆಚ್ಚು ಕೊಟ್ಟು ಖರೀದಿಸುತ್ತದೆ. ಗ್ರಾಮ ಪಂಚಾಯತು ರೈತರಿಗೆ ಸಬ್ಸಿಡಿಗಳ ಮೇಲೆ ಹೆಕ್ಟೇರಿಗೆ 17,000 ರೂ.ಗಳಂತೆ ಉತ್ತೇಜನೆಯಾಗಿ ಕೊಡುತ್ತದೆ. ಇಂತಹ ರೈತಪರ ಕ್ರಮಗಳೊಂದಿಗೆ ಹೋಲಿಸಿದಾಗ ರೈತರಿಗೆ ಅಲ್ಪ ಮೊತ್ತವನ್ನು ಕೊಡುವ ಮೋದಿ ಸರಕಾರದ ಈ ಪ್ರಸ್ತಾವ ಕಳೆದ ಐದು ವರ್ಷಗಳ ಕಾಲ ಅವರ ಆದಾಯವನ್ನು ದರೋಡೆ ಮಾಡಿ, ಈಗ ಅವರ ಮತ ಪಡೆಯಲು ಕೊಡುವ ಒಂದು ಸಣ್ಣ ಲಂಚದಂತೆ ಕಾಣುತ್ತದೆ ಎಂದು ಎಐಕೆಎಸ್ ವರ್ಣಿಸಿದೆ.



ವ್ಯಂಗ್ಯಚಿತ್ರ: ಅರಿಂದಮ್ ಮುಖರ್ಜಿ, ದಿ ಪ್ರಿಂಟ್

ಈ ಹಣ ವರ್ಗಾವಣೆಗೆ ಕೊಟ್ಟಿರುವ ಮೊತ್ತವನ್ನು ಬದಿಗಿಟ್ಟರೆ, ಕೃಷಿಗೆ, ಗ್ರಾಮೀಣ ಅಭಿವೃದ್ಧಿಗೆ, ಆರೋಗ್ಯಕ್ಕೆ ಕೊಟ್ಟಿರುವ ಹಣವು ಹಣದುಬ್ಬರವನ್ನು ಗಣನೆಗೆ ತಗೊಂಡರೆ ವಾಸ್ತವವಾಗಿ ಕಡಿತಗೊಂಡಿದೆ. ಇದು ಕೃಷಿ ವಲಯದ ಮೇಲೆ ದೀರ್ಘಕಾಲೀನ ನಕಾರಾತ್ಮಕ ಪ್ರಭಾವ ಬೀರುತ್ತದೆ, ಬಿಕ್ಕಟ್ಟು ಮುಂಬರುವ ವರ್ಷಗಳಲ್ಲಿ ಇನ್ನಷ್ಟು ಗಂಭೀರವಾಗುತ್ತದೆ ಎಂದು ಎಐಕೆಎಸ್ ಎಚ್ಚರಿಸಿದೆ.

ಮನರೇಗಕ್ಕೆ ಕೊಟ್ಟಿರುವ ಹಣ ಒಟ್ಟು ಬಜೆಟಿನ ಪ್ರಮಾಣದಲ್ಲಿ ಕೇವಲ 2.15%. ಇದು ಕಳೆದ ವರ್ಷದ 2.75%ಕ್ಕಿಂತಲೂ ಕಡಿಮೆ. ಎನ್‌ಎಸ್‌ಎಸ್‌ಒದ ಉದ್ಯೋಗ ಸರ್ವೆಯ ಮಾಹಿತಿಯನ್ನು ಮುಚ್ಚಿಟ್ಟ ಸರಕಾರ ಯುವಜನರನ್ನು ಉದ್ಯೋಗಾಕಾಂಕ್ಷಿಗಳಿಂದ ಉದ್ಯೋಗದಾತರನ್ನಾಗಿ ಮಾಡಿದೆ ಎಂದು ಹೇಳುವುದು ಶುದ್ಧ ಅಪ್ರಾಮಾಣಿಕತೆ ಎಂದಿರುವ ಅಖಿಲ ಭಾರತ ಕಿಸಾನ್ ಸಭಾ ಮೋದಿ ಸರಕಾರದ ಆಶ್ವಾಸನೆಗಳ ಮೋಸವನ್ನು ದೇಶಾದ್ಯಂತ ಬಯಲಿಗೆಳೆಯಬೇಕು, ಮುಂಬರುವ ಚುನಾವಣೆಗಳಲ್ಲಿ ಅದು ಮತ್ತೆ ಅಧಿಕಾರಕ್ಕೆ ಬರದಂತೆ ಮಾಡಬೇಕು ಎಂದು ರೈತಾಪಿ ಜನಗಳಿಗೆ ಕರೆ ನೀಡಿದೆ.

ಚುನಾವಣೆ ಮುಂಚಿನ ವಂಚನೆಯ ಕಸರತ್ತು–ಸಿಐಟಿಯು

"40 ಕೋಟಿ ಕಾರ್ಮಿಕರ ಪೆನ್ಶನ್‌ಗೆ 500 ಕೋಟಿ– ಗೋರಕ್ಷಣೆಗೆ 750 ಕೋಟಿ"

ಮುಂಬರುವ ಲೋಕಸಭಾ ಚುನಾವಣೆಗಳಲ್ಲಿ ಸೋಲು ದಿಟ್ಟಿಸುತ್ತಿರುವಾಗ ಈ ಸರಕಾರ ಮಂಡಿಸಿರುವ ಅದರ ಅವಧಿಯ ಕೊನೆಯ ಬಜೆಟ್ ಜನಗಳನನು ವಂಚಿಸಿ ಅವರ ಮತ ಪಡೆಯಲು ಹತಾಶ ಪ್ರಯತ್ನ ನಡೆಸಿದೆ ಎಂದು ಸಿಐಟಿಯು ಟೀಕಿಸಿದೆ.

ಈ ಮಧ್ಯಂತರ ಬಜೆಟ್ ವಿವಿಧ ವಿಭಾಗಗಳಿಗೆ 'ಆಮಿಷ'ಗಳನ್ನು ಕೊಡುತ್ತಿದೆ ಎಂಬ ಭಾವನೆ ಉಂಟು ಮಾಡಲು ಪ್ರಯತ್ನಿಸುತ್ತಿದೆ. ಆದರೆ ಈ ಜನವಿಭಾಗಳಿಗೆ ಸಂಕಟಗಳನ್ನು ತಂದ ಕಾರ್ಪೊರೇಟ್–ಪರ ಧೋರಣೆಗಳಿಂದ ಸ್ವಲ್ಪವೂ ಕದಲಿಲ್ಲ. ಸಾರ್ವಜನಿಕ ಹೂಡಿಕೆಯ ಮೂಲಕ ಆರ್ಥಿಕತೆಯನ್ನು ಉತ್ತಮಪಡಿಸಲು, ಉದ್ಯೋಗ ಸೃಷ್ಟಿಸಲು ಹಾಗೂ ಜನರ ಕೊಂಡು ಕೊಳ್ಳುವ ಶಕ್ತಿಯನ್ನು ಉತ್ತಮಪಡಿಸಲು ಯಾವುದೇ ಕ್ರಮ ಕೈಗೊಂಡಿಲ್ಲ.

"ಉದ್ಯೋಗಾಕಾಂಕ್ಷಿಗಳು ಉದ್ಯೋಗ ದಾತರಾಗಬೇಕು" ಎಂದು ಮತ್ತೆ–ಮತ್ತೆ ಬೇಸರ ತರಿಸುವಷು ಹೇಳಿರುವ ಆಡಂಬರದ ಮಾತು ಬಿಟ್ಟರೆ ಬೇರೇನನ್ನೂ ಹಂಗಾಮಿ ಹಣಕಾಸು ಮಂತ್ರಿಗಳು ಹೇಳಿಲ್ಲ. ಉದ್ಯೋಗ ನಿರ್ಮಾಣ ಸರಕಾರೀ ಸೇವೆಗಳು ಮತ್ತು ಕಾರ್ಖಾನೆಗಳಿಗೇ ಸೀಮಿತವಾಗಬೇಕಿಲ್ಲ ಎನ್ನುತ್ತ ಅವರು ಬಹುಶಃ ತಮ್ಮ ಸಹೋದ್ಯೋಗಿಗಳು ಪಕೋಡಾ ಮಾರಿ, ಪಾನ್ ಬೀಡಾ ಅಂಗಡಿಗಳನ್ನು ಇಡಿ, ಹಸು ಸಾಕಣೆ ಮಾಡಿ ಎಂಬ ತಮ್ಮ ಸಹೋದ್ಯೋಗಿಗಳ ಸಲಹೆಯನ್ನೇ ಪುನರುಚ್ಚರಿಸುತ್ತಿರಬೇಕು ಎಂದು ಸಿಐಟಿಯು ವ್ಯಂಗ್ಯವಾಡಿದೆ.

ಕಾರ್ಮಿಕರ ವೇತನ ಹಾಗೂ ರೈತಾಪಿ ಜನರ ಆದಾಯ ಹೆಚ್ಚಿಸುವ ಯಾವುದೇ ಪ್ರಯತ್ನವಿಲ್ಲ. ಕಾರ್ಮಿಕರ ಬೇಡಿಕೆಯಾದ 18 ಸಾವಿರ ರುಪಾಯಿ ಕನಿಷ್ಟ ವೇತನ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ.

ಅಸಂಘಟಿತ ಕಾರ್ಮಿಕರಿಗೆ ಯಾವೊಂದು ಯೋಜನೆಯನ್ನು ರೂಪಿಸದೆ ಮಾಸಿಕ ರೂ 3000 ಪಿಂಚಣಿ ನೀಡಲಾಗುವುದು ಎನ್ನುವ ಮತ್ತೊಂದು ಕಸರತ್ತನ್ನು ಮಾಡಲಾಗಿದೆ. ಆದರೆ 40 ಕೋಟಿ ಅಸಂಘಟಿತ ಕಾರ್ಮಿಕರಿಗೆ ಪಿಂಚಣಿಗಾಗಿ ಮೀಸಲಾಗಿರಿಸಿರುವ ಅನುದಾನ ಕೇವಲ ರೂ 500 ಕೋಟಿ ಮಾತ್ರ. ಈ ಪಿಂಚಣಿ ಹಣವೂ ನಿರಂತರ ದೇಣಿಗೆ ಆಧಾರಿತವಾಗಿರುವಂತದ್ದು. ಒಬ್ಬ ಅಸಂಘಟಿತ ಕಾರ್ಮಿಕ 60 ವರ್ಷಕ್ಕೆ ಪಿಂಚಣಿ ಪಡೆಯಬೇಕಾದರೆ ಅವರು ನಿರಂತರವಾಗಿ 'ದೇಣಿಗೆ' ಪಾವತಿಸುತ್ತಲೇ ಇರಬೇಕು. ನಿರಂತರ ಹಾಗು ನಿಗದಿತ ಆದಾಯವಿಲ್ಲದ ಅಸಂಘಟಿತ ಕಾರ್ಮಿಕರಿಗೆ ಇದರಿಂದ ಯಾವುದೇ ಪ್ರಯೋಜನವಾಗದು.

ಗೋರಕ್ಷಣೆಗಾಗಿ ರೂ 750 ಕೋಟಿ ಹಣವನ್ನು ಮೀಸಲಿರಿಸುವ ಮೋದಿ ಸರಕಾರ 40 ಕೋಟಿ ಅಸಂಘಟಿತರಿಗೆ ಪಿಂಚಣಿಗಾಗಿ ಕೇವಲ 500 ಕೋಟಿ ಪ್ರಕಟಿಸಿದೆ. ಅಂದರೆ ನರೇಂದ್ರ ಮೋದಿ ಸರಕಾರ ಅಸಂಘಟಿತ ಕುರಿತಾಗಿ ಪ್ರಾಮಾಣಿಕತೆ ಮತ್ತು ಗಂಭೀರವಾಗಿಲ್ಲ ಎನ್ನುವುದನ್ನು ಇದು ತೋರಿಸುತ್ತಿದೆ ಎಂದು ಸಿಐಟಿಯು ಹೇಳಿದೆ.

ಆದಾಯದ ಮಿತಿಯನ್ನು ಹೆಚ್ಚಿಸಬೇಕು ಎಂಬುದು ಬಹುದಿನಗಳ ಆಗ್ರಹ. ಹೀಗಾಗಿ ಇದಕ್ಕಾಗಿ ಸರಕಾರ ಬೆನ್ನು ತಟ್ಟಿಕೊಳ್ಳುವ ಅಗತ್ಯವೇನಿಲ್ಲ. ಕೇಂದ್ರ ಸಂಪುಟದ ಅವರ ಒಬ್ಬ ಸಹೋದ್ಯೋಗಿ ಹೇಳಿರುವಂತೆ, ಈಗ ಸರಕಾರದ ನೇತೃತ್ವ ವಹಿಸಿರುವ ಬಿಜೆಪಿ ಹೇಗೂ ಅಧಿಕಾರಕ್ಕೆ ಬರುವುದಿಲ್ಲ, ಆದ್ದರಿಂದ ಜುಮ್ಲಾಗಳಿಂದ ಕಳಕೊಳ್ಳುವುದು ಏನೂ ಇಲ್ಲ ಎಂದು ಈ ಬಾರಿಯೂ ಭಾವಿಸಿರಬೇಕು ಎನ್ನುತ್ತ ಜನಗಳನ್ನು ಇಂತಹ ಮೋಸದ ಕಸರತ್ತುಗಳಿಂದ ಸದಾ ಕಾಲವೂ ವಂಚಿಸುತ್ತಿರಲು ಸಾಧ್ಯವಿಲ್ಲ ಎಂದು ಸಿಐಟಿಯು ಹೇಳಿದೆ.

ಬೊಗಳೆಗಳ ಕಾಲ 2019ರ ಚುನಾವಣೆಗಳ ಆಚೆ ಹೋಗದಿರಲಿ– ಎಐಎಡಬ್ಲ್ಯುಯು

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯುಯು) ಕೂಡ ಇದು ಜುಮ್ಲಾಗಳ ಬಜೆಟ್ ಎಂದು ಟೀಕಿಸಿದೆ. ಅತಿ ದೀರ್ಘವಾದ ಮಧ್ಯಂತರ ಬಜೆಟಿನ ಭಾಷಣದಲ್ಲಿ ಬಿಜೆಪಿಯು ಈ ಮಾಜೀ ಕೋಶಾಧಿಕಾರಿ ಹೇಳಿದ್ದು ಬಹಳ ಕಡಿಮೆ ಎಂದಿದೆ.

ಮನರೇಗಕ್ಕೆ ಕಳೆದ ಬಾರಿ 61426 ಕೋಟಿ ರೂ. ಖರ್ಚುಮಾಡಲಗಿತ್ತು. ಆದರೂ 4150 ಕೋಟಿ ರೂ. ಕಡಿಮೆ ಬಿತ್ತು. ಆದರೂ ಈಬಾರಿ ನಿಡಿರುವುದು ಕೇವಲ 60,000 ಕೋಟಿ ರೂ. 7.2 ಕೋಟಿ ಜನ ಇದರ ಅಡಿಯಲ್ಲಿ ಕೆಲಸ ಕೇಳುತ್ತಾರೆ, ಇವರಲ್ಲಿ 1.25 ಕೋಟಿ ಜನಕ್ಕೆ ಎಂದೂ ಕೆಲಸವೂ ಸಿಕ್ಕಿಲ್ಲ, ನಿರುದ್ಯೋಗ ಪರಿಹಾರವೂ ಸಿಕ್ಕಿಲ್ಲ. ಇದನ್ನು ಸರಿಯಾಗಿ ಜಾರಿಗೆ ತರಲು 1,60,000 ಕೋಟಿ ರೂ.ಗಳು ಬೇಕು, ಆದರೆ ಮೂರನೇ ಒಂದರಷ್ಟು ಮಾತ್ರ 'ಕೊಡಲಾಗಿದೆ.


ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ರೈತರಿಗೆ ಮಾಡಿರುವ ಅವಮಾನ, ಸಮಸ್ತ ಜನಗಳಿಗೆ ಮಾಡಿರುವ ಮೋಸ. ಅಸಂಘಟಿತ ವಲಯದ ಕಾರ್ಮಿರಕಿಗೆ 3000ರೂ. ಪೆನ್ಶನ್ ಕಾರ್ಮಿಕ ಆಂದೋಲನ ಕೇಳುತ್ತಿರುವುದರ ಆರನೇ ಒಂದು ಮಾತ್ರ.

ಎಸ್‌ಸಿ/ಎಸ್‌ಟಿ ಸ್ಕೀಮುಗಳಿಗೆ 76.800 ಕೋಟಿ ರೂ. ಕೊಟ್ಟು ಹೆಚ್ಚು ಹಣ ನೀಡಲಾಗಿದೆ ಎಂಬುದೂ ಸುಳ್ಳು. ಕಳೆದ ವರ್ಷ 95,754 ಕೋಟಿ ರೂ. ಕೊಡಲಾಗಿತ್ತು. ಅದೂ ಅಸಮರ್ಪಕ ಎಂದು ದಲಿತ್ ಆರ್ಥಿಕ್ ಅಧಿಕಾರ್ ಆಂದೋಲನ್ ಹೇಳಿತ್ತು.

ಬೊಗಳೆಗಳ ಕಾಲ ಇನ್ನೂ ಮುಗಿದಿಲ್ಲ ಎಂಬುದು ಸ್ಪಷ್ಟ. ಅದು 2019ರ ಚುನಾವಣೆಗಳ ಆಚೆ ಹೋಗದಂತೆ ಈ ಬಜೆಟ್ ಜನಸಮೂಹಗಳನ್ನು ಎಬ್ಬಿಸುತ್ತದೆ ಎಂದು ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ ಆಶಿಸಿದೆ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್



ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ



ವ್ಯಂಗ್ಯಚಿತ್ರ:ಸತೀಶ ಆಚಾರ್ಯ

ಒಗಟಾಗಿ ಕಾಣುವ ಜಿಡಿಪಿ ಬೆಳವಣಿಗೆಯ ದರ



ಮೊದಲಿಗಿಂತ ಹೆಚ್ಚಿನ ಜಿಡಿಪಿ ದರ ದಾಖಲಿಸಿರುವ ಅವಧಿಯಲ್ಲಿಯೇ, ಬಡತನ ಮತ್ತು ಹಸಿವಿನಿಂದ ನರಳುವವರ ಸಂಖ್ಯೆಯೂ ಹೆಚ್ಚಿದೆ. ಆಹಾರ ಧಾನ್ಯಗಳ ತಲಾ ಬಳಕೆಯ ಪ್ರಮಾಣವು ಇಳಿದಿದೆ. ಮೇಲ್ನೋಟಕ್ಕೆ ಇದು ಒಂದು ಒಗಟಿನಂತೆ ಕಾಣುತ್ತದೆ. ವಾಸ್ತವವಾಗಿ, ಇದು ಒಗಟೇನಲ್ಲ. ಬಡತನ ನಿರ್ಮೂಲನೆಯ ಉದ್ದೇಶದಿಂದಲೇ ಒಂದು ಉನ್ನತ ಬೆಳವಣಿಗೆಯ ನಿರೀಕ್ಷೆ ಇದ್ದಿದ್ದರೆ ಅದು ಒಗಟಾಗುತ್ತಿತ್ತು. ಬಡತನವು ಸಾಮಾಜಿಕ ಸಂಬಂಧಗಳ ಪರಿಣಾಮವಾಗಿ ಉಂಟಾಗುತ್ತದೆ. ಎಂತಹ ಸಾಮಾಜಿಕ ಸಂಬಂಧಗಳ ಸಂದರ್ಭದಲ್ಲಿ ಜಿಡಿಪಿಯ ಬೆಳವಣಿಗೆ ಅಗುತ್ತಿದೆ ಎಂಬುದನ್ನು ಪರಿಗಣಿಸದೆ, ಬಡತನ ನಿವಾರಣೆಗೆ ಜಿಡಿಪಿ ಬೆಳವಣಿಗೆ ದರವೇ ಸರ್ವೌಷಧ ಎನ್ನುವುದು ಆಲೋಚನೆಯ ದಾರಿದ್ರ್ಯವೇ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಜಿಡಿಪಿ ಬೆಳವಣಿಗೆ ದರದ ಬಗ್ಗೆ ಪ್ರಸ್ತಾಪಿಸಿದ ಕೂಡಲೇ ಅದು ಒಂದು ಒಗಟಾಗಿ ಕಾಣುತ್ತದೆ. ಅಧಿಕೃತ ಅಂಕಿ ಅಂಶಗಳ ಪ್ರಕಾರ, ಪ್ರಪಂಚದಲ್ಲೇ ನಮ್ಮ ದೇಶದ ಜಿಡಿಪಿಯ ಬೆಳವಣಿಗೆ ದರ ಅತಿ ಹೆಚ್ಚಿನದು. ಭಾರತದ ಈ ಸಾಧನೆಯ ಬಗ್ಗೆ "ಬಲಿಷ್ಠ ಆರ್ಥಿಕ ಶಕ್ತಿಯಾಗಿ ಉದಯಿಸುತ್ತಿರುವ ದೇಶ" ಮತ್ತು "ಬೆಳವಣಿಗೆಯ ಜಾಗತಿಕ ಶಕ್ತಿ ಕೇಂದ್ರ" ಎಂಬಿತ್ಯಾದಿ ಗುಣ ವಿಶೇಷಗಳು ಧಾರಾಳವಾಗಿ ಬಳಕೆಯಾತ್ತಿವೆ. ಬೆಳವಣಿಗೆ ದರದ ವಿಷಯದಲ್ಲಿ ಚೀನಾದ ಸಾಧನೆಯನ್ನು ಮೀರಿಸುವ ಪ್ರಕ್ರಿಯೆಯಲ್ಲಿ ಭಾರತ ತೊಡಗಿದೆ ಎಂದು ಹೇಳಲು ಬೂರ್ಜ್ವಾ ವ್ಯಾಖ್ಯಾನಕಾರರು ಹೆಮ್ಮೆಪಡುತ್ತಾರೆ. 2019ರಲ್ಲಿ, ಜಾಗತಿಕವಾಗಿ ಭಾರತವು ಬೆಳವಣಿಗೆಯ ಮುಂಚೂಣಿಯಲ್ಲಿರುತ್ತದೆ ಎಂಬುದು ಐಎಂಎಫ್ ವ್ಯಾಖ್ಯಾನ. ಜಿಡಿಪಿ ಬೆಳವಣಿಗೆ ದರದ ಅಂಕಿ ಅಂಶಗಳ ನಿಖರತೆಯ ಬಗ್ಗೆ ತಕರಾರು ಎತ್ತಬಹುದಾದರೂ, ಮತ್ತು, ಅಂಕಿ ಅಂಶಗಳು ಬಿಂಬಿಸುವ ರೀತಿಯಲ್ಲಿ ಗಣನೀಯ ಪ್ರಮಾಣದ ವಸ್ತುಗಳ ಉತ್ಪಾದನೆ ಆಗಿಲ್ಲವಾದರೂ, ಉದಾರೀಕರಣ ನಂತರದ ಅವಧಿಯಲ್ಲಿ, ಭೌತಿಕ ಉತ್ಪಾದನೆಯಲ್ಲಿ ಅಲ್ಲವಾದರೂ, ಸಾಂಪ್ರದಾಯಿಕ ಜಿಡಿಪಿಯ ದೃಷ್ಟಿಯಲ್ಲಿ ಮೊದಲಿಗಿಂತ ಹೆಚ್ಚಿನ ದರ ದಾಖಲಿಸಿದೆ ಎಂಬುದು ನಿರ್ವಿವಾದ.

ಆದಾಗ್ಯೂ, ಮೊದಲಿಗಿಂತ ಹೆಚ್ಚಿನ ಜಿಡಿಪಿ ದರ ದಾಖಲಿಸಿರುವ ಇದೇ ಅವಧಿಯಲ್ಲಿ, ಬಡತನ ಮತ್ತು ಹಸಿವಿನಿಂದ ನರಳುವವರ ಸಂಖ್ಯೆಯೂ ಹೆಚ್ಚಿದೆ. ಭಾರತದಲ್ಲಿ ಇಂದಿನ ಆಹಾರ ಧಾನ್ಯಗಳ ತಲಾ ಬಳಕೆಯ ಪ್ರಮಾಣವು ಉದಾರೀಕರಣ ಆರಂಭವಾಗುವ ಮುನ್ನ ಇದ್ದದ್ದಕ್ಕಿಂತಲೂ ಕಡಿಮೆ ಇದೆ. ಅದೆಷ್ಟು ಕಡಿಮೆ ಎಂದರೆ, ಬಹಳ ಸಮಯದಿಂದ ಬಡತನ ಮತ್ತು ಅಪೌಷ್ಠಿಕತೆಗಳಿಗೆ ಹೆಸರಾಗಿದ್ದ ಮತ್ತು ವಿಶ್ವ ಸಂಸ್ಥೆಯ "ಅತಿ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳು" ಎಂದು ಕರೆಯುತ್ತಿದ್ದ ಕೆಲವು ಆಫ್ರಿಕಾದ ದೇಶಗಳ ಸರಾಸರಿಗಿಂತಲೂ ಕಡಿಮೆ.

ಗ್ರಾಮೀಣ ಭಾರತದಲ್ಲಿ 2200 ಕ್ಯಲೊರಿಗಿಂತ ಕಡಿಮೆ ಆಹಾರ ಸೇವಿಸುವವರು ಮತ್ತು ನಗರಗಳಲ್ಲಿ 2100 ಕ್ಯಲೊರಿಗಿಂತ ಕಡಿಮೆ ಆಹಾರ ಸೇವಿಸುವವರು ಬಡವರು ಎಂಬ ಅಧಿಕೃತ ವ್ಯಾಖ್ಯಾನದ ಪ್ರಕಾರ ನೋಡಿದಾಗ, ಭಾರತದಲ್ಲಿ ಬಡತನದ ಪ್ರಮಾಣ ಏರುತ್ತಿದೆ. ಗ್ರಾಮೀಣದಲ್ಲಿ ಈ ಕ್ಯಲೊರಿ ಮಾನದಂಡದ ಪ್ರಮಾಣಕ್ಕಿಂತ ಕಡಿಮೆ ಕ್ಯಲೊರಿ ಆಹಾರ ಸೇವಿಸುವರ ಸಂಖ್ಯೆಯು 1993–94ರಲ್ಲಿ ಗ್ರಾಮೀಣ ಜನಸಂಖ್ಯೆಯ ಶೇ.58ರಿಂದ 2011–12ರ ಹೊತ್ತಿಗೆ ಶೇ.68ಕ್ಕೆ ಏರಿತ್ತು (ಈ ಎರಡೂ ವರ್ಷಗಳಲ್ಲಿ ಸ್ಯಾಂಪಲ್ ಸರ್ವೆ ನಡೆಸಲಾಗಿತ್ತು). ಇದೇ ರೀತಿ, ನಗರ ಪ್ರದೇಶಗಳಲ್ಲಿ ಕಡಿಮೆ ಕ್ಯಲೊರಿ ಆಹಾರ ಸೇವಿಸುವವರ ಸಂಖ್ಯೆ, ಅನುಕ್ರಮವಾಗಿ ಶೇ.57 ಮತ್ತು ಶೇ.65 ಇತ್ತು. ಆದ್ದರಿಂದ, ಉದಾರೀಕರಣದ ನಂತರ ಜಿಡಿಪಿ ಬೆಳವಣಿಗೆಯ ದರ ಹೆಚ್ಚಿದ ಜೊತೆಯಲ್ಲೇ ಬಡತನ ಮತ್ತು ಹಸಿವಿನಿಂದ ನರಳುವವರ ಸಂಖ್ಯೆಯೂ ಹೆಚ್ಚಿದೆ. ಆದ್ದರಿಂದ, ಉದಾರೀಕರಣದ ಅವಧಿಯಲ್ಲಿ ಜಿಡಿಪಿ ಬೆಳವಣಿಗೆಯ ದರ ಹೆಚ್ಚುವುದರ ಜೊತೆಯಲ್ಲಿ ಹಸಿವು ಮತ್ತು ಬಡತನಗಳೂ ಹೆಚ್ಚಿವೆ ಎಂಬ ಅಂಶವು ಒಂದು ಒಗಟಾಗಿ ಕಾಣುತ್ತದೆ. ಈ ಒಗಟನ್ನು ಅರ್ಥಮಾಡಿಕೊಳ್ಳುವುದು ಹೇಗೆ ಎಂಬ ಪ್ರಶ್ನೆ ಏಳುವುದು ಸಹಜ.

ಈ ಬಗ್ಗೆ ತಲೆಬುಡವಿಲ್ಲದ ವಿವರಣೆಗಳಿಂದ ಮೊದಲು ಹೊರಬರೋಣ. ಜನರ ವರಮಾನಗಳು ಹೆಚ್ಚಿದಾಗ ಅವರು ಸೇವಿಸುವ ಆಹಾರ ಧಾನ್ಯಗಳ ತಲಾ ಪ್ರಮಾಣ ಇಳಿಯುತ್ತದೆ ಮತ್ತು ಅವರು ಬೇರೆ ಕೆಲವು ವಸ್ತುಗಳನ್ನು ಕೊಳ್ಳುತ್ತಾರೆ. ಅವರ ತಲಾ ಸೇವನೆಯ ಆಹಾರ ಧಾನ್ಯಗಳ ಬಳಕೆ ಇಳಿದಿದ್ದರೂ ಸಹ ಅವರ ಜೀವನ ಮಟ್ಟ ಏರಿದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ ಎಂಬುದು ಮೊದಲನೆಯ ವಿವರಣೆ. ಇದೊಂದು ತಪ್ಪು ತರ್ಕ. ಏಕೆಂದರೆ, ಜನರ ಸ್ಥಿತಿ–ಗತಿ ಉತ್ತಮವಾದಾಗ ಅವರು ನೇರವಾಗಿ ಬಳಸುವ ಆಹಾರ ಧಾನ್ಯಗಳ ಪ್ರಮಾಣ ಇಳಿದರೂ ಸಹ, ಅವರು ನೇರವಾಗಿ ಸೇವಿಸುವ ಧಾನ್ಯಗಳು, ಸಿದ್ಧ–ಆಹಾರ ಹಾಗೂ ಮಾಂಸ ಒದಗಿಸುವ ಪಶುಗಳಿಗೆ ಬಳಸುವ ಧಾನ್ಯಗಳನ್ನು ಸೇರಿಸಿ ಲೆಕ್ಕ ಹಾಕಿದರೆ ಅವರ ಒಟ್ಟು ಆಹಾರ ಧಾನ್ಯಗಳ ಬಳಕೆಯ ಪ್ರಮಾಣ ಹೆಚ್ಚುತ್ತದೆ. ಇಲ್ಲಿ ಉಲೇಖಿಸಿರುವ ಅಂಕಿ–ಸಂಖ್ಯೆಗಳು ಒಟ್ಟು ಬಳಕೆಗೆ ಸಂಬಂಧಿಸಿರುವುದರಿಂದ ಈ ರೀತಿಯ ಹಾರಿಕೆಯ ವಿವರಣೆಗಳು ಈ ಒಗಟಿಗೆ ಉತ್ತರವಾಗುವುದಿಲ್ಲ.

ಎರಡನೆಯ ಅತಿ ಸರಳ ವಿವರಣೆಯ ಪ್ರಕಾರ, ಕುಟುಂಬಗಳ ವರಮಾನ ಹೆಚ್ಚಿದಂತೆಯೇ ಅವರ ಅಭಿರುಚಿಯೂ ಬದಲಾಗಿ ಅವರು ತಮ್ಮ ಆದಾಯದ ಹೆಚ್ಚಿನ ಪಾಲನ್ನು ಆರೋಗ್ಯ, ಶಿಕ್ಷಣ ಮುಂತಾದ ಸೇವೆಗಳನ್ನು ಪಡೆಯಲು ಖರ್ಚುಮಾಡುತ್ತಾರೆ. ಉದಾರೀಕರಣದ ನಂತರದ ಅವಧಿಯಲ್ಲಿ ಇಂತಹ ಅಗತ್ಯ ಸೇವೆಗಳು ಖಾಸಗೀಕರಣಗೊಳ್ಳದಿದ್ದ ಪಕ್ಷದಲ್ಲಿ ಈ ವಾದಕ್ಕೆ ಸ್ವಲ್ಪಮಟ್ಟಿನ ಪುಷ್ಠಿ ದೊರೆಯುತ್ತಿತ್ತು. ಖಾಸಗೀಕರಣದಿಂದಾಗಿ ಈ ಸೇವೆಗಳು ಅತಿ ದುಬಾರಿಯಾಗಿವೆ. ಹಾಗಾಗಿ, ಇಂತಹ ಅಗತ್ಯ ಸೇವೆಗಳನ್ನು ಒಂದು ಕನಿಷ್ಠ ಮಟ್ಟದಲ್ಲಿ ಪಡೆಯಲು ಹಣ ಹೊಂದಿಸಿಕೊಳ್ಳುವ ಸಲುವಾಗಿ ಜನರು ಹೊಟ್ಟೆ ಬಟ್ಟೆ ಕಟ್ಟುವ ಕಾರಣದಿಂದ ಆಹಾರ ಧಾನ್ಯಗಳ ಸೇವನೆಯ ಪ್ರಮಾಣವನ್ನು ಕಡಿತಗೊಳಿಸುತ್ತಾರೆ.

ಸಾರ್ವಜನಿಕ ಆರೋಗ್ಯ ಸೇವೆಗಳ ಲಭ್ಯತೆ ದುರ್ಲಭವಾಗುತ್ತಿರುವ ಸಂದರ್ಭದಲ್ಲಿ, ರೈತ ಕುಟುಂಬದಲ್ಲಿ ಯಾರಿಗಾದರೂ ಕಾಯಿಲೆ ಬಂದಾಗ ಗತ್ಯಂತರವಿಲ್ಲದೆ ಖಾಸಗಿ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆಯ ದುಬಾರಿ ಖರ್ಚುಗಳನ್ನು ಭರಿಸಲು ರೈತ ಕುಟುಂಬಗಳು ತಮ್ಮ ಜಮೀನು ಮಾರುತ್ತಾರೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಹಾಗಾಗಿ, ಕುಟುಂಬಗಳು ತಮ್ಮ ಆದಾಯದ ಹೆಚ್ಚಿನ ಪಾಲನ್ನು ಆರೋಗ್ಯ, ಶಿಕ್ಷಣ ಮುಂತಾದ ಸೇವೆಗಳನ್ನು ಪಡೆಯಲು ಹೆಚ್ಚು ಹಣ ಖರ್ಚು ಮಾಡಲೇಬೇಕಾದ ಸಂಗತಿಗಳು ಜನರ ಅಭಿರುಚಿ ಬದಲಾಗಿರುವುದನ್ನು ಸೂಚಿಸುವ ಬದಲು ಅವರನ್ನು ಬಲವಂತವಾಗಿ ಹಸಿವು ಮತ್ತು ಬಡತನಗಳಿಗೆ ತಳ್ಳಿರುವುದನ್ನು ಸೂಚಿಸುತ್ತಿವೆ. ಈ ವಾಸ್ತವ ಸಂಗತಿಯು ಜಿಡಿಪಿ ದರ ಏರುತ್ತಿರುವ ಸಂದರ್ಭದಲ್ಲಿ ಒಂದು ಒಗಟಾಗಿ ಕಾಣುತ್ತದೆ. ಆದ್ದರಿಂದ, ಈ ಒಗಟಿನ ಪ್ರಶ್ನೆ ಮತ್ತೊಮ್ಮೆ ಏಳುತ್ತದೆ: ಜಿಡಿಪಿ ದರ ವೇಗವಾಗಿ ಬೆಳೆಯುತ್ತಿರುವುದರ ಜೊತೆಯಲ್ಲೇ ಹಸಿವು ಮತ್ತು ಬಡತನಗಳೂ ಹೆಚ್ಚುತ್ತಿರುವುದು ಹೇಗೆ? ಅದೇಕೆ ಇದು ಒಗಟಿನಂತೆ ಕಾಣುತ್ತದೆ?

ವಾಸ್ತವಾಂಶವಾಗಿ, ಇದು ಒಗಟೇನಲ್ಲ. ಬಡತನ ನಿರ್ಮೂಲನೆಯ ಉದ್ದೇಶದಿಂದಲೇ ಒಂದು ಉನ್ನತ ಬೆಳವಣಿಗೆಯ ನಿರೀಕ್ಷೆ ಇದ್ದಿದ್ದರೆ ಅದು ಒಗಟಾಗುತ್ತಿತ್ತು. ಆ ರೀತಿಯಲ್ಲಿ ನಮ್ಮ ಯೋಚನೆ ಸಾಗಿದರೆ, ನಾವು ಯೋಚಿಸುವ ಕ್ರಮದಲ್ಲೇ ಒಂದು ಲೋಪವಿರುತ್ತದೆ. ಕ್ಯಲೊರಿ ಬಳಕೆ ಅಥವಾ ಆಹಾರ ಧಾನ್ಯಗಳ ಬಳಕೆಯ ಮೂಲಕ ಬಡತನವನ್ನು ಅಳೆಯಲಾಗುತ್ತದೆಯಾದರೂ, ಬಡತನವು ಸಾಮಾಜಿಕ ಸಂಬಂಧಗಳ ಪರಿಣಾಮವಾಗಿ ಉಂಟಾಗುತ್ತದೆ. ಜಿಡಿಪಿ ಬೆಳವಣಿಗೆ ದರ ಬಡತನದ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದು, ಎಂತಹ ಸಾಮಾಜಿಕ ಸಂಬಂಧಗಳೊಳಗೆ ಜಿಡಿಪಿಯ ಬೆಳವಣಿಗೆ ಅಗುತ್ತಿದೆ ಎಂಬುದನ್ನು ಅವಲಂಬಿಸುತ್ತದೆ. ನವ ಉದಾರ ಬಂಡವಾಳಶಾಹಿ ಆಳ್ವಿಕೆಯ ಸಾಮಾಜಿಕ ಸಂಬಂಧಗಳು ಹೇಗಿವೆ ಅಂದರೆ, ಜಿಡಿಪಿ ದರ ವೇಗವಾಗಿ ಬೆಳೆಯುತ್ತಿದ್ದರೂ ಸಹ ಹಸಿವು ಮತ್ತು ಬಡತನಗಳನ್ನು ಹೆಚ್ಚಿಸಲು ಕಾರಣವಾಗಿವೆ.

ಈ ಅಂಶವು ಎಳ್ಳಷ್ಟೂ ಆಶ್ಚರ್ಯ ಹುಟ್ಟಿಸಬಾರದು. ಈ ಅಂಶವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಜಿಡಿಪಿ ದರ ವೇಗವಾಗಿ ಬೆಳೆಯುತ್ತಿದ್ದರೂ ಸಹ, ನವ ಉದಾರ ಬಂಡವಾಳಶಾಹಿ ಆಳ್ವಿಕೆಯ ಸಾಮಾಜಿಕ ಸಂಬಂಧಗಳು ಹಸಿವು ಮತ್ತು ಬಡತನಗಳನ್ನು ಹೆಚ್ಚಿಸುತ್ತಿವೆ. ಆದ್ದರಿಂದ, ಉನ್ನತ ಬೆಳವಣಿಗೆಯಿಂದಾಗಿಯೇ ಬಡತನ ನಿರ್ಮೂಲನೆಯಾಗುತ್ತದೆ ಎಂದು ನಟಿಸುವುದು, ಸಾಮಾಜಿಕ ಸಂಬಂಧಗಳ ಕೇಂದ್ರತೆಯಿಂದ ಬೇರೆಡೆಗೆ ಗಮನ ತಿರುಗಿಸಿದಂತಾಗುತ್ತದೆ ಮತ್ತು ವಿಷಯಗಳನ್ನು ಗೋಜಲುಗೊಳಿಸಿದಂತಾಗುತ್ತದೆ. ಹಾಗಾಗಿ, ಇತ್ತೀಚೆಗೆ ಜಿಡಿಪಿ ಬೆಳವಣಿಗೆ ದರದ ಬಗ್ಗೆ ಬೊಬ್ಬೆ ಹೊಡೆಯುತ್ತಿರುವುದರ ಹಿಂದಿನ ಉದ್ದೇಶಗಳು ವಿಷಯಗಳನ್ನು ಗೋಜಲುಗೊಳಿಸಿ ಸಾರ್ವಜನಿಕರ ದಿಕ್ಕು ತಪ್ಪಿಸುವುದೇ ಆಗಿದೆ. ಇದೇ, ನವ ಉದಾರ ಬಂಡವಾಳಶಾಹಿಯ ಇಂದಿನ ಪ್ರವಚನ.

ಜಿಡಿಪಿ ದರ ವೇಗವಾಗಿ ಬೆಳೆಯುತ್ತಿದ್ದರೂ ಸಹ, ನವ ಉದಾರ ಬಂಡವಾಳಶಾಹಿ ಆಳ್ವಿಕೆಯ ಸಾಮಾಜಿಕ ಸಂಬಂಧಗಳು, ಹಸಿವು ಮತ್ತು ಬಡತನಗಳನ್ನು ಏಕೆ ಹೆಚ್ಚಿಸುತ್ತವೆ? ಕಿರು ಉತ್ಪಾದನೆಯನ್ನು ನಾಶಗೊಳಿಸುವುದು ನವ ಉದಾರ ಆಳ್ವಿಕೆಯ ಅವಶ್ಯಕತೆಯಾಗುತ್ತದೆ. ಅದು ಆಕಸ್ಮಿಕವಲ್ಲ. ಅದು ನವ ಉದಾರ ಆಳ್ವಿಕೆಗೆ ಅಂಟಿಕೊಂಡ ಜಾಡ್ಯ. ಇಂತಹ ಆಳ್ವಿಕೆಯು ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಯಜಮಾನಿಕೆಯೊಂದಿಗೆ ಕೂಡಿಕೆ ಮಾಡಿಕೊಂಡಿದೆ. ಹಾಗಾಗಿ, ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಆಳ್ವಿಕೆಯ ಒಂದು ಅವಶ್ಯಕತೆಯಾಗಿ ರಾಷ್ಟ್ರ–ಪ್ರಭುತ್ವಗಳು ಅದಕ್ಕೆ ತಲೆ ಬಾಗಲೇಬೇಕು. ಹಣಕಾಸು ಬಂಡವಾಳದ ಅಣತಿಯ ಮೇರೆಗೆ ರೈತ ಕೃಷಿಯೂ ಸೇರಿದಂತೆ ಕಿರು ಉತ್ಪಾದನೆಗೆ ಸರ್ಕಾರ ಒದಗಿಸುತ್ತಿದ್ದ ಸ್ಥಿರತೆ, ಬೆಂಬಲ, ರಕ್ಷಣೆ ಮತ್ತು ಸವಲತ್ತುಗಳನ್ನು ಕಳಚಿಹಾಕಿ, ದೊಡ್ಡ ಬಂಡವಾಳಿಗರು ಅವರನ್ನು ನುಂಗಿ ಹಾಕುವ ಅವಕಾಶವನ್ನು ಕಲ್ಪಿಸಿದೆ.

ಈ ಪ್ರಕಾರವಾಗಿ, ರೈತ ಕೃಷಿಗೆ ಒದಗಿಸುತ್ತಿದ್ದ ಸಬ್ಸಿಡಿ ಮತ್ತು ಬೆಂಬಲ ಬೆಲೆ ಕ್ರಮಗಳಿಂದ ಸರ್ಕಾರ ಹಿಂದೆ ಸರಿಯಬೇಕಾಗುತ್ತದೆ. ಈ ಹಿಂದೆಗೆತದಿಂದಾಗಿ ಕೃಷಿಗೆ ಬಳಸುವ ವಸ್ತುಗಳ ಬೆಲೆಗಳು ಏರುತ್ತವೆ. ಜೊತೆಯಲ್ಲಿ, ವಿಶ್ವ ಮಾರುಕಟ್ಟೆಯ ತಲ್ಲಣಗಳಿಂದಾಗಿ ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಏರುಪೇರುಗಳಾಗುತ್ತವೆ. ಈ ಎಲ್ಲ ಅಂಶಗಳು ಕೃಷಿಯ ಸಾಧ್ಯತೆಯನ್ನು ಕುಂದಿಸಿವೆ. ಪರಿಣಾಮವಾಗಿ, 1991 ಮತ್ತು 2011ರ ಜನಗಣತಿಗಳ ನಡುವೆ ರೈತರ ಸಂಖ್ಯೆಯಲ್ಲಿ ಒಂದೂವರೆ ಕೋಟಿ ಕಡಿಮೆಯಾಗಿದೆ. (ಕಳೆದ 25 ವರ್ಷಗಳಲ್ಲಿ ಮೂರು ಲಕ್ಷಕ್ಕಿಂತಲೂ ಹೆಚ್ಚು ಮಂದಿ ರೈತರು ಆತ್ಮ ಹತ್ಯೆಯ ಪ್ರಸಂಗವನ್ನು ಬೇರೆ ಹೇಳಬೇಕಾಗಿಲ್ಲ). ಕಾಣೆಯಾದ ಈ ಒಂದೂವರೆ ಕೋಟಿ ಮಂದಿ ರೈತರಲ್ಲಿ ಕೆಲವರು ಕೃಷಿ ಕೂಲಿಕಾರರಾದರು. ಉಳಿದವರು ಉದ್ಯೋಗ ಅರಸಿ ಪಟ್ಟಣಗಳಿಗೆ ವಲಸೆ ಹೋದರು. ಅಲ್ಲಿಯೂ ಉದ್ಯೋಗ ದೊರೆಯದೆ ಕಾರ್ಮಿಕ ಮೀಸಲು ಪಡೆ ಬೆಳೆಯಿತು. ಅದರಿಂದಾಗಿ, ಯೂನಿಯನ್ ಕಟ್ಟಿಕೊಂಡವರೂ ಸೇರಿದಂತೆ ನಗರಗಳ ದುಡಿಮೆಗಾರರ ತಲಾ ವರಮಾನ ಇಳಿದಿದೆ.

ಈ ರೀತಿಯಾಗಿ, ಕೃಷಿಯೂ ಸೇರಿದಂತೆ ಕಿರು ಉತ್ಪಾದಕರನ್ನು ಹಿಂಡಿದ ಪರಿಣಾಮವಾಗಿ, ಗ್ರಾಮೀಣ ಮತ್ತು ನಗರ ದುಡಿಮೆಗಾರರ ತಲಾ ವರಮಾನ ಪರಿಸ್ಥಿತಿ ಅದೆಷ್ಟು ಬಿಗಡಾಯಿಸಿದೆ ಎಂದರೆ, ಆಹಾರ ಧಾನ್ಯಗಳು ಮಾರಾಟವಾಗದೆ ಉಳಿದಿವೆ. ಮಾರಾಟವಾಗದೆ ಉಳಿದ ಆಹಾರ ಧಾನ್ಯಗಳನ್ನು ರಫ್ತು ಮಾಡಲಾಗುತ್ತಿದೆ ಮತ್ತು ಅದೇ ಸಮಯದಲ್ಲಿ ಹಸಿವೆ ಮತ್ತು ಬಡತನಗಳೂ ಹೆಚ್ಚುತ್ತಿವೆ. ಕಿರು ಉತ್ಪಾದನೆಯ ಈ ರೀತಿಯ ಹಿಂಡುವಿಕೆ ಅಥವಾ ಬಂಡವಾಳದ ಆದಿಮ ಶೇಖರಣೆಯ ಜೊತೆಯಲ್ಲಿ ವೇಗವಾಗಿ ಬೆಳೆಯುತ್ತಿರುವ ಜಿಡಿಪಿ ದರದ ವಿದ್ಯಮಾನದಿಂದ ಹಸಿವೆ ಮತ್ತು ಬಡತನಗಳಿಗೆ ಯಾವ ವ್ಯತ್ಯಾಸವೂ ಆಗುವುದಿಲ್ಲ.

ಉದ್ಯೋಗ ಹೆಚ್ಚಿಸುವ ಮೂಲಕ, ಈಗಿನದಕ್ಕಿಂತಲೂ ಹೆಚ್ಚು ವೇಗದ ಜಿಡಿಪಿ ಬೆಳವಣಿಗೆ ದರದ ಮೂಲಕ ಕಾರ್ಮಿಕ ಮೀಸಲು ಪಡೆಯ ಗಾತ್ರವನ್ನು ಇಳಿಸಬಹುದು ಮತ್ತು ಹಸಿವೆ ಮತ್ತು ಬಡತನಗಳನ್ನು ನಿವಾರಿಸಬಹುದು ಎಂಬುದಾಗಿ ಆಲೋಚಿಸಬಹುದು. ಆದರೆ, ನವ ಉದಾರ ಬಂಡವಾಳಶಾಹಿ ಆಳ್ವಿಕೆಯಲ್ಲಿ ಇದು ಕೈಗೂಡುವುದು ಸಾಧ್ಯವಿಲ್ಲ. ರೈತಕೃಷಿಯನ್ನು ಹಿಂಡಿದಾಗ ಅದು ಆಹಾರ ಧಾನ್ಯಗಳ ಬೇಡಿಕೆ ಮತ್ತು ಪೂರೈಕೆ ಎರಡನ್ನೂ ತಟ್ಟುತ್ತದೆ, ಮತ್ತು, ಉದಾರೀಕರಣದ ಅವಧಿಯಲ್ಲಿ ಆಹಾರ ಧಾನ್ಯಗಳ ತಲಾ ಉತ್ಪಾದನೆ ವೃದ್ಧಿಯಾಗಿಲ್ಲದಿದ್ದರೂ ಮಾರಾಟವಾಗದೆ ಉಳಿದ ಆಹಾರ ಧಾನ್ಯಗಳ ದಾಸ್ತಾನು ಏರಿದೆ.

ಈಗ, ನವ ಉದಾರ ಬಂಡವಾಳಶಾಹಿ ಆಳ್ವಿಕೆಯಲ್ಲಿ ಹೆಚ್ಚು ವೇಗದ ಜಿಡಿಪಿ ಬೆಳವಣಿಗೆ ದರದ ಮೂಲಕ ಉದ್ಯೋಗಗಳು ಹೆಚ್ಚುತ್ತವೆ ಎಂದು ಊಹಿಸಿಕೊಳ್ಳೋಣ. ಉದ್ಯೋಗಗಳ ಹೆಚ್ಚಳದಿಂದಾಗಿ, ಆಹಾರದ ಮೇಲೆ ಬೇಡಿಕೆ ಹೆಚ್ಚುವುದರಿಂದ ಮಾರಾಟವಾಗದೆ ಉಳಿದ ಆಹಾರ ಧಾನ್ಯಗಳ ದಾಸ್ತಾನು ಬಳಕೆಯಾಗುತ್ತದೆ. ಆಗ, ಉದ್ಯೋಗಗಳು ಇನ್ನಷ್ಟು ಹೆಚ್ಚಿದರೆ ಆಹಾರ ಧಾನ್ಯಗಳ ಬೆಲೆಗಳು ಏರುತ್ತವೆ. ಅದನ್ನು ಹತ್ತಿಕ್ಕಲು ಸರ್ಕಾರವು ದುಡಿಮೆಗಾರರ ವರಮಾನವನ್ನು ಕಡಿತಗೊಳಿಸುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ಮೂಲ ವರ್ಷಕ್ಕೆ ಹೋಲಿಸಿದಾಗ ಆಹಾರ ಧಾನ್ಯಗಳ ತಲಾ ಉತ್ಪಾದನೆ ವೃದ್ಧಿಯಾಗಿಲ್ಲದಿದ್ದರಿಂದ, ಜಿಡಿಪಿ ದರ ವೇಗವಾಗಿ ಬೆಳೆಯುತ್ತಿದ್ದರೂ ಸಹ ಆ ಮೂಲ ವರ್ಷಕ್ಕೆ ಹೋಲಿಸಿದಾಗ ಹಸಿವೆ ಮತ್ತು ಬಡತನಗಳು ಇಳಿದಿರುವುದಿಲ್ಲ.

ಈ ಅಂಶಗಳು ನಮಗೆ ತಿಳಿಸುವುದು ಏನೆಂದರೆ, ದುಡಿಯುವ ಜನರ ಜೀವನ ಮಟ್ಟ ಸುಧಾರಿಸಬೇಕು ಎಂದಾದರೆ, ಅಂದರೆ ಹಸಿವೆ ಮತ್ತು ಬಡತನಗಳು ಇಳಿಯಬೇಕಾದರೆ, ಆಹಾರ ಧಾನ್ಯಗಳ ತಲಾ ಉತ್ಪಾದನೆ ಹೆಚ್ಚಬೇಕಾಗುತ್ತದೆ. ಅದಕ್ಕಾಗಿ ರೈತಕೃಷಿಯನ್ನು ಪುನರುಜ್ಜೀವನಗೊಳಿಸಬೇಕಾಗುತ್ತದೆ. ಇದು ನವ ಉದಾರ ಬಂಡವಾಳಶಾಹಿಯಲ್ಲಿ ಅಂತರ್ಗತವಾಗಿರುವ ಕೆಲವು ಪ್ರವೃತ್ತಿಗಳಿಗೆ ವ್ಯತಿರಿಕ್ತವಾಗಿರುವುದರಿಂದ, ಎಷ್ಟು ಹೆಚ್ಚು ವೇಗದಲ್ಲಿ ಜಿಡಿಪಿ ದರ ಬೆಳೆಯುತ್ತಿದ್ದರೂ ಸಹ, ನವ ಉದಾರ ಬಂಡವಾಳಶಾಹಿಯ ಅಡಿಯಲ್ಲಿ ಬಡತನ ನಿವಾರಿಸುವುದು ಅಸಾಧ್ಯ. ಬದಲಿಗೆ, ಈಗ ಆಗುತ್ತಿರುವ ಹಾಗೆ ಬಡತನ ಹೆಚ್ಚುತ್ತದೆ.

ಇದೇ ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ರೈತ ಕೃಷಿ ಮತ್ತು ಕಿರು ಉತ್ಪಾದನೆಗಳನ್ನು ಪುನರುಜ್ಜೀವನಗೊಳಿಸುವ ಮೂಲಕ ಜಿಡಿಪಿ ಬೆಳವಣಿಗೆ ದರ ವೇಗ ಪಡೆದಾಗ ಮಾತ್ರ ಬಡತನ ನಿವಾರಿಸಬಹುದು. ಮತ್ತು, ಈ ಬೆಳವಣಿಗೆ ಬಹಳ ಕಾಲ ತಾಳಿ ಬಾಳುವಂತೆ ನೋಡಿಕೊಂಡು ಕ್ರಮೇಣ ಅದನ್ನು ಸಹಕಾರ ಮತ್ತು ಸಾಮುದಾಯಿಕ ರೀತಿಯ ಕೃಷಿ ಪದ್ಧತಿಗೆ ಪರಿವರ್ತಿಸುವ ಮೂಲಕ ಬಡತನ ನಿವಾರಿಸಬಹುದು. ನವ ಉದಾರ ಬಂಡವಾಳಶಾಹಿ ಬೆಳವಣಿಗೆಯಲ್ಲಿ ಅದು ಆಗದು. ಎಂತಹ ಸಾಮಾಜಿಕ ಸಂಬಂಧಗಳ ಪರಿಣಾಮವಾಗಿ ಬಡತನ ಉಂಟಾಗಿದೆ ಮತ್ತು ಎಂತಹ ಸಾಮಾಜಿಕ ಸಂಬಂಧಗಳ ಸಂದರ್ಭದಲ್ಲಿ ಜಿಡಿಪಿಯ ಬೆಳವಣಿಗೆ ಅಗುತ್ತಿದೆ ಎಂಬುದನ್ನು ಪರಿಗಣಿಸದೆ, ಬಡತನ ನಿವಾರಣೆಗೆ ಜಿಡಿಪಿ ಬೆಳವಣಿಗೆ ದರವೇ ಸರ್ವೌಷಧ ಎನ್ನುವುದು ಆಲೋಚನೆಯ ದಾರಿದ್ರ್ಯವೇ ಆಗಿದೆ. ○


"ಮಿಶನ್ ನವ ಕೇರಳ"ಕ್ಕೆ 25 ಪ್ರಾಜೆಕ್ಟ್‌ಗಳ ಎಲ್‌ಡಿಎಫ್ ಬಜೆಟ್

ಕೇರಳದಲ್ಲಿ ಕಳೆದ ವರ್ಷದ ಮಹಾಪ್ರವಾಹದ ನಂತರದ ಮೊದಲ ಬಜೆಟನ್ನು ಎಲ್‌ಡಿಎಫ್ ಸರಕಾರದ ಪರವಾಗಿ ಹಣಕಾಸು ಮಂತ್ರಿ ಡಾ.ಟಿ.ಎಂ.ಥಾಮಸ್ ಐಸಾಕ್ ಅವರು ಜನವರಿ 31 ರಂದು ಮಂಡಿಸಿದರು. ಪ್ರವಾಹ ಜರ್ಝರಿತ ರಾಜ್ಯದ ನವನಿರ್ಮಾಣದ ಗುರಿಯಿಟ್ಟುಕೊಂಡಿರುವ ಈ ಬಜೆಟ್ ಸಾರ್ವಜನಿಕ ವಲಯದ ಉದ್ದಿಮೆಗಳ ಪುನರುಜ್ಜೀವನದೊಂದಿಗೆ ಆರೋಗ್ಯ ಮತ್ತು ಶಿಕ್ಷಣದ ಆಯಕಟ್ಟಿನ ಕ್ಷೇತ್ರಗಳನ್ನು ಉತ್ತಮಗೊಳಿಸುವುದರ ಮೇಲೆ ಗಮನ ಕೇಂದ್ರೀಕರಿಸಿದೆ. ಕಲ್ಯಾಣ ಪೆನ್ಶನ್‌ಗಳು ಮತ್ತು ಲಿಂಗ ಬಜೆಟ್‌ಗೂ ಗಮನಾರ್ಹ ಹಣವನ್ನು ಒದಗಿಸಲಾಗಿದೆ. 'ಮಿಶನ್ ನವ ಕೇರಳ'ದ ಒಟ್ಟು 1.42ಲಕ್ಷ ಕೋಟಿ ರೂ.ಗಳಲ್ಲಿ ಯೋಜನಾ ಮೊತ್ತವನ್ನು 32,564 ಕೋಟಿ ರೂ.ನಿಂದ 39,807 ಕೋಟಿ ರೂ.ಗೆ ಏರಿಸಲಾಗಿದೆ.

ಕೇರಳ ಈಗ ಎರಡು ದುರಂತಗಳನ್ನು ಎದುರಿಸಿದೆ, ಒಂದು, ಮಹಾಪ್ರವಾಹ, ಮತ್ತು ಇನ್ನೊಂದು ಶಬರಿಮಲೆ ಕುರಿತ ಸುಪ್ರಿಂ ಕೋರ್ಟಿನ ತೀರ್ಪಿನ ವಿರುದ್ಧ ಹಿಂಸಾತ್ಮಕ ಪ್ರತಿಭಟನೆಗಳು ಎಂದು ತಮ್ಮ ಬಜೆಟ್ ಭಾಷಣದ ಆರಂಭದಲ್ಲಿ ಪ್ರಸ್ತಾಪಿಸಿದ ಐಸಾಕ್ ಅವರು ನವಕೇರಳ ನಿರ್ಮಾಣಕ್ಕೆ 25 ಪ್ರಾಜೆಕ್ಟ್‌ಗಳನ್ನು ಮುಂದಿಟ್ಟರು. ಹೆಚ್ಚಿನ ಸಂಪನ್ಮೂಲ ಶೇಖರಣೆಗೆ 0.25% ಪ್ರವಾಹ ಸೆಸ್ ಮತ್ತು ಜಿಎಸ್‌ಟಿ ಅಡಿಯಲ್ಲಿ ಅವಕಾಶ ಇರುವ 1% ಆಪತ್ತು ಸೆಸ್ ವಿಧಿಸಲಾಗಿದೆ. 'ಕಂಪೋಸಿಷನ್' ತೆರಿಗೆ ಸೌಲಭ್ಯವನ್ನು ಪಡೆದಿರುವ ಸಣ್ಣ ವ್ಯಾಪಾರಿಗಳಿಗೆ ಇದರಿಂದ ವಿನಾಯ್ತಿ ಕೊಡಲಾಗಿದೆ.

- ಪ್ರವಾಹಾನಂತರದ ಪರಿಸ್ಥಿತಿಯನ್ನು ನಿಭಾಯಿಸಲು ಕೃಷಿ ವಲಯಕ್ಕೆ 2500 ಕೋಟಿ ರೂ. ನೀಡಲಾಗಿದೆ.
- ಆರೋಗ್ಯ ವಲಯಕ್ಕೆ 1406 ಕೋಟಿ ರೂ.ಗಳನ್ನು ಒದಗಿಸಿ ಬಜೆಟ್ ಪ್ರಕಟಿಸಿರುವ ಸಾರ್ವತ್ರಿಕ ಆರೋಗ್ಯ ಭದ್ರತೆಯ ಸ್ಕೀಮಿನಲ್ಲಿ ನಾಲ್ಕು ಅಂಶಗಳಿವೆ. ಕೇರಳ ದೇಶದಲ್ಲಿಯೇ ಅತ್ಯುತ್ತಮ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಜಾಲವನ್ನು ಹೊಂದಿದ್ದು ಇವುಗಳಲ್ಲಿ 150ನ್ನು ಈಗಾಗಲೇ ಕುಟುಂಬ ಆರೋಗ್ಯ ಕೇಂದ್ರಗಳ ದರ್ಜೆಗೆ ಏರಿಸಲಾಗಿದೆ. ಈ ಬಾರಿ ಇನ್ನೂ 200ನ್ನು, ಕ್ರಮೇಣ ಎಲ್ಲವನ್ನೂ ಈ ದರ್ಜೆಗೆ ಏರಿಸುವ ಜತೆಗೆ ಆಧುನೀಕರಿಸುವ ಯೋಜನೆ ಹಾಕಿಕೊಳ್ಳಲಾಗಿದೆ. ಕೇಂದ್ರ ಸರಕಾರದ ಆಯುಷ್ಮಾನ್ ಭಾರತ ಯೋಜನೆಯ 8000 ರೂ. ಪ್ರೀಮಿಯಂನಲ್ಲಿ 6800 ರೂ. ಹೊರೆಯನ್ನು ರಾಜ್ಯ ಸರಕಾರಗಳ ಮೇಲೆ ಹಾಕಲಾಗಿದೆ. ಈ ಬಜೆಟಿನಲ್ಲಿ ಹೊಸ 'ಕಾರುಣ್ಯ ಸಮಗ್ರ ಆರೋಗ್ಯ ವಿಮಾ ಯೋಜನೆ'ಯನ್ನು ಪ್ರಕಟಿಸಲಾಗಿದೆ.

  ಆಶಾ ಕಾರ್ಯಕರ್ತೆಯರ ಗೌರವಧನದಲ್ಲಿ 500 ರೂ. ಹೆಚ್ಚಳ ಮಾಡಲಾಗಿದೆ.
- ಸಾರ್ವಜನಿಕ ಶಿಕ್ಷಣ ವಲಯಕ್ಕೆ ಹೆಚ್ಚಿನ ಉತ್ತೇಜನೆ– ಕಳೆದ ಎರಡು ವರ್ಷಗಳಲ್ಲಿ ಸಾರ್ವಜನಿಕ ಶಿಕ್ಷಣ ಸಂಸ್ಥೆಗಳಲ್ಲಿ 2.5 ಲಕ್ಷ ಹೆಚ್ಚಿನ ಮಕ್ಕಳು ದಾಖಲಾಗಿದ್ದಾರೆ. ಇವರಲ್ಲಿ 94% ಖಾಸಗಿ ಶಾಲೆಗಳಿಂದ ವರ್ಗಾವಣೆ ಪಡೆದವರು. ಈ ಪ್ರಕ್ರಿಯೆಗೆ ಮತ್ತಷ್ಟು ಉತ್ತೇಜನೆ ನೀಡಲು ಕೇರಳ ಮೂಲರಚನೆ ಹೂಡಿಕೆ ನಿಧಿ ಮಂಡಳಿ(ಕೆಐಐಎಫ್‌ಬಿ)ಯಿಂದ 2037.91 ಕೋಟಿ ರೂ. ನೀಡಲಾಗಿದೆ. ವಜ್ರ ಮಹೋತ್ಸವ ವರ್ಷದ ಫೆಲೋಶಿಪ್‌ಗಳನ್ನು ಪಡೆದ ಕಲಾವಿದರ ಸಹಕಾರದೊಂದಿಗೆ ಎಲ್ಲ ಜಿಲ್ಲೆಗಳಲ್ಲಿ ಆಯ್ದ ಶಾಲೆಗಳಲ್ಲಿ ಕಲಾಕೇಂದ್ರಗಳನ್ನು ತೆರೆಯಲಾಗುವುದು, ಉಪ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಈ ಬಜೆಟಿನಲ್ಲಿ ಹೆಚ್ಚಿನ ಮಹತ್ವ ನೀಡಲಾಗಿದೆ ಎಂದು ಡಾ.ಐಸಾಕ್ ಹೇಳಿದರು.
- ಎಲ್ಲರಿಗೂ ವಸತಿ–ಕೇರಳವನ್ನು ಎಲ್ಲರಿಗೂ ವಸತಿಯಿರುವ ರಾಜ್ಯವಾಗಿ ಮಾಡುವ ಉದ್ದೇಶದ 'ಲೈಫ್ ಮಿಶನ್' ನ ಎರಡನೇ ಘಟ್ಟದಲ್ಲಿ ಜಮೀನು ಇದ್ದರೂ ಮನೆಯಿರದ 1,84,255 ಫಲಾನುಭವಿಗಳಿಗೆ ವಸತಿ ನೆರವು ನೀಡಲಾಗುವುದು. ಈ ಮಿಶನ್‌ನ ಮೂರನೇ ಘಟ್ಟವಾದ ಭೂಹೀನರು ಮತ್ತು ವಸತಿಹೀನರಿಗೆ ವಸತಿ ಸಮುಚ್ಚಯಗಳ ನಿರ್ಮಾಣಕ್ಕೆ 1296 ಕೋಟಿ ರೂ.ಗಳನ್ನು ಒದಗಿಸಲಾಗಿದೆ.



- ಸಾರ್ವಜನಿಕ ವಲಯದ ಘಟಕಗಳನ್ನು ಉತ್ತಮಗೊಳಿಸಲು ದೊಡ್ಡ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ನೀಡಿರುವ 527 ಕೋಟಿ ರೂ.ಗಳಲ್ಲಿ 299 ಕೋಟಿ ರೂ.ಗಳನ್ನು ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಒದಗಿಸಲಾಗುತ್ತದೆ. ಎಲ್‌ಡಿಎಫ್ ಸರಕಾರ ಅಧಿಕಾರ ವಹಿಸಿಕೊಂಡಾಗ ರಾಜ್ಯದ ಒಟ್ಟು 40 ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ 8 ಮಾತ್ರ ಲಾಭದಲ್ಲಿದ್ದವು. ಈಗ ಅದು 20ಕ್ಕೆ ಏರಿದೆ ಎಂದು ಡಾ. ಐಸಾಕ್ ಹೇಳಿದರು. ಕೇರಳ ರಸ್ತೆ ಸಾರಿಗೆ ಸಂಸ್ಥೆಯ ಪುನರ್ರಚನೆಗೆ 2019–20ರಲ್ಲಿ 1000 ಕೋಟಿ ರೂ. ಗಳ ಸಹಾಯ ಒದಗಿಸಲಾಗಿದೆ, ಸಂಸ್ಥೆ ವಿದ್ಯುತ್ ಬಸ್‌ಗಳನ್ನು ಬಳಸಲಾರಂಬಿಸುತ್ತದೆ ಎಂದು ಅವರು ಹೇಳಿದರು.
- 'ಕುಟ್ಟನಾಡು ಪ್ಯಾಕೇಜ್'ನ ಎರಡನೇ ಹಂತಕ್ಕೆ 1000 ಕೋಟಿ ರೂ. ಪ್ರಕಟಿಸಲಾಗಿದೆ. ಇದು ಹಿನ್ನೀರು ಮತ್ತು ಇತರ ಜಲಮೂಲಗಳನ್ನು ಸ್ವಚ್ಛಗೊಳಿಸುವ ಯೋಜನೆ.
- 'ಕೇರಳ ಬ್ಯಾಂಕ್' ರಚಿಸುವ ಎಲ್‌ಡಿಎಫ್‌ನ ಚುನಾವಣಾ ಭರವಸೆ ಈಗ ಈಡೇರುವ ಹಂತ ತಲುಪಿದೆ ಎಂದು ಹಣಕಾಸು ಮಂತ್ರಿಗಳು ಹೇಳಿದರು. ಕೇರಳದಲ್ಲಿನ ಮೂರು ಹಂತಗಳ ಸಹಕಾರಿ ಬ್ಯಾಂಕುಗಳ ಜಾಲವನ್ನು ವಿಲೀನಗೊಳಿಸಿ ಏಕೈಕ ದೊಡ್ಡ ಸಹಕಾರಿ ಬ್ಯಾಂಕನ್ನು ರಚಿಸುವ ವಿಚಾರ ಇದರಲ್ಲಿದೆ. ಇದು 800ಕ್ಕೂ ಹೆಚ್ಚು ಶಾಖೆಗಳಿರುವ ರಾಜ್ಯದ ಅತಿ ದೊಡ್ಡ ಬ್ಯಾಂಕಿಂಗ್ ಜಾಲವಾಗಲಿದೆ ಮತ್ತು ದೇಶದಲ್ಲಿ ಸಹಕಾರಿ ವಲಯದ ಮೊತ್ತಮೊದಲ ಶೆಡ್ಯೂಲ್ಡ್ ಬ್ಯಾಂಕ್ ಆಗಲಿದೆ ಎಂದು ಡಾ. ಐಸಾಕ್ ಹೇಳಿದರು.
- ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳಿಗೆ ಅವರ ಜನಸಂಖ್ಯೆಯ ಅನುಪಾತದಲ್ಲಿ ಅಭಿವೃದ್ಧಿ ನಿಧಿಗಳನ್ನು ಒದಗಿಸುವ ಏಕೈಕ ರಾಜ್ಯ ಕೇರಳ. ಈ ಎರಡು ವಿಭಾಗಗಳ ಉಪಯೋಜನೆಗಳಿಗೆ ಅನುಕ್ರಮವಾಗಿ 9.81% ಮತ್ತು 2.83% ಹಣ ಒದಗಿಸಲಾಗಿದೆ. ಇದು ಜನಸಂಖ್ಯೆಯಲ್ಲಿ ಈ ವಿಭಾಗಗಳ ಅನುಪಾತಕ್ಕಿಂತ ಹೆಚ್ಚಿದೆ. ಕೇಂದ್ರ ಸರಕಾರ ಪಂಚವಾರ್ಷಿಕ ಯೋಜನೆಗಳ ಪರಿಕಲ್ಪನೆಯನ್ನೇ ತ್ಯಜಿಸಿ ಉಪಯೋಜನೆ ಎಂಬುದನ್ನೆ ಅಸಂಬದ್ಧಗೊಳಿಸಿರುವುದನ್ನು ಈ ಸಂದರ್ಭದಲ್ಲಿ ಡಾ.ಐಸಾಕ್ ನೆನಪಿಸಿದರು. ಸಂಘಟಿತ ವಲಯದಲ್ಲಿ ಪರಿಶಿಷ್ಟ ಸಮುದಾಯಗಳಿಗೆ ಉದ್ಯೋಗ ಗ್ಯಾರಂಟಿಯ ಒಂದು ವಿನೂತನ ಸ್ಕೀಮನ್ನು ಜಾರಿ ಮಾಡಲಾಗುತ್ತಿದೆ. ಈ ಎರಡು ಸಮುದಾಯಗಳ 10,000 ಸದಸ್ಯರ ನೈಪುಣ್ಯವನ್ನು ಅಭಿವೃದ್ಧಿ ಪಡಿಸಿ ಆಧುನಿಕ ಉದ್ದಿಮೆಗಳು ಮತ್ತು ಸೇವಾ ವಲಯದಲ್ಲಿ ದೇಶದ ಒಳಗೂ, ಹೊರಗೂ ಉದ್ಯೋಗ ಒದಗಿಸುವ ಯೋಜನೆಯನ್ನು ಕ್ರೆಸ್ಟ್ ಮತ್ತು ಕೋಜಿಕ್ಕೋಡ್‌ನ ಐಐಎಂ ಆಶ್ರಯದಲ್ಲಿ ಜಾರಿಯಾಗುತ್ತಿದೆ. ಮೀನುಗಾರರಿಗೂ ಇಂತಹ ಒಂದು ಯೋಜನೆಯನ್ನು ರೂಪಿಸಲಾಗುವುದು.
- ನವಕೇರಳ ಪ್ರಾಜೆಕ್ಟ್‌ನಲ್ಲಿ ಕೈಗಾರಿಕಾ ಪಾರ್ಕ್‌ಗಳು ಮತ್ತು ಕಾರ್ಪೊರೇಟ್ ಹೂಡಿಕೆ ಬಹಳ ಮಹತ್ವದ್ದು ಎನ್ನುತ್ತ ಕೈಗಾರಿಕಾ ಪಾರ್ಕ್‌ಗಳಿಗಾಗಿ 15,600 ಕೋಟಿ ರೂ.ಗಳನ್ನು ಒದಗಿಸಲಾಗುವುದು ಎಂದ ಹಣಕಾಸು ಮಂತ್ರಿಗಳು ಇವುಗಳ ಗಾತ್ರವನ್ನೂ 6700 ಎಕ್ರೆಗೆ ಏರಿಸಲಾಗುವುದು ಎಂದರು. ಸ್ಟಾರ್ಟ್ ಅಪ್‌ಗಳ ರಚನೆಯಲ್ಲಿ ಚಿಲಿ ಮತ್ತು ಎಸ್ತೋನಿಯ ನಮಗೆ ಮಾದರಿಯಾಗಬೇಕು ಎಂದ ಅವರು ನಾವೀನ್ಯತೆಯ ವಲಯದ ನೇತೃತ್ವದಲ್ಲಿ ಇಂತಹ ಒಂದು ಕಾರ್ಯಕ್ರಮವನ್ನು ರೂಪಿಸಲು 10 ಕೋಟಿ ರೂ.ಗಳನ್ನು ನೀಡಲಾಗುತ್ತಿದೆ ಎಂದರು.
- ಮಹಿಳಾ ಸಬಲೀಕರಣಕ್ಕೆ 1420 ಕೋಟಿ ರೂ. ಒದಗಿಸಲಾಗಿದೆ, ಇತರ ರಾಜ್ಯಗಳಂತೆ ಕೇರಳವೂ ಈ ವಿಷಯದಲ್ಲಿ ಹಿಂದೆ ಬಿದ್ದಿದ್ದರೂ ಇದಕ್ಕೆ ನೀಡಿರುವ ಯೋಜನಾ ಹಣದ ಪ್ರಮಾಣ ಎಲ್‌ಡಿಎಫ್ ಸರಕಾರದ ಅಡಿಯಲ್ಲಿ 4% ದಿಂದ 6.1% ಕ್ಕೆ ಏರಿದೆ ಎಂದು ಹಣಕಾಸು ಮಂತ್ರಿಗಳು ಹೇಳಿದರು. ಸಾಮಾನ್ಯ ಅಭಿವೃದ್ಧಿ ಸ್ಕೀಮುಗಳಲ್ಲಿ ಮಹಿಳಾ ಸಂಯೋಜನೆಯನ್ನು ಗಣನೆಗೆ ತಗೊಂಡರೆ ಈ ಪ್ರಮಾಣ 16.85% ಆಗುತ್ತದೆ. ಇದು 2017–18ರಲ್ಲಿ 11.5% ಇತ್ತು.
- ಪ್ರವಾಹದ ಸಮಯದಲ್ಲಿ ಪರಿಹಾರ ಕಾರ್ಯದ ಮುಂಚೂಣಿಯಲ್ಲಿದ್ದ ಮೀನುಗಾರ ಸಮುದಾಯದ ಸಮಗ್ರ ಅಭಿವೃದ್ಧಿಗೆ 2000 ಕೋಟಿ ರೂ.ಗಳ ಪ್ಯಾಕೇಜ್ ನೀಡಲಾಗಿದೆ. 'ಕೇರಳ ಪುನರ್ನಿರ್ಮಾಣ' ದಡಿಯಲ್ಲಿ ಕರಾವಳಿ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ 1000 ಕೋಟಿ ರೂ.ಗಳನ್ನು ಖರ್ಚು ಮಾಡಲಾಗುವುದು.

2018–19 ಕ್ಕೆ ಹೋಲಿಸಿದರೆ ಸರಕಾರದ ಒಟ್ಟು ವೆಚ್ಚ 13.88% ದಷ್ಟು ಹೆಚ್ಚಿದೆ ಎಂದು ತಮ್ಮ ಬಜೆಟ್ ಭಾಷಣವನ್ನು ಮುಗಿಸುತ್ತ ಹೇಳಿದ ಡಾ. ಥಾಮಸ್ ಐಸಾಕ್, ಸರಕಾರದ ಈ ನಿರ್ಧಾರದ ಹಿಂದಿರುವ ಕಣ್ಣೋಟವೆಂದರೆ ಆರ್ಥಿಕ ಹಿಂಜರಿತ ಉಂಟಾಗದಿರಲು, ವಿಶೇಷವಾಗಿ ಕೊಲ್ಲಿ ದೇಶಗಳಿಂದ ಆದಾಯ ಇಳಿಯುತ್ತಿರುವ ಸಂದರ್ಭದಲ್ಲಿ ಸರಕಾರ ಮಾಡಬೇಕಾದ ವೆಚ್ಚವನ್ನು ಹೆಚ್ಚಿಸಬೇಕಾಗುತ್ತದೆ ಎಂದು ಹೇಳಿದರು.





ಹಿರಿಯ ಹಿಂದಿ ಪ್ರಗತಿಶೀಲ ಲೇಖಕಿ

ಕೃಷ್ಣಾ ಸೋಬ್ತಿ ನಿಧನ

ಹಿಂದಿ ಭಾಷೆಯ ಹಿರಿಯ ಪ್ರಗತಿಶೀಲ ಲೇಖಕಿ ಕೃಷ್ಣಾ ಸೋಬ್ತಿ ಜನವರಿ 25 ರಂದು ನಿಧನರಾದರು. ಅವರಿಗೆ 93 ವರ್ಷ ವಯಸ್ಸಾಗಿತ್ತು. ದೀರ್ಘಕಾಲದಿಂದ ಕಾಯಿಲೆಯಿಂದ ನರಳುತ್ತಿದ್ದರೂ ಕೊನೆಯ ದಿನಗಳ ವರೆಗೂ ಅವರು ಸಕ್ರಿಯರಾಗಿದ್ದರು. ಜನವಾದಿ ಮೌಲ್ಯಗಳಲ್ಲಿ ಮತ್ತು ಸೃಜನಾತ್ಮಕ ಸ್ವಾತಂತ್ರ್ಯದಲ್ಲಿ ನಂಬಿಕೆ ಇರುವ ಎಲ್ಲ ಲೇಖಕರಿಗೂ ಅವರು ಸ್ಫೂರ್ತಿಯಾಗಿದ್ದರು ಎಂದು ಜನವಾದಿ ಲೇಖಕ್ ಸಂಘ್ ಅವರಿಗೆ ಶ್ರದ್ಧಾಂಜಲಿ ಅರ್ಪಿಸಿದೆ.

ಮುಖ್ಯವಾಗಿ ಕಾದಂಬರಿಗಾರ್ತಿಯಾದ ಅವರು ಜಿಂದಗೀನಾಮಾ, ದಿಲೋ ದಾನಿಶ್, ಡರ್‌ಸೆ ಬಿಛುಡಿ, ಸಮಯ್ ಸರ್‌ಗಂ ಮತ್ತು ಹಲವು ಸಣ್ಣ ಕತೆಗಳ ಮೂಲಕ ಜನಪ್ರಿಯರಾಗಿದ್ದರು. ಮುಖ್ಯವಾಗಿ ಪ್ರಗತಿಪರ ಮತ್ತು ಧೀರ ವೈಚಾರಿಕ ನಿಲುವುಗಳಿಗಾಗಿ ಅವರು ಖ್ಯಾತರಾಗಿದ್ದರು. ಸಾಹಿತ್ಯ ಅಕಾಡೆಮಿ, ಜ್ಞಾನಪೀಠ ಮತ್ತು ಇತರ ಹಲವಾರು ಪ್ರಶಸ್ತಿಗಳನ್ನು ಪಡೆದ ಅವರು ಬಿಜೆಪಿ–ಆರೆಸ್ಸೆಸ್‌ನ ಕೋಮುವಾದಿ ಹಿಂಸಾಚಾರ ಮತ್ತು ಅಲ್ಪಸಂಖ್ಯಾತರನ್ನು ಬಡಿದು ಸಾಯಿಸುವ ಕೃತ್ಯಗಳನ್ನು ಬಲವಾಗಿ ಖಂಡಿಸಿದ್ದರು. ಕಾಯಿಲೆಯಿಂದಾಗಿ ಅವರು ನಡೆದಾಡುವುದು ಕಷ್ಟಕರವಾಗಿದ್ದರೂ ಗಾಲಿ ಕುರ್ಚಿಯಲ್ಲಿ ಕುಳಿತೇ ಅಸಹಿಷ್ಣುತೆಯ ವಿರುದ್ಧ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿಯ ವಿರುದ್ಧ ಪ್ರತಿಭಟನೆಗಳಲ್ಲಿ ಭಾಗವಹಿಸಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತಾಡಿದ್ದರು.

ಡಾ.ಎಂ.ಎಂ.ಕಲ್ಬುರ್ಗಿಯವರ ಹತ್ಯೆಯಾದಾಗ ಅದನ್ನು ಸಾಹಿತ್ಯ ಅಕಾಡೆಮಿ ಖಂಡಿಸಬೇಕು ಹಾಗು ಒಂದು ಶ್ರದ್ಧಾಂಜಲಿ ಸಭೆಯನ್ನು ನಡೆಸಬೇಕು ಎಂದು ಜನವಾದಿ ಲೇಖಕ್ ಸಂಘ್ ಮತ್ತು ಇತರ ಹಲವು ಹಿಂದಿ ಲೇಖಕರು ಆಗ್ರಹಿಸಿದ್ದರು. ಲೇಖಕರ ಆಗ್ರಹಗಳಿಗೆ ಸಾಹಿತ್ಯ ಅಕಾಡೆಮಿ ಪ್ರತಿಕ್ರಿಯಿಸದಿದ್ದಾಗ ಅವರು ಅಕಾಡೆಮಿಯ ಕಾರ್ಯಕಾರಿ ಮಂಡಳಿಯ ತನ್ನ ಆಜೀವ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

ಲುಧಿಯಾನಾದಲ್ಲಿ ಎಡಪಕ್ಷಗಳ ಬೃಹತ್ ರ್‍ಯಾಲಿ

ಪಂಜಾಬ್ ರಾಜ್ಯದ ಲುಧಿಯಾನಾದಲ್ಲಿ ಜನವರಿ 28ರಂದು ಸಿಪಿಐ ಮತ್ತು ಸಿಪಿಐ(ಎಂ) ಜಂಟಿಯಾಗಿ ಒಂದು ಬೃಹತ್ ರ್‍ಯಾಲಿಯನ್ನು ನಡೆಸಿದವು. ಪಂಜಾಬಿನ ಪ್ರತಿಯೊಂದು ಮೂಲೆಯಿಂದಲೂ ಬಂದ ಕೃಷಿ ಕೂಲಿಕಾರರು, ರೈತರು, ಮನರೇಗ ಕೆಲಸಗಾರರು, ಗ್ರಾಮ ಚೌಕೀದಾರರು, ಕೈಕಸಬುದಾರರು, ಕಾರ್ಮಿಕರು ಮತ್ತು ದಿನಗೂಲಿಯವರು ದೊಡ್ಡ ಸಂಖ್ಯೆಗಳಲ್ಲಿ ಇದರಲ್ಲಿ ಭಾಗವಹಿಸಿದರು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮತ್ತು ಸಿಪಿಐ ನ ಹಿರಿಯ ಮುಖಂಡ ಡಿ.ರಾಜ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸುಖ್ವಿಂದರ್ ಸಿಂಗ್ ಸೆಕೋಂ, ಸಿಪಿಐ ರಾಜ್ಯ ಕಾರ್ಯದರ್ಶಿ ಬಂತ್ ಸಿಂಗ್ ಬ್ರಾರ್ ಹಾಗೂ ಎರಡೂ ಪಕ್ಷಗಳ ಇತರ ರಾಜ್ಯ ಮುಖಂಡರು ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು.





ಫ್ರಾನ್ಸ್ ನಲ್ಲಿ ಮತ್ತೆ ಕಿಚ್ಚೆಬ್ಬಿಸಿರುವ 'ಹಳದಿ ನಡುವಂಗಿ' ಹೋರಾಟ

ಯೆಲ್ಲೋ ವೆಸ್ಟ್ ಹೋರಾಟಗಾರರನ್ನು ದಂಗೆಕೋರರು, ಎಂದು ಪ್ರಚೋದಿಸಿ ಇವರ ಮೇಲೆ ದಾಳಿ ನಡೆಸಿದರು. ಇದರಿಂದ ಬೆದರದ ಯೆಲ್ಲೋ ವೆಸ್ಟ್ ಪ್ರತಿಭಟನೆಕಾರರು ತಮ್ಮ ಹೋರಾಟವನ್ನು ವಿಸ್ತರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ಇಡೀ ವಾರ ಸೋಮವಾರದಿಂದ ಶುಕ್ರವಾರದವರೆಗೆ ಬೀದಿ ಬೀದಿ ಗಳಲ್ಲಿ ಸಭೆಗಳನ್ನು ನಡೆಸಿ, ಸಾಮಾನ್ಯ ಜನರನ್ನು ವ್ಯವಸ್ಥಿತವಾಗಿ ಸಂಘಟಿಸಲು ಶುರು ಮಾಡಿದರು. ವಾರದ ಕೊನೆಯ ದಿನ ಶನಿವಾರ ಪ್ರತಿಭಟನೆಗೆ ರಸ್ತೆ ಗಿಳಿಯುವುದು. ಇದೀಗ 9 ನೇ ಹಂತದ ಪ್ರತಿಭಟನೆ ಜನವರಿ 19 ರಂದು ನಡೆದಿದೆ. ಈಗಲೂ ಮುಂದುವರಿಯುತ್ತಿದೆ. ಇದೀಗ ಮ್ಯಾಕ್ರಾನ್ ರಾಜೀನಾಮೆಗೆ ಒತ್ತಾಯಿಸಿ, ಹೋರಾಟ ವಾರದಿಂದ ವಾರಕ್ಕೆ ಹೊಸ ರೂಪ ಪಡೆದು, ಇಡೀ ಫ್ರಾನ್ಸ್ ನ ಎಲ್ಲಾ ನಗರ ಪ್ರದೇಶಗಳಿಗೂ ಹಬ್ಬಿ ಬಹುತೇಕ ಜನರ ಬೆಂಬಲ ಪಡೆದುಕೊಂಡಿದೆ.



ಫ್ರಾನ್ಸ್ ರಾಜಧಾನಿ ಪ್ಯಾರಿಸ್ ಹೊತ್ತಿ ಉರಿಯುತ್ತಿದೆ. ಮಾತ್ರವಲ್ಲದೇ, ಇಡೀ ಫ್ರಾನ್ಸ್ ನ ಇತರ ನಗರ ಪ್ರದೇಶಗಳಿಗೂ ಹಬ್ಬುತ್ತಿದೆ. ನವೆಂಬರ್ 7, 2018 ರಂದು 'ಯೆಲ್ಲೋ ವೆಸ್ಟ್' ಅಂದರೆ ಹಳದಿ ನಡುವಂಗಿ ದರಿಸಿದ (ಗೆಲೆಟ್ ಜೌನ್ಸ್) ಮೋಟಾರ್ ಮತ್ತು ಟ್ರಕ್ಕ್ ಡ್ರೈವರ್ ಗಳಿಂದ ಮೊದಲು ಆರಂಭಗೊಂಡ ಈ ಪ್ರತಿಭಟನೆ ಇದೀಗ 9ನೇ ವಾರಕ್ಕೆ ಕಾಲಿಟ್ಟಿದೆ. ಜನವರಿ 19 ರ ಶನಿವಾರ ಪ್ರತಿಭಟನೆ ರೌದ್ರಾವತಾರ ತಾಳಿ ಪೋಲಿಸರು ಬರ್ಬರವಾಗಿ ಪ್ರತಿಭಟನೆಕಾರರ ಮೇಲೆ ದಾಳಿ ನಡೆಸಿದ್ದಾರೆ. ಪೋಲಿಸರು ಮತ್ತು ಪ್ರತಿಭಟನೆಕಾರರ ಮಧ್ಯೆ ಭಾರಿ ಗಲಭೆಗಳು ಹೊಡೆದಾಟಗಳು, ಜೊತೆಗೆ ಪೋಲಿಸರಿಂದ ನೀರಿನ ಫಿರಂಗಿಗಳನ್ನು ಬಳಸಿ ಜನ ಜುಂಗಳಿಯನ್ನು ಚದುರಿಸಿದ ರೀತಿ, ಹಾಗೂ ಅಶ್ರುವಾಯು ಪ್ರಯೋಗದಿಂದಾಗಿ ನೂರಾರು ಸಾರ್ವಜನಿಕರು ಗಾಯಾಳುಗಳಾಗಿರುವುದು,ಹಳದಿ ಜಾಕೆಟ್ಸ್ ಪ್ರತಿಭಟನಾಕಾರರನ್ನು ಮತ್ತಷ್ಟು ಕೆರಳಿಸಿದೆ. ಸಾವಿರಾರು ಪ್ರತಿಭಟನಾಕಾರರನ್ನು ಬಂಧಿಸಲಾಗಿದೆ. ಭಾರೀ ವೇಗದ ಹತ್ತಿರದಿಂದ ಹೊಡೆಯುವ ರಬ್ಬರ್ ಬುಲೆಟ್ಟುಗಳನ್ನು ಬಳಸಲಾಗಿದೆ. ಇದೀಗ ಫ್ರೆಂಚ್ ಎಡ ಟ್ರೇಡ್ ಯೂನಿಯನ್ ಗಳು ಹಾಗೂ, ಇಡೀ ದುಡಿಯುವ ವರ್ಗವೇ ಈ ಹೋರಾಟದಲ್ಲಿ ಧುಮುಕಿದೆ.



ನಾಗರಾಜ ನಂಜುಂಡಯ್ಯ

ಇದುವರೆಗೂ, ಅಧ್ಯಕ್ಷ ಎಮ್ಯೂನಲ್ ಮ್ಯಾಕ್ರಾನ್ ರ ನವ ಉದಾರವಾದ ನೀತಿಗಳ ಭಾಗವಾಗಿರುವ ಯೋಜನೆಗಳ ವಿರುದ್ದ, ನಡೆಸುತ್ತಿದ್ದ ಸಾಂಪ್ರದಾಯಿಕ ಪ್ರತಿಭಟನೆಗಳಿಗಿಂತಲೂ, ಹೆಚ್ಚು ಪರಿಣಾಮಕಾರಿಯಾದ ಪ್ರತಿರೋಧವನ್ನು ಹಳದಿ ನಡುವಂಗಿ ಹೋರಾಟಗಾರರು ತೋರಿಸಿದ್ದಾರೆ. ಇದೊಂದು ಹೊಸ ರೂಪದ ವೈವಿಧ್ಯಮಯ ಹಾಗೂ ವಿಶಾಲ ಆಧಾರಿತ ಚಳುವಳಿ ಅಥವಾ ಫ್ರೆಂಚ್ ಸಾರ್ವಜನಿಕರು ಮ್ಯಾಕ್ರಾನ್ ಸರಕಾರದ ವಿರುದ್ದ ದಂಗೆಯೆದ್ದಿದ್ದಾರೆ ಎಂದು ಕರೆಯಲಾಗುತ್ತಿದೆ.



ಆರಂಭದಲ್ಲಿ, ಟ್ರೇಡ್ ಯೂನಿಯನ್‌ಗಳ ಅಡಿಯಲ್ಲಿ, 2018 ರ ಮೊದಲಾರ್ಧದಲ್ಲಿ, ರೈಲ್ವೆ ಕಾರ್ಮಿಕರು ಮ್ಯಾಕ್ರಾನ್ ಸರಕಾರದ ಖಾಸಗೀಕರಣ ನೀತಿಗಳ ಹಾಗೂ ಕಾರ್ಮಿಕ ಕಾನೂನುಗಳ ಹಕ್ಕುಗಳನ್ನು ಹತ್ತಿಕ್ಕುವುದರ ವಿರುದ್ಧ ಪ್ರತಿಭಟನೆ ನಡೆಸಿದರು. ಈ ಸಾಂಪ್ರದಾಯಿಕ ಹೋರಾಟಗಳು ಹೆಚ್ಚು ಫಲ ಕೊಡಲಿಲ್ಲ, ಕಾರಣ ಪಾರ್ಲಿಮೆಂಟ್ ನಲ್ಲಿ ತನಗಿದ್ದ ಅಗಾಧವಾದ ಬಹುಮತದಿಂದ ನವ ಉದಾರ ವಾದದ ಪರವಾದ ಕಾನೂನು ಗಳನ್ನು ರೂಪಿಸುವಲ್ಲಿ ಮ್ಯಾಕ್ರಾನ್ ಸರಕಾರ ಯಶಸ್ವಿಯಾಗಿತ್ತು.

ಯೆಲ್ಲೋ ವೆಸ್ಟ್ ವೈವಿಧ್ಯತೆ

ಆದರೆ, ಯೆಲ್ಲೋ ವೆಸ್ಟ್ ಹೋರಾಟಗಾರರ ಈ ವೈವಿಧ್ಯಮಯ ಪ್ರತಿರೋಧ ಈಗಾಗಲೇ ಮ್ಯಾಕ್ರಾನ್ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗೆ ಬೆದರಿಕೆ ಒಡ್ಡಿದೆ. ಮೊದಲು ತೈಲದ ಮೇಲಿನ ತೆರಿಗೆ ಹೆಚ್ಚಳದ ವಿರುದ್ದ ಆರಂಭಗೊಂಡ ಈ ಪ್ರತಿಭಟನೆಯನ್ನು ಹತ್ತಿಕ್ಕಲು ಮ್ಯಾಕ್ರಾನ್ ಸರ್ಕಾರ ತೆಗೆದುಕೊಂಡ ನಿಲುವುಗಳು, ಪ್ರತಿಭಟನೆಕಾರರನ್ನು ಪ್ರಚೋದಿಸಿತು. ಬೆದರಿಕೆಗಳು ಅಶ್ಲೀಲ ಮಟ್ಟದಲ್ಲಿದ್ದವು, ಅಪ್ರಜಾಪ್ರಭುತ್ವ, ಹಾಗೂ ಆರ್ಥಿಕ ಮಿತವ್ಯಯ ನೀತಿಗಳ ಜಾರಿ, ಹೇಗಿತ್ತೆಂದರೆ, "1980ರ ದಶಕದಲ್ಲಿ ಅಂದಿನ ಬ್ರಿಟನ್ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ರ "ನವ ಉದಾರವಾದಕ್ಕೆ ಪರ್ಯಾಯವಿಲ್ಲ" (ಟಿನಾ) ಎಂಬ ನಾಣ್ಣುಡಿಯನ್ನು ಪಾಲಿಸಿಸುವ ನಿಟ್ಟಿನಲ್ಲಿ, ಮ್ಯಾಕ್ರಾನ್ ತನ್ನ ಸರಕಾರದ ನೀತಿಗಳನ್ನು ಜನರ ಮೇಲೆ ಅಪ್ರಜಾಪ್ರಭುತ್ವವಾಗಿ ಹೇರಲು ಹೊರಟರು.

ಯೆಲ್ಲೋ ವೆಸ್ಟ್ ಹೋರಾಟಗಾರರನ್ನು ದಂಗೆಕೋರರು, ಎಂದು ಪ್ರಚೋದಿಸಿ ಇವರ ಮೇಲೆ ದಾಳಿ ನಡೆಸಿದರು. ಇದರಿಂದ ಬೆದರದ ಯೆಲ್ಲೋ ವೆಸ್ಟ್ ಪ್ರತಿಭಟನೆಕಾರರು ತಮ್ಮ ಹೋರಾಟವನ್ನು ವಿಸ್ತರಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾದರು. ಇಡೀ ವಾರ ಸೋಮವಾರದಿಂದ ಶುಕ್ರವಾರದವರೆಗೆ ಬೀದಿ ಬೀದಿ ಗಳಲ್ಲಿ ಸಭೆಗಳನ್ನು ನಡೆಸಿ, ಸಾಮಾನ್ಯ ಜನರನ್ನು ವ್ಯವಸ್ಥಿತವಾಗಿ ಸಂಘಟಿಸಲು ಶುರು ಮಾಡಿದರು. ವಾರದ ಕೊನೆಯ ದಿನ ಶನಿವಾರ ಪ್ರತಿಭಟನೆಗೆ ರಸ್ತೆ ಗಿಳಿಯುವುದು. ಇದೀಗ 9 ನೇ ಹಂತದ ಪ್ರತಿಭಟನೆ ಜನವರಿ 19 ರಂದು ನಡೆದಿದೆ. ಈಗಲೂ ಮುಂದುವರಿಯುತ್ತಿದೆ. ಇದೀಗ ಮ್ಯಾಕ್ರಾನ್ ರಾಜೀನಾಮೆಗೆ ಒತ್ತಾಯಿಸಿ, ಹೋರಾಟ ವಾರದಿಂದ ವಾರಕ್ಕೆ ಹೊಸ ರೂಪ ಪಡೆದು, ಇಡೀ ಫ್ರಾನ್ಸ್ ನ ಎಲ್ಲಾ ನಗರ ಪ್ರದೇಶಗಳಿಗೂ ಹಬ್ಬಿ ಬಹುತೇಕ ಜನರ ಬೆಂಬಲ ಪಡೆದುಕೊಂಡಿದೆ.

ನವೆಂಬರ್ ನಲ್ಲಿ ನಡೆದ ಪ್ರತಿಭಟನೆಯ ಕಾವು ತಟ್ಟಿ, ಮ್ಯಾಕ್ರಾನ್ ಸರ್ಕಾರದ ಯೋಜನೆಗಳಲ್ಲಿ ಪ್ರಮುಖವಾಗಿ ತೈಲ ತೆರಿಗೆ ಹೆಚ್ಚಳದ ಪ್ರಸ್ತಾವನೆಗಳನ್ನು ಹಿಂಪಡೆಯಲಾಗುವುದು ಎಂದು ಘೋಷಿಸಲಾಯಿತು. ಇನ್ನೂ ಹಲವು ರಿಯಾಯಿತಿಗಳನ್ನು ನೀಡಲಾಯಿತು. ಕನಿಷ್ಠ ವೇತನವನ್ನು ಸಾಧಾರಣ ಮಟ್ಟದಲ್ಲಿ ಹೆಚ್ಚಿಸುವ, ಓವರ್ ಟೈಮ್ ವೇತನದ ತೆರಿಗೆ ರಹಿತ ಪಾವತಿ ಮಾಡುವ ಭರವಸೆ ನೀಡಲಾಗಿತ್ತು. ಎಲ್ಲಾ ಕಾರ್ಮಿಕರಿಗೆ ವರ್ಷಾಂತ್ಯದಲ್ಲಿ ಬೋನಸ್ ಪಾವತಿಯ ಮೇಲೆಯೂ ತೆರಿಗೆ ವಿನಾಯತಿ ನೀಡಲಾಗಿದೆ. ನಿರ್ದಿಷ್ಟ ಮಿತಿಯ ಕೆಳಗಿನ ಪಿಂಚಣಿದಾರರಿಗೆ ಪ್ರಸ್ತಾಪಿಸಿದ್ದ ಯೋಜಿತ ತೆರಿಗೆ ಹೆಚ್ಚಳವನ್ನು ವಾಪಸ್ಸು ಪಡೆಯುವ ಭರವಸೆಯನ್ನು ನೀಡಲಾಗಿತ್ತು. ಇವೆಲ್ಲಾ ಭರವಸೆಯಾಗಿಯೇ ಮುಂದುವರಿದಿವೆ. ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ.

ಮ್ಯಾಕ್ರಾನ್ ರಾಜೀನಾಮೆಗೆ ಒತ್ತಾಯ

ಮ್ಯಾಕ್ರಾನ್ ಭರವಸೆಗಳು ದೂರದ ಮಾತು ಗಳಾಗಿ ಉಳಿದಿವೆ. ಅವರು ತನ್ನ ಡೊಂಕು ಬೆರಳಿನಿಂದ ತೋರಿಸಿ ಸಹವರ್ತಿ ನಾಗರಿಕ ರರನ್ನು ಉದ್ದೇಶಿಸಿ ಮಾತನಾಡುವ ಪರಿ "ಪ್ಯಾನೆಂಟ್ಸ್ ಅಥವಾ ಲೇಔಟ್" ಎಂದು ವಿವರಿಸಲಾಗಿದೆ. ಕಾರ್ಮಿಕರು ತಮ್ಮ ಅಗತ್ಯ ಕೆಲಸಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಿಲ್ಲವೆಂದರೆ, ಕಾನೂನು ಗಳಲ್ಲಿ ಹಕ್ಕುಗಳ ಬದಲಿಗೆ ಕರ್ತವ್ಯಗಳು ಎಂದು ಹೇರಲಾಗುವುದು ಎಂದು ಗರ್ವದಿಂದ ಉಚ್ಚರಿಸಿದ್ದಾರೆ. ಅವರ ಅದ್ದೂರಿ ಜೀವನ ಶೈಲಿ, ಅನಗತ್ಯ ಖರ್ಚುಗಳು, ವಿಲಕ್ಷಣ ಸಾರ್ವಜನಿಕ ದಾಖಲೆಗಳನ್ನು, ಯೆಲ್ಲೋ ವೆಸ್ಟ್ ರ ಹೋರಾಟ ಜನರ ಮಧ್ಯೆ ಕೊಂಡೊಯ್ಯುತ್ತಿದೆ.

ಈ ಬಾರಿಯ ಕ್ರಿಸ್ ಮಸ್ ಆಚರಣೆಯ ಸಂಭ್ರಮವನ್ನು ಅಧ್ಯಕ್ಷ ಮ್ಯಾಕ್ರಾನ್ ಆಡಳಿತ ಹಾಳುಗೆಡವಿತು ಎಂಬ ಜನರ ಆಕ್ರೋಶ, ಹೋರಾಟಗಾರರ ಜನಪ್ರಿಯತೆಯನ್ನು ಬಲಗೊಳಿಸುತ್ತಿದೆ. ನೀರಿನ ಫಿರಂಗಿಗಳ ಮೂಲಕ ಹಾಗೂ ಅಶ್ರು ವಾಯು ದಾಳಿಗಳಿಂದ ಜನರನ್ನು ರೊಚ್ಚಿಗೆಬ್ಬಿಸಿಲಾಗಿದೆ. ಅಂಗಡಿ ಮುಗ್ಗಟ್ಟು ಗಳು ಕ್ರಿಸ್ಮಸ್ ಸಮಯದಲ್ಲಿ ಮುಚ್ಚಲಾಗಿತ್ತು. ವಿಫರೀತ ಗಲಭೆಗಳು, ಇಡೀ ಪ್ಯಾರಿಸ್ ನ ಟ್ರಾಫಿಕ್ ಅನ್ನು ಕೂಡಾ ಅತಂತ್ರಗೊಳಿಸಿತು. "ಫ್ರಾನ್ಸ್ ಮಾರಾಟಕ್ಕಿಲ್ಲ" ಎಂಬ ಬ್ಯಾನರ್ ಎಲ್ಲೆಲ್ಲೂ ರಾರಾಜಿಸಿದೆ. ಹೊಸ ವರ್ಷಕ್ಕೆ ಕಾಲಿಡುವ ಆಚರಣೆಯು ಸ್ಥಗಿತಗೊಂಡಿತು. ಈ ಚಿತ್ರಗಳು ಜಗತ್ತಿನ ಮನೆ ಮನೆಗಳಲ್ಲಿ ಮಾಧ್ಯಮಗಳ ಮೂಲಕ ಹರಿದಾಡಿವೆ. ಜನರ ಆಶಯಗಳಿಗೆ ಕೊಡಲಿ ಪೆಟ್ಟು ನೀಡಿ ಆರ್ಥಿಕ ಮಿತವ್ಯಯ, ಹೇರಿ ತನ್ನ ಅಧಿಕಾರವನ್ನು ನವ-ಉದಾರವಾದ ನೀತಿಗಳ ಆರಾಧಕರ ಪರವಾಗಿ ಪರಿವರ್ತನೆ ಗೊಳಿಸುತ್ತಿರುವ ಮ್ಯಾಕ್ರಾನ್ ರಾಜೀನಾಮೆಗೆ ಒತ್ತಾಯ ದಿನದಿಂದ ದಿನಕ್ಕೆ ಹೆಚ್ಚು ಹೆಚ್ಚು ಹಬ್ಬುತ್ತಿದೆ.

ಇತ್ತೀಚಿನ ಒಂದು ಮಾಧ್ಯಮದ ಸ್ಯಾಂಪಲ್ ಸರ್ವೆಯ ಪ್ರಕಾರ, ಶೇ.60 ರಷ್ಟು ಜನಾಭಿಪ್ರಾಯ ಮ್ಯಾಕ್ರಾನ್ ವಿರುದ್ಧ ಮೂಡಿ ಬಂದಿದೆ. 2017 ರ ಜುಲೈನಲ್ಲಿ ಅಧ್ಯಕ್ಷ ರಾಗಿ ಇಷ್ಟು ಕಡಿಮೆ ಅವದಿಯಲ್ಲಿ ಯೇ ಅವರ ಜನಪ್ರಿಯತೆ ಕುಗ್ಗುವಿಕೆಗೆ ಅವರು ಅನುಸರಿಸುತ್ತಿರುವ ನವ ಉದಾರವಾದ ನೀತಿಗಳೇ ಕಾರಣವಾಗಿವೆ ಎಂಬ ಪ್ರತಿಭಟನೆಕಾರ ಕೂಗಿಗೆ ಫ್ರಾನ್ಸ್ ನಲ್ಲಿ ಸಿಕ್ಕಿರುವ ಬೆಂಬಲದ ಪರಿಣಾಮವಿದಾಗಿದೆ.



ಮಾತೆಂದರೆ ಇದು

"ಬಂಡವಾಳ ಶೇಖರಣೆಯಾಗುವ ಪ್ರಮಾಣದಲ್ಲಿ ಕಾರ್ಮಿಕನ ಪರಿಸ್ಥಿತಿ (ಆತನ ವೇತನ ಹೆಚ್ಚಿರಲಿ ಅಥವಾ ಕಡಿಮೆ ಇರಲಿ) ಕೆಡುತ್ತಾ ಹೋಗುತ್ತದೆ. ಕೈಗಾರಿಕಾ ಮೀಸಲು ಪಡೆ, ಮತ್ತು ಶೇಖರಣೆಯ ವಿಸ್ತಾರ ಮತ್ತು ಚೈತನ್ಯಗಳ ಜತೆ ಕೊನೆಗೂ ಸಮತೋಲನಗೊಳಿಸುವ ಈ ನಿಯಮ, ಗ್ರೀಕ್ ಪುರಾಣದ ಪ್ರಾಮಿತೀಯಸ್ ನನ್ನು ವಲ್ಕನ್ ನ ಬಂಡೆಗೆ ಜಡಿದಂತೆ, ಕಾರ್ಮಿಕನನ್ನು ಬಂಡವಾಳಕ್ಕೆ ಮೊಳೆ ಜಡಿದು ಕಟ್ಟಿ ಹಾಕುತ್ತದೆ. ಬಂಡವಾಳದ ಶೇಖರಣೆಗೆ ಸಂವಾದಿಯಾಗಿರುವ ಸಂಕಟಗಳ ಶೇಖರಣೆಯನ್ನೂ ಅದು ದೃಢಪಡಿಸುತ್ತದೆ. ಒಂದು ತುದಿಯಲ್ಲಿ ಸಂಪತ್ತಿನ ಶೇಖರಣೆ ಆಗುವುದರಿಂದಲೇ, ಅದೇ ಸಮಯದಲ್ಲಿ ಇನ್ನೊಂದು ತುದಿಯಲ್ಲಿ, ತನ್ನ ಉತ್ಪನ್ನವನ್ನು ಬಂಡವಾಳದ ರೂಪದಲ್ಲಿ ಉತ್ಪಾದಿಸುವ ವರ್ಗದ ತುದಿಯಲ್ಲಿ, ಸಂಕಟ, ಗುಲಾಮ ದುಡಿಮೆಯ ಬೇಗುದಿ, ಅಜ್ಞಾನ, ಕ್ರೌರ್ಯ, ಮಾನಸಿಕ ಅಧೋಗತಿಗಳ ಶೇಖರಣೆ ಆಗುತ್ತಿರುತ್ತದೆ."

ಕಾರ್ಲ್ ಮಾರ್ಕ್ಸ್
(ಬಂಡವಾಳ ಸಂಪುಟ-1)

JANASHAKTHI KANNADA VARA PATRIKE FEBRUARY 4-10, 2019 Price: Rs. 10/- Date of Publication: 1 FEBRUARY 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283


ಹೊಸಪೇಟೆ


ಮಂಗಳೂರು


ಮಂಗಳೂರು

ಟೀಮ್ ಇಂಡಿಯಾ'ದಿಂದ ರಾಜ್ಯಾದ್ಯಂತ ಹುತಾತ್ಮರ ದಿನಾಚರಣೆ
ನೂರಾರು ಗಾಂಧಿಯರ ನಡಿಗೆ, ಸೌಹಾರ್ದದ ಕಡೆಗೆ


ಗುಡಿಬಂಡೆ

ದೇಶವನ್ನು ಧರ್ಮಾಧಾರಿತ ದೇಶವನ್ನಾಗಿಸಬೇಕು, ಏಕ ಸಂಸ್ಕೃತಿ ಅಂಗೀಕರಿಸಬೇಕು ಎಂದು ಪ್ರಯತ್ನಿಸಿ ವಿಫಲವಾದ – ಗಾಂಧೀಜಿಯ ಕೊಲೆಯ ಕಾರಣಕ್ಕೆ ದೇಶದ ಮುಖ್ಯವಾಹಿನಿಯಿಂದ ದೂರವಾದ ಮತೀಯವಾದಿ ಶಕ್ತಿಗಳು ಇಂದು ಮತ್ತೆ ಗರಿಗೆದರಿ ಮೇಲೆದ್ದಿವೆ. ಸುಳ್ಳು, ದ್ವೇಷ, ಹಿಂಸೆಯ ಮೂಲಕ ಮೇಲುಗೈ ಸಾಧಿಸಲು ನೋಡುತ್ತಿವೆ. ಅದರ ಪರಿಣಾಮವಾಗಿ ದೇಶದ ಎಲ್ಲಾ ಕಡೆ ಅಸಹನೆ, ಅಪನಂಬಿಕೆಗಳು ಹರಡುತ್ತಿವೆ. ಇದು ಆಂತರಿಕಾಗಿ ದೇಶವನ್ನು ದುರ್ಬಲಗೊಳಿಸುತ್ತಿವೆ. ಧರ್ಮಾಧಾರಿತ ರಾಜಕಾರಣ ದೇಶದ ವರ್ತಮಾನ, ಭವಿಷ್ಯ ಎರಡನ್ನೂ ಅಪಾಯಕ್ಕೊಡುತ್ತಿವೆ. ಇದರ ಪರಿಣಾಮ ಈಗಾಗಲೇ ಗೋಚರವಾಗುತ್ತಿದ್ದು ಜನಸಾಮಾನ್ಯರ ದಿನನಿತ್ಯದ ಬದುಕಿನ ಸಂಕಟಗಳು, ಪ್ರಶ್ನೆಗಳು ಅಂಚಿಗೆ ತಳ್ಳಲ್ಪಟ್ಟು ಹುಸಿ ಭಾವುಕತೆ ಪ್ರಾಧಾನ್ಯ ಪಡೆಯುತ್ತಿವೆ.

ಅಂದು ಗಾಂಧಿಯನ್ನು ಕೊಂದ ಮತಾಂಧ ಶಕ್ತಿಗಳಿಗೆ ಈ ದೇಶದಲ್ಲಿ ಜಾಗವಿಲ್ಲ ಎಂದು ಸಾರಿ ಹೇಳಬೇಕಿದೆ. ಗಾಂಧೀಜಿ ಬಯಸಿದ ಸೌಹಾರ್ದತೆಯ, ಶಾಂತಿಯ, ಬಹುಧರ್ಮೀಯರ ಜಾತ್ಯಾತೀತ ಭಾರತವನ್ನು ಉಳಿಸಿಕೊಳ್ಳುತ್ತೇವೆ ಎಂದು ಗಟ್ಟಿ ಸ್ವರದಲ್ಲಿ ಘೋಷಿಸಬೇಕಿದೆ. ಈ ಹಿನ್ನೆಲೆಯಲ್ಲಿ ಈ ಬಾರಿಯ ಗಾಂಧಿ ಹುತಾತ್ಮ ದಿನದಂದು "ನೂರಾರು ಗಾಂಧಿಯರ ನಡಿಗೆ – ಸೌಹಾರ್ದದ ಕಡೆಗೆ" ಎಂಬ ಘೋಷಣೆಯೊಂದಿಗೆ ರಾಜ್ಯಾದ್ಯಂತ ಮೆರವಣಿಗೆಗಳ ಮೂಲಕ ಆಚರಿಸಲು, ಇತ್ತೀಚೆಗೆ ಸ್ಥಾಪಿತವಾದ ಸೌಹಾರ್ದ ಮನಸ್ಕ ಯುವಜನರ ತಂಡವಾದ "ಟೀಮ್ ಇಂಡಿಯಾ" ನಿರ್ಧರಿಸಿದೆ. ಅದರಂತೆ ರಾಜ್ಯದ ಮೂವತ್ತಕ್ಕೂ ಮೀರಿದ ಊರುಗಳಲ್ಲಿ ಸೌಹಾರ್ದ ನಡಿಗೆ ಕಾರ್ಯಕ್ರಮ ನಡೆದಿದೆ.

ಮಂಗಳೂರು ಮತ್ತು ಕೋಲಾರಗಳಿಂದ ಬಂದ ವರದಿ ಇಲ್ಲಿವೆ. ಇವಲ್ಲದೆ ಬೆಂಗಳೂರು, ಮೈಸೂರು, ಹೊಸಪೇಟೆ, ಕಲಬುರ್ಗಿ, ಕುಂದಾಪುರ, ಮಳವಳ್ಳಿ, ಸುಳ್ಯ, ಕವಿತಾಳ್ (ರಾಯಚೂರು), ಜಾಲಹಳ್ಳಿ (ದೇವದುರ್ಗ), ಹುಣಸೂರು, ಹಾಸನ, ಬಂಗಾರಪೇಟೆ, ಮುಳಬಾಗಲು, ಗೌರಿಬಿದನೂರು, ಗುಡಿಬಂಡೆ. ಬೆಳವಣಿಕೆ, ಸುರಪುರ, ಶಹಪುರ, ಹಟ್ಟಿ ಮುಂತಾದ ಕಡೆ ಸೌಹಾರ್ದ ನಡಿಗೆ ನಡೆದಿರುವ ಬಗ್ಗೆ ತಿಳಿದು ಬಂದಿದೆ.

ಮಂಗಳೂರು:

ಮಂಗಳೂರಿನಲ್ಲಿ ಜನವರಿ 30ರ ಸಾಯಂಕಾಲ ನಡೆದ ಕಾರ್ಯಕ್ರಮದಲ್ಲಿ ಪುರಭವನದ ಎದುರಿರುವ ಗಾಂಧಿ ಪ್ರತಿಮೆ ಬಳಿಯಿಂದ ಮೆರವಣಿಗೆಯಲ್ಲಿ ಗಾಂಧಿ ಮುಖವಾಡ ಧರಿಸಿದ ನೂರಾರು ಸಾರ್ವಜನಿಕರು ಸೌಹಾರ್ದತೆಯ ಘೋಷಣೆ ಕೂಗುತ್ತಾ ಜಿಲ್ಲಾಧಿಕಾರಿ ಕಚೇರಿವರೆಗೆ ಸಾಗಿ ಸೌಹಾರ್ದ ಸಮಾವೇಶ ನಡೆಸಿದರು. ಗಾಂಧೀಜಿ ವೇಷ ತೊಟ್ಟು ಕೋಲೂರುತ್ತಾ ನಡೆದ ಇಬ್ಬರು ಬಾಲಕರು ಈ ಮೆರವಣಿಗೆಯ ಆಕರ್ಷಣೆಯಾಗಿದ್ದರು.


ಕೋಲಾರ

ಸಭೆಯನ್ನುದ್ದೇಶಿಸಿ ಮಾತನಾಡಿದ 'ಟೀಮ್ ಇಂಡಿಯಾ' ರಾಜ್ಯ ಸಂಚಾಲಕ ಹಾಗೂ ಡಿವೈಎಫ್ಐ ರಾಜ್ಯ ಸಮಿತಿ ಅಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, ಗಾಂಧಿಯನ್ನು ಹತ್ಯೆ ಮಾಡಿದವರ ಪೀಳಿಗೆಯವರು ಈಗ ವ್ಯವಸ್ಥಿತವಾಗಿ ದೇಶದಲ್ಲಿ ತಮ್ಮ ಚಿಂತನೆಗಳನ್ನು ಬಿತ್ತುತ್ತಿದ್ದಾರೆ. ವ್ಯಕ್ತಿ ಕೇಂದ್ರಿತ ಸಂಘಟನೆಗಳನ್ನು ಕಟ್ಟಿಕೊಂಡು ಅದನ್ನೇ ದೇಶಪ್ರೇಮಿ ಎಂದು ಬಿಂಬಿಸುತ್ತಿರುವುದು ಅಪಾಯಕಾರಿಯಾದ ನಡೆಯಾಗಿದೆ. ದೇಶ ಎಂದರೆ ಒಬ್ಬ ವ್ಯಕ್ತಿಯಲ್ಲ. ಎಲ್ಲ ಜನಸಮುದಾಯಗಳನ್ನೂ ಒಳಗೊಂಡು ಮುನ್ನಡೆದರೆ ದೇಶಪ್ರೇಮ ಬಿತ್ತಲು ಸಾಧ್ಯ.

"ಇವತ್ತು ಗಾಂಧೀಜಿಯನ್ನು ಖಳನಾಯಕನಾಗಿಸುವಂಥ, ಗೋಡ್ಸೆಯನ್ನು ಆರಾಧಿಸುವಂಥ ವಾತಾವರಣ ಇದೆ. ಇದು ವಿಷಾದದ ಸಂಗತಿ. ಇದರ ಹಿಂದೆ ವ್ಯವಸ್ಥಿತವಾದ ರಾಜಕಾರಣ ಇದೆ. ಧರ್ಮದ ಉತ್ಪಾದವನ್ನು ಹೆಚ್ಚಿಸುವ ಪ್ರಯತ್ನ ಇದೆ. ಇಂಥ ವಿಚಾರವನ್ನು ಹಿಮ್ಮೆಟ್ಟಿಸಬೇಕಾಗಿದೆ. ಗಾಂಧೀಜಿಯ ವಿಚಾರಗಳಲ್ಲಿ ಅನೇಕವಕ್ಕೆ ಸಹಮತ


ಜಾಲಹಳ್ಳಿ, ದೇವದುರ್ಗ

ಇರಲಿಕ್ಕಿಲ್ಲ. ಆದರೆ ಸೌಹಾರ್ದದ ಬಗ್ಗೆ ಅವರ ದೃಢ ನಿಶ್ಚಯ ಮತ್ತು ಕಾರ್ಯಾಚಾರಣೆಯನ್ನು ಎಲ್ಲರೂ ಒಪ್ಪಲೇಬೇಕಾಗಿದೆ. "ಹೇರಾಮ್" ಎಂಬ ಗಾಂಧೀಜಿಯ ಕೊನೆಯ ಮಾತು ನಮ್ಮೆಲ್ಲರ ಆಕ್ರಂಧನವೂ ಆಗಬೇಕು" ಎಂದು ಮುನೀರ್ ಕಾಟಿಪಳ್ಳ ನುಡಿದರು.

ಸಾಮಾಜಿಕ ಚಿಂತಕ ಎಂ.ಜಿ.ಹೆಗಡೆ ಸಮಾವೇಶದ ಉದ್ಘಾಟನೆಯ ಮಾತುಗಳನ್ನಾಡಿದರು. ದಲಿತ ಸಂಘಟನೆಯ ಹಿರಿಯ ಮುಖಂಡ ಎಂ.ದೇವದಾಸ್, ಹಿರಿಯ ನ್ಯಾಯವಾದಿ ಯಶವಂತ ಮರೋಳಿ, ಡಿವೈಎಫ್ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಮಾಜಿ ಉಪಮೇಯರ್ ಕಾಂಗ್ರೆಸಿನ ಪುರುಷೋತ್ತಮ ಚಿತ್ರಾಪುರ, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾಧ್ಯಕ್ಷೆ ಜಯಂತಿ ಶೆಟ್ಟಿ, ಸಮುದಾಯ ಸಂಘಟನೆಯ ವಾಸುದೇವ ಉಚ್ಚಿಲ ವೇದಿಕೆಯ ಮೇಲಿದ್ದರು.


ಮಳವಳ್ಳಿ

ಸೌಹಾರ್ದ ನಡಿಗೆಗೂ ಮೊದಲು ಗಾಂಧೀಜಿ ಪ್ರತಿಮೆಗೆ ಹಾರಾರ್ಪಣೆಯನ್ನು ಎಂ.ಜಿ.ಹೆಗಡೆ ಮತ್ತಿತರ ಗಣ್ಯರು ನಡೆಸಿದರು. ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್ ಸ್ವಾಗತಿಸಿದರು. ಮನೋಜ್ ವಾಮಂಜೂರು ವಂದಿಸಿದರು.

– ವಾಸುದೇವ ಉಚ್ಚಿಲ್

ಕೋಲಾರ :

ನಗರದ ಗಾಂಧಿವನದಿಂದ ನಚಿಕೇತ ನಿಲಯದ ವರೆಗೂ ಮಹಾತ್ಮ ಗಾಂಧಿ ಹುತಾತ್ಮ ದಿನದ ಅಂಗವಾಗಿ ಸೌಹಾರ್ದತೆಗಾಗಿ ಕೋಲಾರ ಭಾಗವಾಗಿ ನೂರಾರು ಗಾಂಧಿಯರ ನಡಿಗೆ ಸೌಹಾರ್ದತೆಯ ಕಡೆಗೆ ಎನ್ನುವ ಘೋಷಣೆಯೊಂದಿಗಿನ ಮೌನ ಮೆರವಣಿಗೆಗೆ ಚಾಲನೆ ನೀಡಿ ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಗಾಂಧಿನಗರ ನಾರಾಯಣಸ್ವಾಮಿ ಮಾತನಾಡಿದರು. ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ನೇತೃತ್ವ ನೀಡಿ ಸೌಹಾರ್ದತೆಯ ಜಾತ್ಯಾತೀತ ಭಾರತಕ್ಕಾಗಿ ಹಂಬಲಿಸಿದ ರಾಷ್ಟ್ರಪಿತ ಮಹಾತ್ಮಾ ಗಾಂಧಿಯನ್ನು ಮತಾಂತರ ಗುಂಡಿಗೆ ಬಲಿಯಾದರು .ಇದು ನಮ್ಮ ದೇಶದ ಭಾರತೀಯ ಪಾಲಿಗೆ ನೋವಿನ ದಿನವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು. ಗಾಂಧಿಯವರು ತ್ಯಾಗ ಬದ್ದತೆಯಿಂದ ಭಾರತ ಐಕ್ಯತೆಯನ್ನು ಮುನ್ನಡೆಸಿದರು. ಕೋಮುವಾದ ನಾಶವಾಗಿ ಸೌಹಾರ್ದತೆ ಬರಬೇಕು, ಎಂದರು.

ಕಾರ್ಮಿಕ ಮುಖಂಡ ಪಿ ಶ್ರೀನಿವಾಸ್ ಮಾತನಾಡಿ ದೇಶದಲ್ಲಿ ಸುಳ್ಳು ದ್ವೇಷ ಹಿಂಸೆಯ ಮೂಲಕ ಮೇಲುಗೈ ಸಾಧಿಸಲು ಹೊರಟಿದ್ದು ಅದರ ಪರಿಣಾಮವಾಗಿ ಎಲ್ಲಾ ಕಡೆ ಅಸಹನೆ ಅಪನಂಬಿಕೆಗಳು ಹರಡುತ್ತಿದೆ. ಅಂತರಿಕ ಪ್ರಜಾಪ್ರಭುತ್ವವನ್ನು ದುರ್ಬಲ ಗೊಳಿಸಿ ದೇಶದ ಭವಿಷ್ಯವನ್ನು ಅಪಾಯದ ಸ್ಥಿತಿಗೆ ತಂದಿದ್ದಾರೆ ಎಂದರು.

ಜನವಾದಿ ಮಹಿಳಾ ಸಂಘಟನೆ ರಾಜ್ಯ ಅಧ್ಯಕ್ಷೆ ವಿ.ಗೀತಾ ಮಾತನಾಡಿ ಗಾಂಧೀಜಿ ಬಯಸಿದ್ದ ಸೌಹಾರ್ದತೆ, ಶಾಂತಿ, ಜಾತ್ಯಾತೀತ ಆಲೋಚನೆಗಳನ್ನು ಉಳಿಸಲು ಗಟ್ಟಿಧ್ವನಿಯಲ್ಲಿ ಮಾತನಾಡಬೇಕಾಗಿದೆ. ಅದರ ಭಾಗವಾಗಿ ಇಡೀ ದೇಶದ ಮೂಲೆ ಮೂಲೆಗಳಲ್ಲಿ ಇಂತಹ ಮೌನ ಮೆರವಣಿಗೆಗಳು ನಡೆಯುತ್ತಾ ಇವೆ ಎಂದರು.

ಮೆರವಣಿಗೆಗೂ ಮುನ್ನ ಗಾಂಧಿ ಪ್ರತಿಭೆಗೆ ಮಾಲಾರ್ಪಣೆ ಮಾಡಿ ಚಾಲನೆ ನೀಡಲಾಯಿತು. ಇದರ ನೇತೃತ್ವವನ್ನು ಕೆಪಿಆರ್ ಎಸ್ ಜಿಲ್ಲಾ ಕಾರ್ಯದರ್ಶಿ ಟಿ.ಎಂ ವೆಂಕಟೇಶ್, ಪ್ರಗತಿಪರ ಸಂಘಟನೆಗಳ ಮುಖಂಡರಾದ ಪಾತಕೋಟ ನವೀನ್ ಕುಮಾರ್, ವಿಜಯಕೃಷ್ಣ, ಆಶಾ ಭೀಮರಾಜ್, ವಾಸುದೇವಾರೆಡ್ಡಿ, ವಿಜಿಯ್ ಕುಮಾರಿ, ಮಂಜುಳ ಮುಂತಾದವರು ಮೆರವಣಿಗೆಯಲ್ಲಿ ವಹಿಸಿದ್ದರು.

– ಸಿ.ಅಮರೇಶ್

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**